KARKAN21343/10/1/2011/05-TC

A Quarterly Education and Research Journal

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

**SHIKSHAN SOUDHA**

Volume : 1, Issue : 1,
Pages : 52 , 7th June 2011,
Price : Rs. 75/-

ವಾರ್ಷಿಕ ಚಂದಾ ರೂ.೩೦೦/-
**Annual Subscription : Rs. 300/-**



**ಪ್ರಥಮ ಪತ್ರಿಕೆ**

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

ಜೂನ್ 2011 ಸಂಪುಟ : 1 ಸಂಚಿಕೆ : 1

ಪ್ರಕಾಶಕರು :

ಜಯದೇವ ಮೈ. ಮೆಣಸಗಿ



ಸಂಪಾದಕರು :

ಡಾ. ಎನ್. ಬಿ. ಕೊಂಗವಾಡ

ಸಹಸಂಪಾದಕರು :

ಡಾ. ಎಸ್. ಬಿ. ಯಾದವಾಡ

ಸಂಪಾದಕ ಮಂಡಳಿ :

- ಡಾ. ಶ್ರೀಮತಿ ಎನ್. ಲಕ್ಷ್ಮೀ
  ಡೀನ್ ಶಿಕ್ಷಣ ನಿಖಾಯ ಕರಾಮುವಿ, ಮೈಸೂರು.
- ಡಾ. ಎಸ್. ಎಸ್. ಪಾಟೀಲ
  ಡೀನ್ ಶಿಕ್ಷಣ ನಿಖಾಯ ಕುವೆಂಪು ವಿ.ವಿ. ಶಿವಮೊಗ್ಗ
- ಡಾ. ಜೆ. ಜಿ. ರೊಡ್ಡಣ್ಣವರ
  ಕ.ವಿ.ವಿ. ಶಿಕ್ಷಣ ಮಹಾವಿದ್ಯಾಲಯ, ಧಾರವಾಡ
- ಡಾ. ಎ. ವ್ಹಿ. ಬೊಮಗೊಂಡ
  ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಬಿಜಾಪೂರ
- ಡಾ. ಶ್ರೀಮತಿ ಶೋಭಾ ನಾಯ್ಕರ
  ಡಯಟ್, ಧಾರವಾಡ.
- ಡಾ. ಬಿ. ಎಲ್. ಲಕ್ಕಣ್ಣವರ
  ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯ, ಬಿಜಾಪೂರ



## ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
ವಿದ್ಯಾನಿಧಿ ಪ್ರಕಾಶನ
ಸ್ಟೇಶನ್ ರೋಡ, ಮಹೇಂದ್ರಕರ ಸರ್ಕಲ್ ಹತ್ತಿರ
ಗದಗ – 582101. ಕರ್ನಾಟಕ ರಾಜ್ಯ
ಫೋನ್ : 08372–237527
email : shikshansoudha@gmail.com


The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor dooes SHIKSHAN SOUDHA subscribe to these views in no way. All disputes are subject to the jurisdiction of Gadag court only.

ಶಿಕ್ಷಣ ಸೌಧ

# ಅಂತರಂಗ
# Inside

## ಲೇಖನಗಳು (Articles)


3 ಶಿಕ್ಷಣದ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯೊಬ್ಬ ಭಾಗಿದಾರ – ಪ್ರೊ. ಎಸ್. ಬಿ. ದಳವಾಯಿ

7 ಶಿಕ್ಷಣದಲ್ಲಿ ನಾಯಕತ್ವ – ಡಾ. ಬಿ. ಸಿ. ಪಾಟೀಲ

9 ಕುಟುಂಬ ಮತ್ತು ಶಿಕ್ಷಣ – ಡಾ. ಶೋಭಾ ನಾಯ್ಕರ

12 ಜಾಗತೀಕರಣದ ಜಗತ್ತಿನಲ್ಲಿ ಶಿಕ್ಷಣ – ಡಾ. ಎ. ವಿ. ಕರಬಸನಗೌಡ್ರ

15 ಸಂವೇದನೆ – ಎಸ್. ಎಸ್. ಹೂಗಾರ

20 ಅಂತರರ್ಜಾಲ – ಸುಮಂಗಲಾ ಎಸ್. ಆಯಟ್ಟಿ

22 ಗ್ಯಾಗ್ನೆಯವರ ಸಂಚಿತ ಕಲಿಕೆಯ ಮಾದರಿ – ರೂಪಾ ಮ. ದೊಡಭಂಗಿ

24 ಸಮುದಾಯ ಮತ್ತು ಶಿಕ್ಷಣ – ಡಾ. ಎನ್. ಬಿ. ಕೊಂಗವಾಡ

26 ಗುಣಾತ್ಮಕ ಶಾಲಾ ಶಿಕ್ಷಣ – ಸಿ. ವ್ಹಿ. ಹಿರೇಮಠ


## ಸಂಶೋಧನೆಗಳು (Research Articles)


29 ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮದಲ್ಲಿ ಮಹಿಳಾ ಸಬಲೀಕರಣದ ಪ್ರಯತ್ನ – ವರದರಾಜು ಎಸ್. ಪಾಟೀಲ ಎಸ್.ಎಸ್.

34 ಬಿಜಾಪೂರ ಆದಿಲ್‌ಶಾಹಿಗಳ ಕಾಲದ ಕೆರೆ ಬಾವಿಗಳ ನೀರಾವರಿ ವ್ಯವಸ್ಥೆ – ಶ್ರೀಮತಿ ಜಿ. ಗುಂಡೂರಾವ್

40 ಕರ್ನಾಟಕದ ವಾಸ್ತುಶಿಲ್ಪ ಕಲೆಯಲ್ಲಿ ಕೊಪ್ಪಳ ಜಿಲ್ಲೆ 'ಪುರ'ದ ಶಾಸನಗಳು ಹಾಗೂ ವಾಸ್ತುಶಿಲ್ಪದ ವೈಶಿಷ್ಟ್ಯತೆಗಳು – ಎಸ್. ಕೆ. ಮೇಲಕಾರ


## ಶಿಕ್ಷಣ ತಜ್ಞರು (Educationists)


44 ಅರವಿಂದ ಘೋಷ – ಕುಮಾರಸ್ವಾಮಿ ಎಸ್. ಹಿರೇಮಠ

# ಸಂಪಾದಕೀಯ

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಯೊಬ್ಬರೂ ವಿದ್ಯಾವಂತರಾಗುವದು ಅವಶ್ಯಕ. ಪ್ರಸ್ತುತ ಸನ್ನಿವೇಶದಲ್ಲಿ ಹೆಚ್ಚಿನ ಜ್ಞಾನ ಪಡೆದುಕೊಳ್ಳುವುದು ಅತ್ಯವಶ್ಯಕವಾಗಿದೆ. ಜ್ಞಾನವು ಪ್ರಗತಿಗೆ ನಾಂದಿ ಹಾಡುವುದು. ಜ್ಞಾನಾರ್ಜನೆಯಿಂದ ವಿಕಾಸ ಉಂಟಾಗುವದು. ಪ್ರಾಚೀನ ಮಾನವ ಹಸಿಮಾಂಸವನ್ನು ಹಾಗೆಯೇ ತಿನ್ನುತ್ತಿದ್ದನು. ಮಾನವ ಮಾಂಸ ಬೇಯಿಸಿ ತಿಂದು ರುಚಿಯಾಗಿರುವದನ್ನು ತಿಳಿದುಕೊಂಡನು. ಅದೇ ರೀತಿ ಎಲೆ, ರೆಂಬೆ ಕೊಂಬೆಗಳ ಚಲನೆಯಿಂದ ಈ ಜ್ಞಾನವನ್ನು ತಿರುಗುವ ಚಕ್ರಕ್ಕೆ ಅನ್ವಯಿಸಿದನು. ಅದನ್ನು ತನ್ನ ಜೀವನದಲ್ಲಿ ಪ್ರತಿಯೊಂದು ಹಂತದಲ್ಲಿ ಪಡೆದ ಜ್ಞಾನಾನುಭವಗಳ ಮಿಶ್ರಣದಿಂದ ಹೊಸ ಜ್ಞಾನ ಪಡೆಯುವಂತಾಯಿತು. ಇದರ ಫಲವೇ ಇಂದಿನ ನಾಗರಿಕ ಸಮಾಜ.

ಸಂಶೋಧನೆ ಎನ್ನುವುದು ಕೇವಲ ಒಂದು ಕ್ಷೇತ್ರಕ್ಕೆ ಸೀಮಿತವಾಗಿಲ್ಲ, ನಿತ್ಯ ಜೀವನದ ವಿವಿಧ ಕ್ಷೇತ್ರಗಳಿಗೆ ವಿಸ್ತರಿಸಿದೆ. ಪ್ರಾಚೀನ ಶಿಕ್ಷಣ ಪದ್ಧತಿ ಕ್ರಮಗಳು ಬದಲಾಗುತ್ತಾ ಇಂದು ಅನೇಕ ನವನವೀನ ವೈಜ್ಞಾನಿಕ ವಿಧಾನಗಳು ಬೆಳಕಿಗೆ ಬಂದಿವೆ. ಪ್ರಚಲಿತ ಜನಾಂಗದ ಮನಸ್ಥಿತಿಯನ್ನರಿತು ವಿಧವಿಧವಾದ ಬೋಧನಾ ಪದ್ಧತಿಗಳು ಜಾರಿಯಲ್ಲಿವೆ . ಇಂದಿನ ಪರಿಸರದ ಅವಶ್ಯಕತೆ ಹಾಗೂ ಬೇಡಿಕೆಗೆ ಅನುಗುಣವಾಗಿ ಪಠ್ಯಕ್ರಮ ಪಠ್ಯಪುಸ್ತಕಗಳನ್ನು ಪರಿಷ್ಕರಿಸುತ್ತಾ ಬರಲಾಗಿದೆ. ಈ ಎಲ್ಲಾ ಅಂಶಗಳಿಗೂ ಕಾರಣ ಸಂಶೋಧನೆ ಕಾಲಕಾಲಕ್ಕೆ ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ನಡೆಸಿದ ಸಂಶೋಧನೆಗಳಿಂದ ಆ ಕ್ಷೇತ್ರದ ಸಮಸ್ಯೆಯನ್ನು ಗುರುತಿಸಿ, ಅದಕ್ಕೆ ಪರಿಹಾರ ಕಂಡುಕೊಳ್ಳಲು ಸಹಾಯಕವಾಗಿದೆ. ಇದರಿಂದ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ ಆದ್ದರಿಂದಲೇ ಸಂಶೋಧನೆ ಎನ್ನುವದು ವಿಕಾಸದ ಮೂಲ.

ಈ ಸಂಶೋಧನೆಯ ಫಲಗಳನ್ನು ಕನ್ನಡದಲ್ಲಿ ಶಿಕ್ಷಣ ಪ್ರೇಮಿಗಳಿಗೆ ಶಿಕ್ಷಣ ಯೋಜನಾಧಿಕಾರಿಗಳಿಗೆ ಶಿಕ್ಷಣ ಕಾರ್ಯಕರ್ತರಿಗೆ ತಲುಪಿಸುವ ಕೆಲಸ ಆಗುತ್ತಿಲ್ಲ. ಅದಕ್ಕೆ ಕಾರಣ ಶಿಕ್ಷಣ ಕ್ಷೇತ್ರ ಹಾಗೂ ಸಂಶೋಧನೆಗೆ ಮೀಸಲಾಗಿರುವ ಪತ್ರಿಕೆಯ ಕೊರತೆ. ಆ ಕೊರತೆಯನ್ನು ನೀಗಿಸುವುದರ ಸಲುವಾಗಿ 'ಶಿಕ್ಷಣ ಸೌಧ' ಎಂಬ ಪತ್ರಿಕೆಯು 44 ವರ್ಷಗಳಿಂದ ಕನ್ನಡ ಸಾರಸ್ವತ ಲೋಕಕ್ಕೆ ಕಲೆ, ವಾಣಿಜ್ಯ, ಶಿಕ್ಷಣ, ಕಾನೂನು, ಸಾಹಿತ್ಯ ಮತ್ತು ಸಂಪಾದನೆಗೆ ಸಂಬಂಧಿಸಿದಂತೆ 2000 ಪುಸ್ತಕಗಳನ್ನು ಪ್ರಕಟಿಸಿ ಪ್ರಖ್ಯಾತಿಯನ್ನು ಪಡೆದಿರುವ ಗದುಗಿನ ವಿದ್ಯಾನಿಧಿ ಪ್ರಕಾಶನದ ಅಡಿಯಲ್ಲಿ ಪ್ರಕಟಗೊಳ್ಳುತ್ತಿದೆ. ಈ ಪತ್ರಿಕೆಯು ಶಿಕ್ಷಣಾಸಕ್ತರಿಗೆ ಹಾಗೂ ಶಿಕ್ಷಕರಿಗೆ ಸಂಜೀವಿನಿಯಾಗುವುದರಲ್ಲಿ ಯಾವುದೇ ಸಂದೇಹ ಇಲ್ಲ, ಇದರ ಲಾಭವನ್ನು ಎಲ್ಲರೂ ಪಡೆದುಕೊಳ್ಳುವರೆಂದು ಭಾವಿಸಿರುವೆನು. ಆ ದಿಸೆಯಲ್ಲಿ ಅನೇಕ ಶಿಕ್ಷಣ ತಜ್ಞರ ಹಾಗೂ ಪ್ರಕಾಶಕರ ಪ್ರಯತ್ನದ ಫಲವೇ ನಿಮ್ಮ ಕೈಗೆ ಸೇರಿದ ಶಿಕ್ಷಣ ಸೌಧ ಪತ್ರಿಕೆ.

**ಡಾ. ಎನ್. ಬಿ. ಕೊಂಗವಾಡ**

ಸಂಪಾದಕರು

# ಶಿಕ್ಷಣದ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯೊಬ್ಬ ಭಾಗಿದಾರ

## (STUDENT AS A STAKE HOLDER IN THE PROCESS OF EDUCATION)

**ಪೀಠಿಕೆ** (Introduction)

**"ರಾಷ್ಟ್ರದ ಭವಿಷ್ಯ ಶಿಕ್ಷಣವನ್ನು ಅವಲಂಬಿಸಿದ್ದು ಅದು ಇಂದಿನ ತರಗತಿಯ ಕೋಣೆಗಳಲ್ಲಿ ರೂಪಿಸಲ್ಪಡುತ್ತಿದೆ".**

**– ಡಾ. ಡಿ. ಎಸ್. ಕೊಠಾರಿ ಶಿಕ್ಷಣ ಆಯೋಗ**

ಸ್ವತಂತ್ರ ಭಾರತದ ಶಿಕ್ಷಣ ಆಯೋಗಗಳಲ್ಲಿ ಪ್ರಮುಖವಾದ 1964–66ರ ಡಾ. ಡಿ. ಎಸ್. ಕೊಠಾರಿ ಇವರ ನೇತೃತ್ವದ ಭಾರತೀಯ ಶಿಕ್ಷಣ ಆಯೋಗದ ಈ ಹೇಳಿಕೆಯು ಶಿಕ್ಷಣದ ಮಹತ್ವವನ್ನು ಸೂಚಿಸುತ್ತದೆ. ಈ ಕಾರಣದಿಂದಲೇ ಇಂದು ಶಿಕ್ಷಣವನ್ನು ಸಂವಿಧಾನಾತ್ಮಕವಾಗಿ ಒಪ್ಪಿಕೊಂಡು 45ನೆಯ ವಿಧಿಯ ಮೂಲಕ ಉಚಿತ, ಕಡ್ಡಾಯ ಹಾಗೂ ಸಾರ್ವತ್ರಿಕವಾಗಿ ಮಾಡಲಾಗಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಕೋಟ್ಯಾಂತರ ರೂಪಾಯಿ ಹಣವನ್ನು ಶಿಕ್ಷಣಕ್ಕಾಗಿ ವಿನಿಯೋಗಿಸಲಾಗುತ್ತಿದೆ. ಇಷ್ಟಾದರೂ ಸಹಿತ ನಮ್ಮ ದೇಶದ ಸಾಕ್ಷರತಾ ಪ್ರಮಾಣ ಶೇ. 65 ದಾಟಿಲ್ಲ. ಗುಣಮಟ್ಟದಲ್ಲಿ ಸಮತೋಲನವನ್ನು ಕಾಯ್ದುಕೊಳ್ಳಲಾಗಿಲ್ಲ. ಇದಕ್ಕೆ ಕಾರಣವೇನೆಂದರೆ ಶಿಕ್ಷಣದ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಪಾಲುದಾರರಾಗಬೇಕಾಗಿರುವ ಶಿಕ್ಷಕರು, ಸರಕಾರ, ಪಾಲಕರು, ವಿದ್ಯಾರ್ಥಿಗಳು, ಶಿಕ್ಷಣ ತಜ್ಞರು, ಪಠ್ಯಕ್ರಮ ರಚನಾಕಾರರು ತಮ್ಮ ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸದೇ ಇರುವದು. ಇವರೆಲ್ಲರೂ ಶಿಕ್ಷಣದ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸದೇ ಹಿಂದೆ ಸರಿಯುತ್ತಿರುವರು. ಇದರಿಂದಾಗಿ ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದ ಹಂತದವರೆಗೆ ಗುಣಮಟ್ಟ ಕಳಪೆಯಾಗುತ್ತ ಈ ಪ್ರಕ್ರಿಯೆ ಕುಂಟುತ್ತ ಎಡವುತ್ತ ಸಾಗಿ ಎಲ್ಲರ ನಿಂದನೆಗೆ ಗುರಿಯಾಗಿದೆ. ಈ ದಿಶೆಯತ್ತ ನಾವೆಲ್ಲರೂ ಯೋಚಿಸಿ ನಮ್ಮ ನಮ್ಮ ಜವಾಬ್ದಾರಿ ಕರ್ತವ್ಯಗಳನ್ನು ಅರಿತುಕೊಳ್ಳಬೇಕಾಗಿದೆ. ಶಿಕ್ಷಣದ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯ ಭಾಗತ್ವವು ಅತಿ ಪ್ರಮುಖವಾಗಿದ್ದು ಈ ಕುರಿತು ನಾವೆಲ್ಲರೂ ಚಿಂತಿಸುವುದು ಅತಿ ಅವಶ್ಯಕವಾಗಿದೆ.

**ವಿದ್ಯಾರ್ಥಿ ಒಬ್ಬ ಭಾಗಿದಾರ** (Student as a stake holder)

**"ಓದದೇ ಪಾಸಾಗಬೇಕೆಂಬ ವಿದ್ಯಾರ್ಥಿ, ಹೇಗಾದರೂ ಪಾಸಾಗಲಿ ಎನ್ನುವ ತಂದೆ–ತಾಯಿ, ಪಾಸು ಮಾಡಿದರಾಯ್ತು ಕಲಿಸುವದೇಕೆ? ಎನ್ನುವ ಶಿಕ್ಷಕ ಯೋಜನೆಯಂತೆ ಅಂಕಿ ಸಂಖ್ಯೆ ದೊರೆತರೆ ಸಾಕೆನ್ನುವ ಸರಕಾರ, ಫಲಿತಾಂಶದಿಂದಲೇ ಮಟ್ಟವನ್ನು ಅಳೆಯುವ ಇಲಾಖೆ, ಹೀಗೆ ಗುಣಮಟ್ಟಕ್ಕಿಂತ ಗಾತ್ರಕ್ಕೆ ಪ್ರಾಧಾನ್ಯತೆ ಕೊಡುತ್ತ ಹೋದರೆ ಎಂತು ಕಟ್ಟುವದಯ್ಯ ಈ ಭವ್ಯ ಭಾರತವ ?"**

ಈ ಮೇಲಿನ ನಾಲ್ಕಾರು ಸಾಲುಗಳನ್ನು ಗಮನಿಸಿದರೆ ಇಂದು ನಾವು ಎಂತಹ ಶಿಕ್ಷಣವನ್ನು ನಮ್ಮ ಮಕ್ಕಳಿಗೆ ಕೊಡುತ್ತಿದ್ದೇವೆ ಎಂಬುದರ ಅರಿವು ಆಗುತ್ತದೆ. ಶಿಕ್ಷಣದ ಮುಖ್ಯಗುರಿ ಮಕ್ಕಳ ಸರ್ವತೋಮುಖ ವ್ಯಕ್ತಿತ್ವ ವಿಕಾಸ.

**"ನನ್ನ ಪ್ರಕಾರ ಶಿಕ್ಷಣವೆಂದರೆ ಮಗು ಮತ್ತು ಮನುಷ್ಯನಲ್ಲಿರುವ ದೈಹಿಕ, ಬೌದ್ಧಿಕ, ಸಾಮಾಜಿಕ, ಆಧ್ಯಾತ್ಮಿಕ ಅತ್ಯುತ್ತಮ ಅಂಶಗಳನ್ನು ಸರ್ವತೋಮುಖವಾಗಿ ಹೊರಗೆಳೆಯುವದು" – ಗಾಂಧೀಜಿ**

**"ಮಕ್ಕಳಲ್ಲಿ ಅಡಗಿರುವ ದೈವಿಕ ಅಂಶಗಳ ಪ್ರಕಟಣೆಯೇ ಶಿಕ್ಷಣ"**

**– ಸ್ವಾಮಿ ವಿವೇಕಾನಂದರು**

**"ಇಂದಿನ ಮಕ್ಕಳೇ ನಾಳಿನ ನಾಗರಿಕರಾಗಿದ್ದು ಅವರುಗಳೇ ರಾಷ್ಟ್ರದ ಸಜೀವ ಸಂಪತ್ತು". – ಡಾ. ಎಸ್. ರಾಧಾಕೃಷ್ಣನ್**

ಈ ಮೇಲಿನ ಹೇಳಿಕೆಗಳನ್ನು ಗಮನಿಸಿದಾಗ ಶಿಕ್ಷಣ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳೂ ಸಹಿತ ಪ್ರಮುಖ ಭಾಗಿದಾರರಾಗಿದ್ದಾರೆ. ಶಿಕ್ಷಣ ಎಂಬ ಕಟ್ಟಡವು ನಿರ್ಮಾಣವಾಗುವದು ವಿದ್ಯಾರ್ಥಿಗಳು ಎಂಬ ಅಡಿಗಲ್ಲಿನಿಂದ. ಇಂದು ಶಿಕ್ಷಕರ ಪಾತ್ರವೂ ಬದಲಾಗಿದೆ, ಅವರು ಒಬ್ಬ ಮಾರ್ಗ ದರ್ಶಿಯಾಗಿ, ಸ್ನೇಹಿತನಾಗಿ, ತತ್ವಜ್ಞಾನಿಯಾಗಿ ವಿದ್ಯಾರ್ಥಿಯೊಂದಿಗೆ ಸಹಕರಿಸಬೇಕಾಗಿದೆ. ವಿದ್ಯಾರ್ಥಿಗಳನ್ನು ಕಲಿಕೆಯತ್ತ ಹುರಿದುಂಬಿಸ ಬೇಕಾಗಿದೆ. ಈ ಸಂದರ್ಭದಲ್ಲಿ ಶ್ರೀ ಅರಬಿಂದೋ ಘೋಷ್‌ರ ಹೇಳಿಕೆಯನ್ನು ಸ್ಮರಿಸಬಹುದಾಗಿದೆ.

"Nothing can be taught, it should be learnt"

ಈ ರೀತಿಯಾಗಿ ಬೋಧನೆ ಎಂಬುದು ಯಾಂತ್ರಿಕ ಕ್ರಿಯೆಯಾಗಿರದೆ ಕ್ರಿಯಾಶೀಲ ವಿದ್ಯಾರ್ಥಿ ಪರಿಣಾಮಕಾರಿ ಬೋಧನೆಗೆ ಪ್ರೇರಣೆಯಾಗಿದ್ದಾನೆ.

ವಿದ್ಯಾರ್ಥಿ, ಶಿಕ್ಷಕರು, ಸಂಸ್ಥೆಯ ಮುಖ್ಯಸ್ಥರು, ಪಾಲಕರು ಮತ್ತು ಸಾರ್ವಜನಿಕರು, ಆಡಳಿತ ಮಂಡಳಿ, ಶಿಕ್ಷಣ ವ್ಯವಸ್ಥೆಯ ಆಧಾರ ಸ್ತಂಭಗಳಾಗಿದ್ದಾರೆ. ಇವರು ಪಾಲುದಾರರಾಗಿಯೂ ಫಲಾನುಭವಿಗಳಾಗಿಯೂ ದ್ವಿಮುಖ ಪಾತ್ರವಹಿಸುತ್ತಾ ಬಂದಿದ್ದಾರೆ. ಇವರುಗಳಲ್ಲಿ ವಿದ್ಯಾರ್ಥಿಯು ಪ್ರಪ್ರಥಮವಾಗಿ ಭಾಗವಹಿಸುವವನಾಗಿದ್ದು, ಈ ವ್ಯವಸ್ಥೆಯ ಪ್ರಪ್ರಥಮ ಫಲಾನುಭವಿಯೂ ಆಗಿದ್ದಾನೆ. ಹೀಗೆ ಪ್ರಾಥಮಿಕ ಫಲಾನುಭವಿಯಾಗಿ ಶೈಕ್ಷಣಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲ ಭಾಗಿದಾರನಾಗಿ, ಸಂಪನ್ಮೂಲಗಳ ಗರಿಷ್ಠ ಪ್ರಯೋಜನ ಪಡೆದುಕೊಳ್ಳುವ ಉಪಭೋಗಕನಾಗಿ ಉತ್ತಮ ನಿರ್ವಾಹಕನಾಗಿ ವಿಭಿನ್ನ ಪಾತ್ರವನ್ನು ವಿದ್ಯಾರ್ಥಿ ನಿರ್ವಹಿಸಬೇಕಾಗಿದೆ.

ಶಿಕ್ಷಣದ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯ ಭಾಗವಹಿಸುವಿಕೆಯನ್ನು

1. ವಿದ್ಯಾರ್ಥಿ ಒಬ್ಬ ಪ್ರಾಥಮಿಕ ಫಲಾನುಭವಿ.
2. ವಿದ್ಯಾರ್ಥಿ ಒಬ್ಬ ಕ್ರಿಯಾಶೀಲ ಭಾಗವಹಿಸುವವ.
3. ವಿದ್ಯಾರ್ಥಿ ಒಬ್ಬ ಗರಿಷ್ಠ ಪ್ರಯೋಜನ ಪಡೆದುಕೊಳ್ಳುವವ.
4. ವಿದ್ಯಾರ್ಥಿ ಒಬ್ಬ ಉತ್ತಮ ನಿರ್ವಹಣೆಗಾರ.

ಎಂದು ವರ್ಗೀಕರಿಸಬಹುದಾಗಿದೆ.

✍ **ಎಸ್. ಬಿ. ದಳವಾಯಿ**
ಅಸೋಸಿಯೇಟ್ ಪ್ರೊಫೆಸರ್ (ಮುಖ್ಯಸ್ಥರು ಶಿಕ್ಷಣ ವಿಭಾಗ)
ಕಿ.ನಾ.ವಿ.ವ.ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಚನ್ನಮ್ಮನ ಕಿತ್ತೂರು, ಜಿ. ಬೆಳಗಾವಿ

## 1. ವಿದ್ಯಾರ್ಥಿ ಒಬ್ಬ ಪ್ರಾಥಮಿಕ ಫಲಾನುಭವಿ (Primary Beneficiary)

**"ಒಂದು ವರ್ಷಕ್ಕಾಗಿ ಯೋಜನೆ ಮಾಡುವಂತಿದ್ದರೆ ಭತ್ತ ನೆಡಿರಿ ಒಂದು ದಶಕಕ್ಕಾಗಿ ಯೋಜನೆ ಮಾಡುವಂತಿದ್ದರೆ ಗಿಡವನ್ನು ನೆಡಿರಿ, ಒಂದು ಶತಮಾನಕ್ಕಾಗಿ ಯೋಜನೆ ಮಾಡುವಂತಿದ್ದರೆ ಜನರನ್ನು ಸುಶಿಕ್ಷಿತರನ್ನಾಗಿ ಮಾಡಿರಿ"**

ಈ ಚೇನಿ ಗಾದೆಯನ್ನು ಅವಲೋಕಿಸಿದಾಗ ರಾಷ್ಟ್ರದ ಭವಿಷ್ಯ ವರ್ಗ ಕೋಣೆಯಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳನ್ನು ಅವಲಂಬಿಸಿದೆ ಎನ್ನುವದರಲ್ಲಿ ಸಂಶಯವಿಲ್ಲ. ಆದ್ದರಿಂದ ಶಿಕ್ಷಣದ ಪ್ರಕ್ರಿಯೆಯ ಪ್ರಾಥಮಿಕ ಫಲಾನುಭವಿ ವಿದ್ಯಾರ್ಥಿ ಎಂದರೆ ತಪ್ಪಾಗಲಾರದು.

ಪ್ರಾಚೀನ ಕಾಲದಲ್ಲಿ ಶಿಕ್ಷಣದ ಪ್ರಕ್ರಿಯೆಯಲ್ಲಿ ಶಿಕ್ಷಕ ಅಥವಾ ಕಲಿಸುವ ವಿಷಯ ಪ್ರಮುಖ ಪಾತ್ರ ವಹಿಸುತ್ತಿದ್ದವು. **"ಗುರುವಿನ ಗುಲಾಮನಾಗುವ ತನಕ ದೊರೆಯದನ್ನ ಮುಕ್ತಿ"** ಎಂದು ತಿಳಿಯಲಾಗಿತ್ತು. ವಿದ್ಯಾರ್ಥಿಗೆ ಶಿಕ್ಷಣದ ಪ್ರಕಿಯೆಯಲ್ಲಿ ಯಾವುದೇ ಪ್ರಾತಿನಿಧ್ಯ ದೊರೆತಿರಲಿಲ್ಲ. ಇಂದು ಶಿಕ್ಷಣದ ಪ್ರಕಿಯೆಗೆ ಹೊಸ ಅರ್ಥ ಕಲ್ಪಿಸಲಾಗಿದೆ. ವಿದ್ಯಾರ್ಥಿಯೇ ಕೇಂದ್ರ ಬಿಂದುವಾಗಿದ್ದಾನೆ. ಶಿಕ್ಷಣತಜ್ಞ ರಾದ ಆಡಮ್ಸ್ ಮತ್ತು ರಾಸ್‌ರ ಅಭಿಪ್ರಾಯದಲ್ಲಿ ಶಿಕ್ಷಣದ ಪ್ರಕ್ರಿಯೆ ದ್ವಿಮುಖವಾಗಿದ್ದು ಇಲ್ಲಿ ಶಿಕ್ಷಕರಷ್ಟೇ ವಿದ್ಯಾರ್ಥಿ ಪ್ರಮುಖ ಪಾತ್ರ ವಹಿಸುತ್ತಾರೆ. ರಾಸ್ ಅಭಿಪ್ರಾಯ ಪಡುವಂತೆ ಲೋಹ ಚುಂಬಕಕ್ಕೆ ಉತ್ತರ ಧ್ರುವ ಮತ್ತು ದಕ್ಷಿಣ ಧ್ರುವಗಳಿರುವಂತೆ ಶಿಕ್ಷಣದ ಪ್ರಕ್ರಿಯೆಯ ಯಶಸ್ವಿಯಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿ ಎಂಬ ಎರಡು ಧ್ರುವಗಳು ಕಾರ್ಯನಿರ್ವಹಿಸುತ್ತಿವೆ. ಜಾನ್ ಡ್ಯೂವಿ ತಿಳಿಸುವಂತೆ ಈ ಪ್ರಕ್ರಿಯೆಯಲ್ಲಿ ಸಮಾಜ ಎಂಬ ಮುಖವೂ ಪ್ರಮುಖ ಪಾತ್ರ ವಹಿಸುತ್ತಿದ್ದು ಸಮಾಜದ ಬೇಕು ಬೇಡಿಕೆಗಳನ್ನು ಆಧರಿಸಿ ಶಿಕ್ಷಕ ಮಗುವಿಗೆ ಶಿಕ್ಷಣ ನೀಡುತ್ತಿರುವನು.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಇಂದು ಶಿಕ್ಷಣದ ಲಾಭ ನೇರವಾಗಿ ವಿದ್ಯಾರ್ಥಿಗೆ ತಟ್ಟುತ್ತಿದ್ದು ವಿದ್ಯಾರ್ಥಿಯೊಬ್ಬ ಪ್ರಾಥಮಿಕ ಫಲಾನುಭವಿ ಆಗಿದ್ದಾನೆ ಆದ್ದರಿಂದ ಇಂದು **"ಶಿಶು ಕೇಂದ್ರೀಕೃತ ಶಿಕ್ಷಣ ಪದ್ದತಿ"**ಯು ಆಧುನಿಕ ಶಿಕ್ಷಣ ತಜ್ಞರಾದ ರೂಸೋ, ಪೆಸ್ತಾಲಝಿ, ಫ್ರೋಬೆಲ್, ಗಾಂಧೀಜಿ, ಟ್ಯಾಗೂರ್, ಮಾಂಟೇಸರಿ ಮುಂತಾದವರಿಂದ ಪ್ರತಿಪಾದಿಸಲ್ಪಟ್ಟಿದೆ. ಇವರೆಲ್ಲರೂ ವಿದ್ಯಾರ್ಥಿಯನ್ನು ಗಮನದಲ್ಲಿಟ್ಟು ಕೊಂಡು ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ಪಠ್ಯಕ್ರಮ ರಚಿಸಲು ಸೂಚಿಸಿದ್ದಾರೆ.

1964-66 ರ ಭಾರತೀಯ ಶಿಕ್ಷಣ ಆಯೋಗವು ಶಿಕ್ಷಣದ ಪ್ರಾಥಮಿಕ ಫಲಾನುಭವಿ ಆಗಿರುವ ವಿದ್ಯಾರ್ಥಿ ಅಜ್ಞಾನದಿಂದಲೋ, ತಪ್ಪು ಮಾರ್ಗದರ್ಶನದಿಂದಲೋ, ಕೀಳರಿಮೆಯಿಂದಲೊ ಶಿಕ್ಷಣ ಪಡೆಯಲು ಮುಂದಾಗದಿದ್ದ ಸಂದರ್ಭದಲ್ಲಿ ಶಿಕ್ಷಣವನ್ನೇ ಅವನ ಮನೆಯ ಬಾಗಿಲಿಗೆ ಕೊಂಡೊಯ್ಯಲು ತನ್ನ ವರದಿಯ ಮೊದಲ ಸಾಲುಗಳಲ್ಲಿ ತಿಳಿಸಿದೆ.

ಸ್ವಾಮಿವಿವೇಕಾನಂದರೂ ಸಹಿತ **ಜ್ಞಾನದಾಹಿ ವಿದ್ಯಾರ್ಥಿ ನೀರಿಗಾಗಿ ಗಂಗೆಯ ಹತ್ತಿರ ಬಾರದಿದ್ದಾಗ ಗಂಗೆಯನ್ನೇ ಅವನ ಹತ್ತಿರ ಕೊಂಡೊಯ್ಯಲು** ಸೂಚಿಸಿದ್ದಾರೆ.

ಖ್ಯಾತ ಅರ್ಥಶಾಸ್ತ್ರಜ್ಞ ಜಾನ ವೈಜೆ ಇಂದು **"ಶಿಕ್ಷಣವು ಒಂದು ಉದ್ದಿಮೆ"** ಆಗಿದ್ದು ಇಲ್ಲಿ ತೊಡಗಿಸಿದ ಹಣವನ್ನು ಬಂಡವಾಳ ಹೂಡಿಕೆ ಅಂತ ಪರಿಗಣಿಸಲಾಗಿದೆ ಎಂದು ಅಭಿಪ್ರಾಯಪಟ್ಟಿರುವರು. ಈ ಕಾರಣದಿಂದ ಇಂದು ಅಸಂಖ್ಯಾತ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವರು. ಪಾಲಕರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಹೆಚ್ಚಿನ ಹಣ ಖರ್ಚು ಮಾಡುತ್ತಿದ್ದಾರೆ. ಅಂದರೆ ಶಿಕ್ಷಣವು ಇಂದು ವಿದ್ಯಾರ್ಥಿಗಳಿಗೆ **"ಒಂದು ಉತ್ಪನ್ನವೂ ಮತ್ತು ಪ್ರತಿಫಲವೂ"** ಆಗಿದೆ.

ಸರಕಾರವೂ ಈ ಪ್ರಾಥಮಿಕ ಫಲಾನುಭವಿಗಳಾದ ವಿದ್ಯಾರ್ಥಿಗಳ ಸರ್ವತೋಮುಖ ವಿಕಾಸಕ್ಕಾಗಿ ಈ ಕೆಳಗಿನ ಯೋಜನೆಗಳನ್ನು ರೂಪಿಸಿದೆ

– ಉಚಿತ, ಕಡ್ಡಾಯ ಸಾರ್ವತ್ರಿಕ ಶಿಕ್ಷಣ, ಉಚಿತ ಸಮವಸ್ತ್ರ, ವಿದ್ಯಾರ್ಥಿ ವೇತನಗಳು, ಕಂಪ್ಯೂಟರ ಶಿಕ್ಷಣ, ವಸತಿ ನಿಲಯಗಳು, ಪ್ರತಿಭಾ ಶಾಲೆಗಳು, ಉತ್ತಮ ಕಟ್ಟಡಗಳು, ಉತ್ತಮ ಗ್ರಂಥಾಲಯ, ಉತ್ತಮ ಆಟದ ಮೈದಾನ, ಉತ್ತಮ ಪ್ರಯೋಗಾಲಯ, ಉತ್ತಮ ಶಿಕ್ಷಕರು, ಪದವಿ ಹಂತದವರೆಗೆ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ, ಸೈಕಲ್ ವಿತರಣೆ ಇತ್ಯಾದಿ. ಮುಂಬರುವ ಶೈಕ್ಷಣಿಕ ವರ್ಷದಿಂದ ಕರ್ನಾಟಕ ಸರಕಾರವು ವಿದ್ಯಾರ್ಥಿಗಳಿಗೆ ಎರಡು ಜೊತೆ ಉಚಿತ ಸಮವಸ್ತ್ರ ನೀಡಲು ನಿರ್ಧರಿಸಿರುವದನ್ನು ಇಲ್ಲಿ ಶ್ಲಾಘಿಸಬಹುದಾಗಿದೆ.

ಇವುಗಳನೆಲ್ಲಾ ಗಮನಿಸಿದಾಗ **"ಪ್ರಾಚೀನ ಗುರುಕುಲದಿಂದ ಹಿಡಿದು ಇಂದಿನ ಕಂಪ್ಯೂಟರ ಜಾಲದವರೆಗೂ ವಿದ್ಯಾರ್ಥಿಯೇ ಶಿಕ್ಷಣ ವ್ಯವಸ್ಥೆಯ ಜೀವಾಳ"** ಆಗಿರುವನು ಪ್ರಮುಖವಾಗಿ ಇಂದು ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತದಲ್ಲಿ ಜಾರಿಯಲ್ಲಿರುವ **"ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿ"** ಯಲ್ಲಿ ಪದ ನಿಮಿತ್ಯ ಸದಸ್ಯರಾಗಿ ಇಬ್ಬರು ವಿದ್ಯಾರ್ಥಿಗಳು ಕಾರ್ಯನಿರ್ವಹಿಸುತ್ತಿರುವರು. ಅದೇ ರೀತಿ ಉನ್ನತ ಶಿಕ್ಷಣದ ಆಡಳಿತದಲ್ಲಿಯೂ ವಿದ್ಯಾರ್ಥಿ ಪ್ರತಿನಿಧಿಗಳಿಗೆ ಅವಕಾಶಗಳನ್ನು ಕಲ್ಪಿಸಲಾಗುತ್ತದೆ.

ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ ಹಾಗೂ ಸಂವಿಧಾನದ ಆಶಯದಂತೆ ಶಿಕ್ಷಣವು ಮಗುವಿನ ಮೂಲಭೂತ ಹಕ್ಕು ಆಗಿದ್ದು, ಈ ಬದ್ದತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಶಿಕ್ಷಣದ ಸಾರ್ವತ್ರಿಕರಣದ ಪ್ರಕ್ರಿಯೆಯ ಪ್ರಥಮ ಫಲಾನುಭವಿ ವಿದ್ಯಾರ್ಥಿ ಆಗಿರುವದರಿಂದ ಈ ಲಾಭದಿಂದ ವಂಚಿತರಾದವರಿಗೆ ಇದರ ಲಾಭ ತಟ್ಟುವದಕ್ಕಾಗಿ ಸರ್ವ ಶಿಕ್ಷಣ ಅಭಿಯಾನ, ಕಪ್ಪು ಹಲಿಗೆ ಕಾರ್ಯಾಚರಣೆ, ಅಂಚೆ ತೆರಪಿನ ಶಿಕ್ಷಣ, ದೂರ ಶಿಕ್ಷಣ, ಮುಕ್ತ ವಿಶ್ವವಿದ್ಯಾಲಯಗಳು, ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದವರೆಗೆ ಉಚಿತ ಶಿಕ್ಷಣ, ಹಿಂದಿನ ಕೇಂದ್ರ ರೇಲ್ವೆ ಮುಂಗಡಪತ್ರದಲ್ಲಿ ಅಂದಿನ ರೇಲ್ವೆ ಸಚಿವರಾಗಿದ್ದಂತಹ ಶ್ರೀ ಲಾಲೂಪ್ರಸಾದ ಯಾದವ ವಿದ್ಯಾರ್ಥಿನಿಯರಿಗೆ ಉಚಿತ ರಿಯಾಯತಿ ಪಾಸ ಘೋಷಣೆ ಮುಂತಾದ ಯೋಜನೆಗಳು ಜಾರಿಗೆ ಬಂದಿವೆ, ಅಂದರೆ ವಿದ್ಯಾರ್ಥಿ ಪ್ರಥಮ ಫಲಾನುಭವಿ ಆಗಿರುವದರಿಂದಲೇ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸರಕಾರ ಅಥವಾ ಶಿಕ್ಷಣ ತಜ್ಞರು ಕೈಗೊಳ್ಳುವ ಯೋಜನೆಗಳೆಲ್ಲವೂ ವಿದ್ಯಾರ್ಥಿಯ ಸುತ್ತ ಗಿರಕಿ ಹೊಡೆಯುತ್ತಿರುತ್ತವೆ ಎನ್ನಬಹುದು.

ಈ ರೀತಿಯಾಗಿ ವಿದ್ಯಾರ್ಥಿ ಪ್ರಾಥಮಿಕ ಫಲಾನುಭವಿ ಆಗಿದ್ದು ಶಿಕ್ಷಣದ ಪ್ರಕ್ರಿಯೆಯ ಮೂಲಕ ಉತ್ತಮ ಜ್ಞಾನ, ಓದು ಬರಹ, ಸಂಸ್ಕೃತಿ, ನಡತೆ, ಸಮಯ ಪ್ರಜ್ಞೆ, ಕರ್ತವ್ಯ ಪ್ರಜ್ಞೆ, ವಿಧೇಯತೆ, ಭಯ ಭಕ್ತಿ, ವೈಜ್ಞಾನಿಕ ಮನೋಭಾವನೆ, ಶಿಸ್ತು ಮುಂತಾದವುಗಳನ್ನು ಅಳವಡಿಸಿಕೊಂಡು ವ್ಯಕ್ತಿತ್ವ ವಿಕಸನದತ್ತ ದಾಪುಗಾಲು ಹಾಕುತ್ತಿರುತ್ತಾನೆ. ಒಟ್ಟಿನಲ್ಲಿ ಶಿಕ್ಷಣ ಎಂಬುದು ಫಲದಾಯಕ ಕ್ಷೇತ್ರ ಎಂದು ಒಪ್ಪಿಕೊಳ್ಳಲಾಗಿದ್ದು, ಅದರ ಪ್ರಥಮ ಫಲಾನುಭವಿ ವಿದ್ಯಾರ್ಥಿ ಎಂಬುವದರಲ್ಲಿ ಸಂಶಯವಿಲ್ಲ.

## 2. ವಿದ್ಯಾರ್ಥಿ ಒಬ್ಬ ಕ್ರಿಯಾಶೀಲ ಭಾಗಿಸುವವ (Lively Participator)

ಶಿಕ್ಷಣದ ಪ್ರಕ್ರಿಯೆಯ ಯಶಸ್ವಿನಲ್ಲಿ

ವಿದ್ಯಾರ್ಥಿಯ ಭಾಗವಹಿಸುವಿಕೆ ಅತಿ ಪ್ರಭಾವ ಬೀರುತ್ತದೆ. ಇಂದು ಶಿಕ್ಷಣವು ಹೊಸ ಅರ್ಥವನ್ನು ಹೊಂದಿದ್ದು ಅದು ಶಿಕ್ಷಕ ಹಾಗೂ ವಿದ್ಯಾರ್ಥಿಗಳ ನಡುವೆ ಕ್ರಿಯೆ ಪ್ರತಿಕ್ರಿಯೆ ನಡೆದು ಹೊರಹೊಮ್ಮುವ ಪ್ರತಿಫಲವಾಗಿದೆ. ವಿದ್ಯಾರ್ಥಿಯು ಯಾವಾಗಲೂ ನಿಷ್ಕ್ರೀಯನಾಗಿರದೆ ಚಟುವಟಿಕೆಯಿಂದ ಕೂಡಿದವನಾಗಿರಬೇಕು. **"ಒಬ್ಬ ಶಿಕ್ಷಕನ ಬೋಧನೆಯ ಯಶಸ್ಸು ಕ್ರಿಯಾಶೀಲ ವಿದ್ಯಾರ್ಥಿಯನ್ನು ಅವಲಂಬಿಸಿದೆ"** ಎಂಬ ರವೀಂದ್ರರ ಹೇಳಿಕೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ಶಿಕ್ಷಣದ ಮುಖ್ಯ ಗುರಿ ವಿದ್ಯಾರ್ಥಿಯ ಸರ್ವತೋಮುಖ ವ್ಯಕ್ತಿತ್ವ ವಿಕಾಸ. ಈ ವಿಕಾಸವು ಕೇವಲ ಬೌದ್ಧಿಕವಾಗಿರದೆ ದೈಹಿಕ, ಸಾಮಾಜಿಕ, ನೈತಿಕ, ಆಧ್ಯಾತ್ಮಿಕ, ಭಾವನಾತ್ಮಕವೂ ಆಗಿರಬೇಕು. ಆದ್ದರಿಂದ ವಿದ್ಯಾರ್ಥಿ ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವವನಾಗಿರಬೇಕು. ಶಾಲೆಯಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳಲ್ಲಿ ನಗು ನಗುತ್ತ ಹಸನ್ಮುಖಿಯಾಗಿ ಭಾಗವಹಿಸುವಂತ ವನಾಗಿರಬೇಕು. ಶಾಲಾ ಸಂಸತ್ತು, ಆಟಗಳು, ಪ್ರವಾಸಗಳು, ಸಾಂಸ್ಕೃತಿಕ ಚಟುವಟಿಕೆಗಳು, ಸಮಾಜಸೇವಾ ಶಿಬಿರಗಳು, ಎನ್.ಸಿ.ಸಿ., ಎನ್.ಎಸ್.ಎಸ್., ಸ್ಕೌಟ್, ಯುವಕ ಸಂಘಗಳು, ಕ್ರೀಡಾ ಸಂಘಗಳು, ಭಾಷಾ ಸಂಘಗಳು ಮುಂತಾದವುಗಳಲ್ಲಿ ಸಕ್ರಿಯವಾಗಿ ಭಾಗವಹಿಸುವವ ನಾಗಿರಬೇಕು. ಅಂದಾಗ ಅವರಲ್ಲಿ ಅನುಭವ, ನಾಯಕತ್ವ ಗುಣ, ಸಾಮಾನ್ಯಜ್ಞಾನ, ಆತ್ಮವಿಶ್ವಾಸ, ಗುರಿಯತ್ತ ಮುನ್ನುಗ್ಗುವ ಛಲ, ಸಮಸ್ಯೆಯ ಅರಿವು ಮುಂತಾದವುಗಳು ಲಭಿಸುತ್ತವೆ.

ವಿದ್ಯಾರ್ಥಿಯು ಎಂದೆಂದಿಗೂ ಎದೆಗುಂದದೆ ನಿರುತ್ಸಾಹರಾಗದೆ ಆತ್ಮವಿಶ್ವಾಸದಿಂದ ಗುರಿಯತ್ತ ಸಾಗಬೇಕು. ನಿರುತ್ಸಾಹತೆ ಪ್ರತಿ ಕ್ಷಣ ನಮ್ಮನ್ನು ಅಧೀರರನ್ನಾಗಿಸುತ್ತದೆ. ನಿಷ್ಕ್ರೀಯರನ್ನಾಗಿಸುತ್ತದೆ. ಕೀಳರಿಮೆಭಾವನೆ ಮೂಡಿಸುತ್ತದೆ.

**"ನನಗೆ ನಿರುತ್ಸಾಹಿ ನೂರು ಜನ ಯುವಕರು ಬೇಡ ಅದರ ಬದಲಾಗಿ ಉತ್ಸಾಹಿ ಕ್ರಿಯಾಶೀಲರಾದ ಕೇವಲ ನಾಲ್ಕು ಜನ ಯುವಕರನ್ನು ಕೊಡಿ ನಾನು ದಿವ್ಯ ಭಾರತವನ್ನು ಕಟ್ಟುತ್ತೇನೆ". ಎಂಬ** ಸ್ವಾಮಿ ವಿವೇಕಾನಂದರ ಈ ಹೇಳಿಕೆಯು ಪ್ರತಿಯೊಬ್ಬರ ಗುರಿ ಸಾಧನೆಯಲ್ಲಿ ಕ್ರಿಯಾಶೀಲತೆ ಎಷ್ಟು ಪ್ರಮುಖವಾದುದು ಎಂಬುದನ್ನು ಎತ್ತಿ ತೋರಿಸುತ್ತದೆ. ಮಗುವಿನ ಉತ್ತಮ ಸಾಮಾಜೀಕರಣ ಕಾರ್ಯ ದಲ್ಲಿಯೂ ಈ ಕ್ರಿಯಾಶೀಲತೆ ಪ್ರಭಾವ ಬೀರುತ್ತದೆ. "Success always goes to who are dare and active".

**"ಯಾರು ಧೈರ್ಯದಿಂದ ಮತ್ತು ಕ್ರಿಯಾಶೀಲರಾಗಿರುತ್ತಾರೆಯೋ ಯಶಸ್ಸು ಅವರಿಗೆ ಲಭಿಸುತ್ತದೆ".**

"Without your involvement you cannot succeed ! With your involvement you cannot fail !"

ಆದ್ದರಿಂದ ಈ ಹೇಳಿಕೆಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಬ್ಬ ವಿದ್ಯಾರ್ಥಿ ಲವಲವಿಕೆಯಿಂದ ಶಾಲೆಯ ಎಲ್ಲ ಚಟುವಟಿಕೆಗಳಲ್ಲಿ ಭಾಗಿಯಾಗಬೇಕು. ಇಂದು ತಪ್ಪು ಮಾರ್ಗದರ್ಶನದಿಂದಲೋ ಅಥವಾ ಪಾಲಕರ ಒತ್ತಡದಿಂದಲೋ ವಿದ್ಯಾರ್ಥಿಗಳು ನಿಷ್ಕ್ರೀಯರಾಗಿರುವರು. ಶಿಕ್ಷಣ ವ್ಯವಸ್ಥೆಯಲ್ಲಿ ಇತ್ತೀಚಿಗೆ ಆಗಮಿಸಿರುವ "ಸೆಮಿಸ್ಟರ್ ಪದ್ಧತಿ"ಯೂ ಕೂಡ ಇದಕ್ಕೆ ಪ್ರಮುಖ ಕಾರಣವೆನ್ನಬಹುದು. ಕೇವಲ ಪರೀಕ್ಷಾ ವಿಷಯಗಳಿಗೆ ಆದ್ಯತೆ ನೀಡಬೇಕಾಗಿರುವದರಿಂದ ವರ್ಷದಲ್ಲಿ ಎರಡು ಸಲ ಪರೀಕ್ಷೆ ಬರೆಯಬೇಕಾಗಿರುವದರಿಂದ ಸಹ ಪಠ್ಯ ಚಟುವಟಿಕೆಗಳು ಪ್ರಾಮುಖ್ಯತೆ ಕಳೆದುಕೊಳ್ಳುತ್ತಿರುವದು ವಿಷಾದನೀಯ ಸಂಗತಿಯಾಗಿದೆ.

### 3. ವಿದ್ಯಾರ್ಥಿ ಒಬ್ಬ ಗರಿಷ್ಠ ಪ್ರಯೋಜನ ಪಡೆದುಕೊಳ್ಳುವವ (Optimum User)

"ಶಿಕ್ಷಣವು ಮಾನವ ಸಂಪನ್ಮೂಲಗಳ ಅಭಿವೃದ್ಧಿ ಸಾಧನ"

**– 1986ರ ರಾಷ್ಟ್ರೀಯ ಶಿಕ್ಷಣ ನೀತಿ**

"ಶಿಕ್ಷಣವು ಒಂದು ಉದ್ದಿಮೆ ಆಗಿದ್ದು ಈ ಕ್ಷೇತ್ರದಲ್ಲಿ ತೊಡಗಿಸಿದ ಹಣ ಬಂಡವಾಳ ಹೂಡಿಕೆ" **– ಜಾನ್ ವೈಝಿ**

"ರಾಷ್ಟ್ರದ ಭವಿಷ್ಯ ವರ್ಗಕೋಣೆಗಳಲ್ಲಿ ರೂಪಿಸಲ್ಪಡುತ್ತಿದ್ದು ಇದು ತರಗತಿಯ ವಿದ್ಯಾರ್ಥಿಗಳನ್ನು ಅವಲಂಬಿಸಿದೆ".

**– 1964–66ರ ಭಾರತೀಯ ಶಿಕ್ಷಣ ಆಯೋಗ**

ಈ ಮೇಲಿನ ಹೇಳಿಕೆಗಳನ್ನು ಗಮನಿಸಿದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಎಲ್ಲ ಹಂತದ ಶಿಕ್ಷಣದ ವಿದ್ಯಾರ್ಥಿಗಳ ಸರ್ವತೋಮುಖ ವ್ಯಕ್ತಿತ್ವ ವಿಕಾಸಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ.

- ಉಚಿತ ಕಡ್ಡಾಯ ಸಾರ್ವತ್ರಿಕ ಶಿಕ್ಷಣ, ಉಚಿತ ಸಮವಸ್ತ್ರ ವಿತರಣೆ, ಉಚಿತ ಪಠ್ಯಪುಸ್ತಕ ವಿತರಣೆ, ಸುಸಜ್ಜಿತ ಗ್ರಂಥಾಲಯಗಳು.
- ಆಟದ ಮೈದಾನ ಹಾಗೂ ಕ್ರೀಡಾ ಸಾಮಗ್ರಿಗಳು, ನುರಿತ ಶಿಕ್ಷಕರು, ವಿದ್ಯಾರ್ಥಿ ವೇತನಗಳು, ಮಧ್ಯಾನ್ಹದ ಉಪಹಾರ ಯೋಜನೆ, ಪ್ರತಿಭಾ ಶಾಲೆಗಳು, ವಿವಿಧ ಸ್ಪರ್ಧೆಗಳು.
- ಉತ್ತಮ ಕಟ್ಟಡಗಳು, ಸಂಶೋಧನೆಗೆ ವಿದ್ಯಾರ್ಥಿ ವೇತನಗಳು, ಶಿಕ್ಷಣದಲ್ಲಿ ತಂತ್ರಜ್ಞಾನದ ಅಳವಡಿಕೆ, ಪ್ರಯೋಗಾಲಯ, ಎನ್.ಎಸ್.ಎಸ್., ಎನ್.ಸಿ.ಸಿ., ಸ್ಕೌಟ್ಸ್ ಮುಂತಾದವುಗಳು.
- ಹಿಂದುಳಿದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಹಾಗೂ ವೃತ್ತಿಗಳಿಗೆ ಸಂಬಂಧಿಸಿದಂತೆ ಉಚಿತ ತರಬೇತಿ.

ಇವುಗಳೆಲ್ಲವೂ ಮಾನವನ ಸಂಪನ್ಮೂಲಗಳ ಅಭಿವೃದ್ಧಿಯ ಸಾಧನಗಳಾಗಿರುವದರಿಂದ ಇವುಗಳ ಗರಿಷ್ಠ ಉಪಯೋಗವನ್ನು ವಿದ್ಯಾರ್ಥಿಗಳು ಪಡೆಯಬೇಕಾಗಿದೆ. ಅಂದಾಗ ಮಾತ್ರ ಅವನ ಜ್ಞಾನ ವಿಕಾಸವಾಗುತ್ತದೆ.

ಶಿಕ್ಷಣದಲ್ಲಿ ಕಂಪ್ಯೂಟರ್ ಆಗಮನದಿಂದ ಅವನಿಗೆ ವಿರಾಮ ವೇಳೆ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತದೆ. ಈ ಸಮಯವನ್ನು ವಿನಾಕಾರಣ ಹಾಳು ಮಾಡದೆ ಸದುಪಯೋಗ ಪಡಿಸಿಕೊಳ್ಳಬೇಕು. ಗ್ರಂಥಗಳನ್ನು ಓದುವದರ ಮೂಲಕ, ಸ್ನೇಹಿತರೊಂದಿಗೆ ಚರ್ಚಿಸುವದರ ಮೂಲಕ, ಸಮೂಹ ಮಾಧ್ಯಮಗಳ ಮೂಲಕ, ಸ್ವಯಂ ಅಧ್ಯಯನ ಮೂಲಕ ಜ್ಞಾನ ಹೆಚ್ಚಿಸಿಕೊಳ್ಳಬೇಕು.

ನೆಪೋಲಿಯನ್ ಬೋನಾಪಾರ್ಟ ಹೇಳುವಂತೆ– **"ನನಗೆ 24 ಗಂಟೆಗಳ ಸಮಯ ಕೊಡಿ ಇಡೀ ಜಗತ್ತನ್ನೇ ಗೆಲ್ಲಬಲ್ಲೆ".** ಆದ್ದರಿಂದ ಪ್ರತಿ ಕ್ಷಣ ಅಮೂಲ್ಯವಾದುದು ಇದನ್ನು ಸದುಪಯೋಗ ಪಡೆಸಿಕೊಳ್ಳಬೇಕು. ಸಮಯ ಅಮೂಲ್ಯವಾದುದು ಕಳೆದು ಹೋದ ಸಮಯ ಜೀವನದಲ್ಲಿ ಎಂದೆಂದಿಗೂ ತಿರುಗಿ ಬರಲಾರದು. ಈ ವಿದ್ಯಾರ್ಥಿ ಜೀವನ ಬಂಗಾರಮಯ ಜೀವನವಾಗಿದ್ದು ನಿಜವಾಗಿಯೂ ವಿದ್ಯಾರ್ಥಿ ಭವಿಷ್ಯ ಬಂಗಾರಮಯವಾಗಬೇಕಾದರೆ ಈ ಅವಧಿಯ ಗರಿಷ್ಠ ಪ್ರಯೋಜನವನ್ನು ಸತತ ಪ್ರಯತ್ನ ಹಾಗೂ ಪರಿಶ್ರಮಗಳ ಮೂಲಕ ಪಡೆದುಕೊಳ್ಳಬೇಕು.

"Low aim is a Crime" **– ಗಾಂಧೀಜಿ**

**"ನಮ್ಮ ವಿದ್ಯಾರ್ಥಿಗಳು ಭತ್ತ ಬೆಳೆಯುವ ಭೂಮಿಯಾಗಬೇಕೇ ವಿನಃ ಭತ್ತ ತುಂಬುವ ಗೋಣಿ ಚೀಲಗಳಾಗಬಾರದು". – ಕುವೆಂಪು**

ಗಾಂಧೀಜಿ ಹಾಗೂ ಕುವೆಂಪುರವರ ಈ ಮೇಲಿನ ಹೇಳಿಕೆಗಳನ್ನು ಗಮನಿಸಿದಾಗ ವಿದ್ಯಾರ್ಥಿ ಸತತಾಭ್ಯಾಸಿಯಾಗಿದ್ದು ಜ್ಞಾನದಾಹಿ ಯಾಗಿರಬೇಕು. ಉನ್ನತ ಶಿಕ್ಷಣದಲ್ಲಿ ಇಂದಿನ ವಿದ್ಯಾರ್ಥಿಗಳು ಕೇವಲ ಪಾಸಾದರೆ ಸಾಕು ಎನ್ನುವ ಮನೋಭಾವನೆ ಹೊಂದಿದ್ದಾರೆ. ಇಂದಿನದು ಸ್ಪರ್ಧಾತ್ಮಕ ಯುಗವಾಗಿರುವದರಿಂದ ಉನ್ನತ ಗುರಿ ಹೊಂದಿರಲೇ ಬೇಕಾಗಿದೆ. ಆದ್ದರಿಂದ ವಿದ್ಯಾರ್ಥಿ ಜೀವನದ ಗರಿಷ್ಠ ಲಾಭ ಪಡೆದುಕೊಳ್ಳಲೇಬೇಕಾಗಿದೆ.

ಜ್ಞಾನ ಸಂಪಾದನೆಯಲ್ಲಿ ಪಂಚೇಂದ್ರಿಯಗಳು ಪ್ರಮುಖ ಪಾತ್ರ ವಹಿಸುತ್ತವೆ. ನೋಡುವದರಿಂದ ಶೇಕಡಾ 75, ಕೇಳುವುದರಿಂದ ಶೇಕಡಾ 13, ಸ್ಪರ್ಶದಿಂದ ಶೇಕಡಾ 6, ವಾಸನೆ ಹಾಗೂ ರುಚಿಗಳಿಂದ ತಲಾ ಶೇಕಡಾ 3 ರಷ್ಟು ಜ್ಞಾನ ಸಂಪಾದನೆಯಾಗುತ್ತದೆ. ಆದ್ದರಿಂದ ಈ ಪಂಚೇಂದ್ರಿಯಗಳ ಗರಿಷ್ಠ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕಾಗಿದೆ.

**"ಏಳಿ ಎದ್ದೇಳಿ ಗುರಿಮುಟ್ಟುವ ತನಕ ನಿಲ್ಲಬೇಡಿ"**

ವಿವೇಕಾನಂದರ ಈ ವಾಣಿಯನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಬ್ಬ ವಿದ್ಯಾರ್ಥಿ ಶಿಕ್ಷಣದ ಪ್ರಕ್ರಿಯೆಯಲ್ಲಿ ದೊರೆಯಬಹುದಾದ ಪಠ್ಯ ಹಾಗೂ ಸಹ ಪಠ್ಯ ಸೌಲಭ್ಯಗಳ ಗರಿಷ್ಠ ಪ್ರಯೋಜನ ಪಡೆಯುವವರೆಗೆ ವಿಶ್ರಮಿಸಬಾರದು.

"ಇದ್ದ ಬಿದ್ದ ಸಂಪನ್ಮೂಲಗಳನ್ನೇ ಗರಿಷ್ಠ ಪ್ರಮಾಣದಲ್ಲಿ ಸದ್ವಿನಿಯೋಗ ಪಡಿಸಿಕೊಳ್ಳುವವನೇ ಆದರ್ಶ ವಿದ್ಯಾರ್ಥಿ"

**– ಡಾ ಈಶ್ವರ ಭಾಯಿ ಪಟೇಲ ಶಿಕ್ಷಣ ಸಮಿತಿ.**

ಈ ಹೇಳಿಕೆಯನ್ನು ಗಮನದಲ್ಲಿಟ್ಟುಕೊಂಡು ಏನಾದರೂ ಒಂದು ಕುಂಟು ನೆಪ ಹೇಳುತ್ತ ಕಲಿಕೆಯಲ್ಲಿ ಹಿಂದುಳಿಯದೆ ವಿದ್ಯಾರ್ಥಿ ಶಾಲಾ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಗುರಿಯತ್ತ ಮುನ್ನುಗ್ಗುವವನಾಗಿರಬೇಕು.

"ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಇಂದಿನ ದಿನಗಳಲ್ಲಿ ವಿದ್ಯಾರ್ಥಿ ಗುಣಾತ್ಮಕವಾಗಿ ಹೊರ ಹೊಮ್ಮಬೇಕಾಗಿದೆ. ಶಾಲೆಯಲ್ಲಿ ಶಿಕ್ಷಕನು ಅಗಾಧ ಜ್ಞಾನದ ಸ್ವಲ್ಪ ಭಾಗವನ್ನು ಮಾತ್ರ ಕಲಿಸಲು ಸಾಧ್ಯ. ಆದರೆ ಉತ್ಸಾಹಿ ಕ್ರಿಯಾಶೀಲ ವಿದ್ಯಾರ್ಥಿ ತನಗೆ ದೊರೆಯುವ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ಸ್ವ ಅಧ್ಯಯನದ ಮೂಲಕ ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು".

## 4. ವಿದ್ಯಾರ್ಥಿ ಒಬ್ಬ ಉತ್ತಮ ನಿರ್ವಹಣೆಗಾರ
(Good Maintainer)

ವಿದ್ಯಾರ್ಥಿಯು ಒಬ್ಬ ನಿರ್ವಹಣಾಗಾರನ ಪಾತ್ರವನ್ನೂ ನಿರ್ವಹಿಸಬೇಕಾಗುತ್ತದೆ. ವಿದ್ಯಾರ್ಥಿಯ ನಿರ್ವಹಣೆಗಾರಿಕೆಯನ್ನು ಎರಡು ರೀತಿಯಾಗಿ ವರ್ಗೀಕರಿಸಬಹುದು.

– ಶಾಲಾ ಚಟುವಟಿಕೆಗಳ ನಿರ್ವಹಣೆಗಾರ.

– ಶಿಕ್ಷಣದ ಲಾಭ ಪಡೆದುಕೊಂಡು ಮುಂದೆ ಅದಕ್ಕೆ ಪ್ರತಿಫಲವಾಗಿ ಜವಾಬ್ದಾರಿ ನಿರ್ವಹಿಸುವವ.

### ಶಾಲಾ ಚಟುವಟಿಕೆಗಳ ನಿರ್ವಹಣೆಗಾರ:

ಸಾಕ್ರೆಟಿಸ್ ಹೇಳುವಂತೆ **"ನೀನು ಮೊದಲು ನಿನ್ನನ್ನು ತಿಳಿ, ನಿನ್ನನ್ನು ನಂಬು, ನಿನ್ನನ್ನು ಪ್ರೀತಿಸು"** ಅಂದರೆ ಪ್ರತಿಯೊಬ್ಬ ವಿದ್ಯಾರ್ಥಿ ತನ್ನ ಕರ್ತವ್ಯ ಜವಾಬ್ದಾರಿಗಳನ್ನು ಅರಿತು ಸರಿಯಾಗಿ ನಿರ್ವಹಿಸಬೇಕು. ಶಾಲೆಯು ನನ್ನ ಆಸ್ತಿ ಅದನ್ನು ಸರಿಯಾಗಿ ಕಾಪಾಡಿಕೊಳ್ಳಬೇಕು. ಶಾಲಾ ಪರಿಸರ ಅಂದವಾಗಿ ಇರುವಂತೆ ನೋಡಿಕೊಳ್ಳಬೇಕು. ಶಾಲೆಯ ಸಂಪನ್ಮೂಲಗಳಾದ ಖುರ್ಚಿ, ಮೇಜು, ಗೋಡೆ, ಕಪ್ಪು ಹಲಿಗೆ, ಹೂದೋಟ, ಗ್ರಂಥಾಲಯ, ಪುಸ್ತಕಗಳು, ಇತರ ಸಾಮಗ್ರಿಗಳು ಮುಂತಾದವುಗಳನ್ನು ತನ್ನ ಸ್ವಂತ ಆಸ್ತಿಗಳೆಂದು ಭಾವಿಸಿ ಅವು ಹಾಳಾಗದಂತೆ ನೋಡಿಕೊಳ್ಳಬೇಕು. ಶಾಲೆಯ ಸಹಪಠ್ಯ ಚಟುವಟಿಕೆಗಳನ್ನು ಸರಿಯಾಗಿ ನಿರ್ವಹಿಸಿ ಸಕ್ರೀಯವಾಗಿ ಭಾಗವಹಿಸುವವನಾಗಿರಬೇಕು. ಗುರು ಹಿರಿಯರಿಗೆ ವಿಧೇಯನಾಗಿರಬೇಕು. ಶಾಲಾ ನಿಯಮಗಳನ್ನು ಗೌರವದಿಂದ ಪಾಲಿಸಬೇಕು. ಪರೀಕ್ಷಾ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು. ಶಿಕ್ಷಣದ ಗುಣಮಟ್ಟ ನಿರ್ವಹಣೆಯಲ್ಲಿಯೂ ಇವನ ಪಾತ್ರ ಅಪಾರವಾದುದು. ಆದ್ದರಿಂದಲೇ ಇಂದು **"ಶಿಕ್ಷಣದಲ್ಲಿ ಸಂಪೂರ್ಣ ಗುಣಮಟ್ಟದ ನಿರ್ವಹಣೆ" (TQM)** ಎಂಬ ಹೊಸಪರಿಕಲ್ಪನೆಯ ಆಗಮನವಾಗಿದೆ.

### ಶಿಕ್ಷಣದ ಲಾಭ ಪಡೆದುಕೊಂಡು ಮುಂದೆ ಅದಕ್ಕೆ ಪ್ರತಿಫಲವಾಗಿ ಜವಾಬ್ದಾರಿ ನಿರ್ವಹಿಸುವವ

ಶಾಲಾ ಚಟುವಟಿಕೆಗಳ ಯಶಸ್ವಿ ನಿರ್ವಹಣೆಯ ಜೊತೆಗೆ ಶಾಲೆಯಿಂದ ಪಡೆದುಕೊಂಡ ಜ್ಞಾನವನ್ನು ಜೀವನದಲ್ಲಿ ಸದುಪಯೋಗಪಡಿಸಿಕೊಂಡು ಒಬ್ಬ ಒಳ್ಳೆಯ ನಾಗರಿಕನಾಗಿ, ನಾಯಕನಾಗಿ, ಆದರ್ಶ ವ್ಯಕ್ತಿಯಾಗಿ, ಶಿಸ್ತಿನ ಸಿಪಾಯಿಯಾಗಿ, ಸಾಮಾಜಿಕ ಯೋಗ್ಯತೆಯುಳ್ಳ ವ್ಯಕ್ತಿಯಾಗಿ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಜವಾಬ್ದಾರಿಗಳನ್ನು ನಿರ್ವಹಿಸುವವನಾಗಿರಬೇಕು.

ಈ ರೀತಿಯಾಗಿ ವಿದ್ಯಾರ್ಥಿ ಒಬ್ಬ ಉತ್ತಮ ನಿರ್ವಹಣೆಗಾರನಾಗಿ ಸಮಾಜ, ಶಾಲೆ, ಕುಟುಂಬ, ಸರಕಾರ, ಪಾಲಕರು ಅಪೇಕ್ಷಿಸಬಹುದಾದ ವರ್ತನೆಯನ್ನು ರೂಢಿಸಿಕೊಂಡು ಮುನ್ನಡೆದಲ್ಲಿ ಶಿಕ್ಷಣದ ಪ್ರಕ್ರಿಯೆ ಯಶಸ್ವಿಗೊಳ್ಳುವದು.

**"ಕೊಟ್ಟ ಕುದುರೆ ಏರಲು ಬಾರದವನು ಇನ್ನೊಂದು ಕುದುರೆ ಏರಲಾರನು"** ಎಂಬಂತೆ ಕೊಟ್ಟ ಕಾರ್ಯ ಸರಿಯಾಗಿ ನಿರ್ವಹಿಸಲಾರದವನು ಯಾವದೇ ಕಾರ್ಯವನ್ನು ಸರಿಯಾಗಿ ನಿರ್ವಹಿಸಲಾರನು. ಆದ್ದರಿಂದ ವಿದ್ಯಾರ್ಥಿ ಒಬ್ಬ ಉತ್ತಮ ನಿರ್ವಹಣೆಗಾರನಾಗಿ ಕಾರ್ಯನಿರ್ವಹಿಸಬೇಕಾಗಿದೆ.

### ಉಪಸಂಹಾರ

ಹೀಗೆ ಶಿಕ್ಷಣದ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿ ಒಬ್ಬ ಪ್ರಾಥಮಿಕ ಫಲಾನುಭವಿಯಾಗಿ ಕ್ರೀಯಾಶೀಲ ಭಾಗಿದಾರನಾಗಿ, ಗರಿಷ್ಠ ಉಪಯೋಗ ಪಡೆದುಕೊಳ್ಳುವವನಾಗಿ, ಉತ್ತಮ ನಿರ್ವಹಣೆಗಾರನಾಗಿ ವಿಭಿನ್ನ ಪಾತ್ರ ವಹಿಸಬೇಕಾಗಿದ್ದು ಈ ಕ್ರಿಯೆಯ ಯಶಸ್ವಿಯಲ್ಲಿ ಅವನ ಪಾತ್ರ ಬಹುಮುಖ್ಯವಾದುದು. ಅಂದಾಗ ಮಾತ್ರ ಶಿಕ್ಷಣದ ಪ್ರಕ್ರಿಯೆಗೆ ಒಂದು ನವೀನ ಅರ್ಥ ಬರುತ್ತದೆ. ಆದ್ದರಿಂದ ಶಿಕ್ಷಕರು, ಪಾಲಕರು, ಸಮಾಜ, ಸರ್ಕಾರಗಳು ವಿದ್ಯಾರ್ಥಿಗಳಿಗೆ ಶಿಕ್ಷಣದ ಪ್ರಕ್ರಿಯೆಯಲ್ಲಿ ಪ್ರಮುಖ ಸ್ಥಾನ ನೀಡಬೇಕು. ಶಿಕ್ಷಣ ತಜ್ಞರು ವಿದ್ಯಾರ್ಥಿಗಳ ಆಸಕ್ತಿ, ಅಭಿರುಚಿ, ಕಲಿಯುವ ಸಾಮರ್ಥ್ಯ, ಅವಶ್ಯಕತೆ ಮುಂತಾದವುಗಳಿಗೆ ಅನುಗುಣವಾಗಿ ಪಠ್ಯಕ್ರಮ ರಚಿಸಬೇಕು. ಅಂದರೆ ಪಠ್ಯಕ್ರಮ ರಚಿಸುವಾಗ ಬೋಧನಾ ವಿಷಯಗಳನ್ನು ಆಯ್ಕೆ ಮಾಡುವಾಗ, ನೂತನ ಬೋಧನಾ ಪದ್ಧತಿಗಳನ್ನು ಅಳವಡಿಸಿಕೊಳ್ಳುವಾಗ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನೂ ಸಂಗ್ರಹಿಸುವುದಾಗಬೇಕು. ಸಾಧ್ಯವಾದಲ್ಲಿ ಪಠ್ಯಕ್ರಮ ರಚನಾ ಸಮಿತಿಯಲ್ಲಿ, ಶಾಲಾ ಆಡಳಿತದಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳಿಗೂ ಅವಕಾಶ ಕಲ್ಪಿಸಿಕೊಡಬೇಕು. ಅದೇ ರೀತಿ ವಿದ್ಯಾರ್ಥಿಗಳಾದರೂ ಸಹಿತ ಶಿಕ್ಷಣದ ಪ್ರಕ್ರಿಯೆಯ ಯಶಸ್ವಿಯಲ್ಲಿ ತಮ್ಮ ಭಾಗತ್ವವನ್ನು ಅರಿತು ಕ್ರಿಯಾಶೀಲರಾಗಬೇಕು.

**ಶಿಕ್ಷಣ ಸೌಧ**

ಲೇಖನಗಳು

# ಶಿಕ್ಷಣದಲ್ಲಿ ನಾಯಕತ್ವ
# (LEADERSHIP IN EDUCATION)

## ನಾಯಕತ್ವದ ಪ್ರಾಮುಖ್ಯತೆ

ಶೈಕ್ಷಣಿಕ ಸಂಸ್ಥೆಯಲ್ಲಿ ನಾಯಕತ್ವವು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಸಂಸ್ಥೆಯ ಯಶಸ್ಸು ಸಮರ್ಥ ನಾಯಕರನ್ನೇ ಅವಲಂಬಿಸಿರುತ್ತದೆ. ನಾಯಕತ್ವವು ಅನುಯಾಯಿಗಳ ಮೂಲಕ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಸಾಧಿಸುವಲ್ಲಿ ಮತ್ತು ಧೋರಣೆಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವಲ್ಲಿ ಮಹತ್ವದ ಸಾಧನವಾಗಿದೆ. ತನ್ನ ಅನುಯಾಯಿಗಳು ವಿಶ್ವಾಸದಿಂದ ಮತ್ತು ಉತ್ಸಾಹದಿಂದ ಕೆಲಸ ಮಾಡುವಂತೆ ಅವರನ್ನು ಪ್ರೇರೇಪಿಸುವ ಮುಖ್ಯಸ್ಥನ ಸಾಮರ್ಥ್ಯವೇ ನಾಯಕತ್ವ. ಉತ್ತಮ ನಾಯಕನ ಗುಣಲಕ್ಷಣಗಳನ್ನು ಹೊಂದಿದ ನಾಯಕನು ತನ್ನ ಸಹೋದ್ಯೋಗಿಗಳ ವರ್ತನೆಯನ್ನು ಮಾರ್ಪಡಿಸಲು ಮತ್ತು ನಿಯಂತ್ರಿಸಲು ಸಮರ್ಥವಾಗಿರುತ್ತಾನೆ. ಅವರ ಕಾರ್ಯನಿರ್ವಹಣೆಯಲ್ಲಿ ಮಾರ್ಗದರ್ಶನ ಮಾಡುವದು ಮತ್ತು ಅವರ ಕಾರ್ಯಶಕ್ತಿಯು ಪರಿಪೂರ್ಣವಾಗಿ ಉಪಯೋಗವಾಗುವಂತೆ ನೋಡಿಕೊಳ್ಳುವದು ನಾಯಕನ ಹೊಣೆಯಾಗಿರುತ್ತದೆ.

ಶಿಕ್ಷಣದಲ್ಲಿ ನಾಯಕತ್ವವು ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ಈ ಕೆಳಗೆ ಕೊಟ್ಟ ಅಂಶಗಳಿಂದ ತಿಳಿದುಕೊಳ್ಳಬಹುದು.

1. ನಾಯಕನು ತನ್ನ ಅನುಯಾಯಿಗಳ ಮೂಲಕ ಸಾಧಿಸಬೇಕಾದ ಗುರಿಗಳನ್ನು ನಿರ್ಧರಿಸುತ್ತಾನೆ ಮತ್ತು ಧೋರಣೆಗಳನ್ನು ರೂಪಿಸುತ್ತಾನೆ. ಈ ದಿಶೆಯಲ್ಲಿ ಅವನು ತನ್ನ ಅನುಯಾಯಿಗಳಿಗೆ ಮಾರ್ಗದರ್ಶನ ಮಾಡುತ್ತಾನೆ.
2. ನಾಯಕನು ಆಡಳಿತ ಮಂಡಳಿಯು ನಿರ್ಧರಿಸಿದ ಧ್ಯೇಯೋದ್ದೇಶಗಳನ್ನು ಸಾಧಿಸುವದಕ್ಕಾಗಿ ವೈಜ್ಞಾನಿಕ ತಳಹದಿಯ ಮೇಲೆ ಸಂಸ್ಥೆಯ ಸಂಘಟನೆಯನ್ನು ರಚಿಸುತ್ತಾನೆ.
3. ನಾಯಕನು ವೈಯಕ್ತಿಕ ಹಿತಾಸಕ್ತಿಗಳನ್ನು ಸಂಸ್ಥೆಯ ಹಿತಾಸಕ್ತಿಗಳೊಂದಿಗೆ ಸಮನ್ವಯಗೊಳಿಸುತ್ತಾನೆ. ತನ್ನ ಅನುಯಾಯಿಗಳು ಕೂಡಿ ಕೆಲಸ ಮಾಡುವಾಗ ಅವರ ಚಟುವಟಿಕೆಗಳಲ್ಲಿ ಸಮನ್ವಯ ಸಾಧಿಸುತ್ತಾನೆ. ಅವರಿಂದ ವಿವರಗಳನ್ನು ಪಡೆಯುತ್ತಾನೆ ಹಾಗೂ ಅವರಿಗೆ ವಿವರಗಳನ್ನು ನೀಡುತ್ತಾನೆ.
4. ನಾಯಕನು ತನ್ನ ಅನುಯಾಯಿಗಳಲ್ಲಿ ವಿಶ್ವಾಸವನ್ನು ಹುಟ್ಟಿಸುತ್ತಾನೆ. ವಿಧೇಯತೆಯಿಂದ ಹಾಗೂ ಪ್ರಾಮಾಣಿಕತನದಿಂದ ಮತ್ತು ಅತ್ಯಂತ ಆಸಕ್ತಿಯಿಂದ ದುಡಿಯುವಂತೆ ಅವರಿಗೆ ಅವನು ಪ್ರೋತ್ಸಾಹಿಸುತ್ತಾನೆ.
5. ನಾಯಕನು ತನ್ನ ಸಿಬ್ಬಂದಿ ಅಥವಾ ಅನುಯಾಯಿಗಳ ಧುರೀಣನಾಗಿರುತ್ತಾನೆ. ಅವನು ಅವರ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಾನೆ. ತನ್ನ ಅನುಯಾಯಿಗಳ ಹಿತರಕ್ಷಣೆಗಾಗಿ ಮುಂದುವರಿದು ಕೆಲಸ ಮಾಡುತ್ತಾನೆ. ಅಲ್ಲದೆ ತನ್ನ ಅನುಯಾಯಿಗಳ ಮಾನಸಿಕ ಅವಶ್ಯಕತೆಗಳನ್ನು ಈಡೇರಿಸಲು ಆತನು ಪ್ರಯತ್ನಿಸುತ್ತಾನೆ. ಹೀಗೆ ನಾಯಕತ್ವ ಪಾತ್ರ ಬಹುಮುಖವಾಗಿದೆ.

## ನಾಯಕತ್ವದ ವ್ಯಾಖ್ಯೆಗಳು (Definitions of Leadership)

ವ್ಯವಸ್ಥಿತ ಗುಂಪಿನ ಕಾರ್ಯವಾದ ಗುರಿ ನಿರ್ಧಾರಣೆ ಮತ್ತು ಗುರಿಯನ್ನು ಮುಟ್ಟುವುದರಲ್ಲಿ ಪ್ರಭಾವ ಬೀರುವ ಕ್ರಿಯೆಯೇ ನಾಯಕತ್ವ.

**- ಸ್ಟಾಗ್‌ಡಿಲ್**

ಯಾವ ಗುರಿಗಳು ಗುಂಪಿಗೆ ಸಹಾಯಕವಾಗುವಂತಿರುತ್ತವೆಯೋ ಅವುಗಳನ್ನು ವ್ಯವಸ್ಥಿತವಾಗಿ ಮುಟ್ಟುವಂತೆ ಮಾಡುವ ಕ್ರಿಯಾತ್ಮಕತೆಯೇ ನಾಯಕತ್ವ.

**- ರಾಬರ್ಟ್‌ರೈಟ್‌ರ್**

ಸಂಸ್ಥೆಯೊಂದು ಕೊಟ್ಟಂತಹ ಗುರಿಗಳನ್ನು ಮುಟ್ಟುವುದಕ್ಕಾಗಿ ಬೇಕಾದ ಚಟುವಟಿಕೆಗಳಿಗೆ ನಿರ್ದೇಶನ ನೀಡುವುದೇ ನಾಯಕತ್ವ.

**- ಶಿಕ್ಷಣ ನಿಘಂಟುವಿನ ಪ್ರಕಾರ**

ಸಮೂಹ ಚರ್ಚೆಯಲ್ಲಿ ನಾಯಕತ್ವ ಕಾರ್ಯದ ಪ್ರಾರಂಭಿಸುವಿಕೆ, ಸಂಘಟಿಸುವಿಕೆ, ಪ್ರಶ್ನೆ ಕೇಳುವಿಕೆ, ಪ್ರೇರೇಪಿಸುವಿಕೆ, ಸಾರಾಂಶಿಸುವಿಕೆ ಮತ್ತು ಸಾಧಾರಣೀಕರಣಗಳನ್ನು ರೂಪಿಸುವಿಕೆಯ ಅಂದಾಜೇ ನಾಯಕತ್ವ.

**- ಬಾಸ್ 1949**

ನಾಯಕನಾದವನು ತನ್ನ ಹಿಂಬಾಲಕರಿಂದ ಗುರುತಿಸಲ್ಪಟ್ಟ ಮತ್ತು ಸ್ವೀಕೃತವಾದ ವ್ಯಕ್ತಿಯಾಗಿದ್ದಾನೆ. **- ಸ್ಟ್ಯಾನಫೋರ್ಡ್**

## ನಾಯಕನ ಕಾರ್ಯಗಳು

**ಅ. ಕಾರ್ಯನಿರ್ವಾಹಕ :** ಅವನು ಸಮೂಹದ ಚಟುವಟಿಕೆಗಳನ್ನು ಸಮನ್ವಯಗೊಳಿಸಬೇಕು. ಸಮೂಹದ ನೀತಿಗಳು ಮತ್ತು ಉದ್ದೇಶಗಳನ್ನು ನೇರವಾದ ಪಾತ್ರದಿಂದ ನಿರ್ಧರಿಸಬೇಕು. ಅವುಗಳ ಅನುಷ್ಠಾನವನ್ನು ನೋಡಿಕೊಳ್ಳುವುದು ಅವನ ಜವಾಬ್ದಾರಿ. ಅವನು ಜವಾಬ್ದಾರಿ ಮತ್ತು ಆಡಳಿತವನ್ನು ಪ್ರತಿನಿಧಿಸಬೇಕು. ಅದನ್ನು ಮಾಡದಿದ್ದರೆ ಅವನು ಎರಡು ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಒಂದು ಅವನು ಇಕ್ಕಟ್ಟಿಗೆ ಸಿಲುಕಿಕೊಳ್ಳುತ್ತಾನೆ. ಇಲ್ಲವೆ ಅವನು ಸಮೂಹದ ಸದಸ್ಯರ ಕೆಲಸದ ಭಾಗವಹಿಸುವಿಕೆಯ ಜವಾಬ್ದಾರಿಯ ಕಾರ್ಯವನ್ನು ನಿರ್ಮೂಲಗೊಳಿಸುತ್ತಾನೆ.

**ಬ. ಯೋಜನಾಕಾರ :** ಅವನು ಸಮೂಹದ ಸದಸ್ಯರು ತಮ್ಮ ಗುರಿಗಳನ್ನು ಹೇಗೆ ಸಾಧಿಸಬೇಕೆಂಬುದರ ಕುರಿತು ಮಾರ್ಗೋಪಾಯಗಳನ್ನು ನಿರ್ಧರಿಸಬೇಕು.

**ಕ. ನೀತಿ ನಿರ್ಮಾಪಕ :** ಸಾಮಾನ್ಯವಾಗಿ ಎಲ್ಲ ನಾಯಕರ ಅತಿ ಮಹತ್ವದ ಕಾರ್ಯವೆಂದರೆ ಸಮೂಹದ ಗುರಿಗಳು ಮತ್ತು ನೀತಿಗಳನ್ನು

✍ **ಡಾ. ಬಿ.ಸಿ. ಪಾಟೀಲ**, ಪ್ರಾಚಾರ್ಯರು, ಕೆ.ಎಲ್.ಇ. ಶಿಕ್ಷಣ ಮಹಾವಿದ್ಯಾಲಯ, ಬೆಳಗಾವಿ.

ರೂಪಿಸುವುದಾಗಿದೆ. ಸಾಮಾನ್ಯವಾಗಿ ಇವುಗಳನ್ನು ಮೂರು ಮೂಲಗಳಿಂದ ಆಕರಗಳಿಂದ ರೂಪಿಸಬಹುದು.

1. ಅಧಿಕಾರಿಗಳಿಂದ ಸಮೂಹಕ್ಕೆ ನಿರ್ದೇಶಿತ ನೀತಿ
2. ಸ್ವತಃ ಸಮೂಹದಿಂದಲೇ ನಿರ್ದೇಶಿತ ನೀತಿ
3. ಸ್ವತಃ ನಾಯಕನಿಂದ ನಿರ್ದೇಶಿತ ನೀತಿ

**ಡ. ಪರಿಣಿತ :** ನಾಯಕನಾದವನು ನಡೆದಾಡುವ ವಿಶ್ವಕೋಶದಂತೆ ಇರಬೇಕು. ಅವನು ತನ್ನ ಕ್ಷೇತ್ರದ ಪ್ರತಿಯೊಂದು ವಿಷಯ ಮಾಹಿತಿ ಮತ್ತು ಕೌಶಲ್ಯ ಅರಿತಿರಬೇಕು.

**ಇ. ಬಾಹ್ಯ ಸಮೂಹದ ಪ್ರತಿನಿಧಿ :** ಅವನು ತನ್ನ ಕಾರ್ಯಾಲಯದ ವಕ್ತಾರನಂತೆ ಕೆಲಸ ಮಾಡಬೇಕು. ಹೊರಗಿನ ಮತ್ತು ಒಳಗಿನ ಸಂವಹನಗಳೆರಡೂ ಅವನ ಮುಖಾಂತರ ನಡೆಯಬೇಕು.

**ಫ. ಅಂತರಸಂಬಂಧಗಳ ನಿಯಂತ್ರಣಾಧಿಕಾರಿ :** ನಿರ್ಣಾಯಕ ಸಮೂಹ ರಚನೆಯ ನಿರ್ದಿಷ್ಟ ಅಂಶಗಳಲ್ಲಿ ನಿಯಂತ್ರಿಸುತ್ತಾನೆ ಮತ್ತು ಹಾಗೆ ಮಾಡುವುದರಿಂದ ಅವನು ಸಮೂಹ ಸಂಬಂಧಗಳಲ್ಲಿ ನಿಯಂತ್ರಣ ಹೊಂದುತ್ತಾನೆ.

**ಳ. ನಿರ್ಣಾಯಕ ಮತ್ತು ಮಧ್ಯವರ್ತಿ :** ಅವನು ಸಮೂಹದ ಆಂತರಿಕ ಸಂಘರ್ಷಗಳನ್ನು ನಿವಾರಿಸಬೇಕು. ಆಗ ಅವನು ನ್ಯಾಯಾಧೀಶನಂತೆ ವರ್ತಿಸಬೇಕಾಗುತ್ತದೆ. ಸಮೂಹದಲ್ಲಿಯ ಒಡಕನ್ನು ಕಡಿಮೆಗೊಳಿಸುವ ಅಥವಾ ಪ್ರೋತ್ಸಾಹಿಸುವ ಅಧಿಕಾರ ನಾಯಕನ ಕೈಯಲ್ಲಿರುತ್ತದೆ.

**ಯ. ಮಾದರಿ :** ನಾಯಕನಾದವನು ಸಮೂಹದ ಸದಸ್ಯರಿಗೆ ವರ್ತನೆಯ ಮಾದರಿಯಾಗಿರಬೇಕು. ತನ್ನ ಸಮೂಹದ ಸದಸ್ಯರಿಗೆ ಹೇಗಿರಬೇಕು ಮತ್ತು ಏನು ಮಾಡಬೇಕು ಎಂಬುದಕ್ಕೆ ಮೂರ್ತ ರೂಪವಾಗಬೇಕು.

**ಜ. ಸಮೂಹದ ಸಂಕೇತ :** ಸಮೂಹದ ಏಕತೆಯನ್ನು ಪ್ರತಿಯೊಂದು ಸಂಸ್ಥೆಯ ಹೆಚ್ಚಿಸಬೇಕು. ಅದರಿಂದ ಸಮೂಹದ ಪ್ರತ್ಯೇಕವಾದ ಅಸ್ತಿತ್ವ ರೂಪಗೊಳ್ಳುತ್ತದೆ. ಸಮವಸ್ತ್ರ ಬ್ಯಾಡ್ಜಿಸ್ ಧರಿಸುವ ಮುಖಾಂತರ ಅವರಲ್ಲಿ ಏಕತಾನತೆಯನ್ನು ತೋರಬೇಕು.

**ಝ. ಆದರ್ಶವಾದಿ :** ಸಮೂಹದ ಆದರ್ಶಗಳನ್ನು ನಂಬುಗೆಗಳು, ಮೌಲ್ಯಗಳು, ನಿಯಮಾವಳಿಗಳು ಸಮೂಹದಿಂದ, ನಾಯಕನಿಂದ ಅಥವಾ ಅಧಿಕಾರಿಗಳಿಂದ ನಿರ್ಧರಿಸಲ್ಪಡಬೇಕು.

**ಮ. ತಂದೆಯ ಪ್ರತೀಕ :** ನಾಯಕನು ವ್ಯಕ್ತಿಯ ಧನಾತ್ಮಕ, ಸಂವೇಗಾತ್ಮಕ ಭಾವನೆಗಳ ಮೇಲೆ ಪರಿಪೂರ್ಣ ಬೆಳಕು ಚೆಲ್ಲಬೇಕು. ಅವನೇ ವ್ಯಕ್ತಿಯಲ್ಲಿ ಹುದುಗಿರುವ ಭಾವನೆಗಳನ್ನು ಗುರುತಿಸಬೇಕು. ಪ್ರತಿಯೊಬ್ಬ ಸದಸ್ಯನಿಗೂ ತಂದೆಯ ಸಮಾನ ಇದ್ದು ಸಮೂಹದ ಗುರಿಗಳನ್ನು ಈಡೇರಿಸಲು ಪ್ರೇರೇಪಣೆ ನೀಡಬೇಕು. ಅವರ ಭಾವನೆಗಳು, ಅನಿಸಿಕೆಗಳನ್ನು ಬೇಕು ಬೇಡಗಳನ್ನು ಕೇಳಿ ತಿಳಿದುಕೊಂಡು ಕೂಡಲೇ ಸ್ಪಂದಿಸಬೇಕು.

**ಗ. ಪಾಪಬಲಿ :** ಅವನು ಆಶಾಭಂಗರಾದವರಿಗೆ, ನಿರಾಶ ವಾದಿಗಳು, ವಂಚಿತ ಸಮೂಹದ ಆಕ್ರಮಣಕ್ಕೆ ಪಾಪಬಲಿಯಂತೆ ಗುರಿಯಾಗಬೇಕು. ಬೇರೆಯವರ ತಪ್ಪುಗಳನ್ನು ತಾನೇ ಹೊತ್ತುಕೊಳ್ಳಬೇಕು.

ಸೂಚನೆ ನೀಡುವಿಕೆ, ಮೇಲ್ವಿಚಾರಣೆ ಮಾಡುವಿಕೆ, ಮಾಹಿತಿ ನೀಡುವಿಕೆ, ಆದೇಶಿಸುವಿಕೆ, ಸಮನ್ವಯಗೊಳಿಸುವಿಕೆ ನಿರ್ಣಯ ಕೈಗೊಳ್ಳುವಿಕೆಗಳು ಪ್ರತಿಯೊಬ್ಬ ನಾಯಕನು ಮಾಡಲೇಬೇಕಾದ ವಿಶಿಷ್ಟ ಮತ್ತು ಪ್ರಮುಖ ಕಾರ್ಯಗಳಾಗಿವೆ.

## ಆಕರ ಗ್ರಂಥಗಳು


- ಕೊಂಗವಾಡ ಎನ್. ಬಿ. (2005) ಶಿಕ್ಷಣದಲ್ಲಿ ನಾಯಕತ್ವ
- ಶ್ರೀಮತಿ ಎನ್. ಲಕ್ಷ್ಮಿ (2005) ಶಿಕ್ಷಣದಲ್ಲಿ ನಾಯಕತ್ವ
- ಕೊಂಗವಾಡ ಎನ್. ಬಿ. (2005) ಶೈಕ್ಷಣಿಕ ನಿರ್ವಹಣೆ
- ಮ್ಯಾಗೇರಿ ಸಿ. ವ್ಹಿ. (2005) ಶೈಕ್ಷಣಿಕ ನಿರ್ವಹಣೆ


■■

# ಕುಟುಂಬ ಮತ್ತು ಶಿಕ್ಷಣ
# (FAMILY AND EDUCATION)

ಕುಟುಂಬವು ಸಮಾಜವೆಂಬ ಕಟ್ಟಡದ ಮೂಲೆಗಲ್ಲಾಗಿದೆ. ಮಾನವನು ನಿರ್ಮಿಸಿಕೊಂಡಿರುವ ಹಲವಾರು ಸಂಘಗಳಲ್ಲಿ ಕುಟುಂಬವು ಪ್ರಮುಖವಾದುದು. ಕುಟುಂಬವು ಅತೀ ಚಿಕ್ಕದಾದ ಸಂಘವೆನಿಸಿದರೂ ಅದರ ಕೀರ್ತಿ ಮಾತ್ರ ತುಂಬಾ ಹಿರಿದಾದುದು ಕುಟುಂಬದ ಆಧಾರದ ಮೇಲೆಯೇ ಇನ್ನುಳಿದ ಸಂಘ–ಸಂಸ್ಥೆಗಳು ನಿಂತಿವೆ. ಕುಟುಂಬವು ವಿಶ್ವವ್ಯಾಪಕವಾಗಿದ್ದು ಕುಟುಂಬವಿಲ್ಲದ ಸಮಾಜವಿಲ್ಲ.

**ಅರ್ಥ :** ಕುಟುಂಬವು ಮಾನವ ಜೀವಿಗಳ ಒಂದು ಸಮೂಹ ಕುಟುಂಬವು ಗಂಡ, ಹೆಂಡತಿ ಮಕ್ಕಳು ಮತ್ತು ಇತರ ಕೆಲ ಸಂಬಂಧಿಕರನ್ನು ಒಳಗೊಂಡಿರುವುದು. ಫ್ಯಾಮಿಲಿ ಎಂಬ ಶಬ್ದ ಲ್ಯಾಟಿನ್ ಭಾಷೆಯ ಫ್ಯಾಮುಲಸ್ (Famulus) ಎಂಬ ಶಬ್ದದಿಂದ ಉತ್ಪತ್ತಿಯಾಗಿದೆ. ಲ್ಯಾಟಿನ್ ಭಾಷೆಯಲ್ಲಿ ಫ್ಯಾಮುಲಸ್ ಎಂದರೆ ಆಳು ಮಗ ಎಂಬರ್ಥವಾಗುವದು.

ಹಲವಾರು ಸಮಾಜಶಾಸ್ತ್ರಜ್ಞರು ಈ ಕುಟುಂಬದ ಬಗೆಗೆ ಅರ್ಥ ವಿವರಣೆಯನ್ನು ಮಾಡಿದ್ದಾರೆ. ಅವರಲ್ಲಿ ಪ್ರಮುಖವಾಗಿ ಆಗ್ಬರ್ನ್ ಮತ್ತು ನಿಮಕಾಫ್ ''ಸಂತತಿ ಸಹಿತ ಇಲ್ಲವೆ ಸಂತತಿ ರಹಿತ ದೀರ್ಘಕಾಲ ಬಾಳಿಕೆ ಬರುವ ಗಂಡ ಹೆಂಡತಿಯರ ಸಮೂಹವೇ ಕುಟುಂಬ'' ಎಂದಿದ್ದಾರೆ.

ಮೆಕೈವರ ಮತ್ತು ಪೇಜ್‌ರ ಅಭಿಪ್ರಾಯದಂತೆ, ''ಸಂತಾನೋತ್ಪತ್ತಿ ಮತ್ತು ಮಕ್ಕಳ ಪಾಲನೆ ಪೋಷಣೆಯ ಕಾರ್ಯಗಳನ್ನು ನಿರ್ವಹಿಸುವದರ ಸಲುವಾಗಿ ಲಿಂಗ ಸಂಬಂಧದ ಆಧಾರದ ಮೇಲೆ ರಚಿತವಾದ, ಸಾಕಷ್ಟು ಖಚಿತವಾದ ದೀರ್ಘಕಾಲ ಬಾಳಿಕೆ ಬರುವ ಸಮೂಹವೇ ಕುಟುಂಬ.''

ಈಲಿಯಟ್ ಮತ್ತು ಮೆರಿಲ್ ಅವರು ಹೇಳಿರುವಂತೆ, ''ಜೈವಿಕ ಸಾಮಾಜಿಕ ಸಂಬಂಧಗಳೊಂದಿಗೆ ಗಂಡ ಹೆಂಡತಿ ಮತ್ತು ಮಕ್ಕಳು ಬೆರೆತಿರುವುದೇ ಕುಟುಂಬ''.

ತಂದೆ, ತಾಯಿ, ಮಕ್ಕಳ ಸಮೂಹವೇ ಕುಟುಂಬ, ಇದು ಅಜ್ಜ, ಅಜ್ಜಿ, ತಂದೆ, ತಾಯಿ, ಮಕ್ಕಳು, ಮೊಮ್ಮಕ್ಕಳನ್ನು ಒಳಗೊಂಡಂತಹ ವಿಶಾಲ ಅಂದರೆ ಅವಿಭಕ್ತ ಕುಟುಂಬವಿರಬಹುದು. ಇಲ್ಲವೆ ತಂದೆ, ತಾಯಿ ಮತ್ತು ಮಕ್ಕಳನ್ನು ಮಾತ್ರ ಹೊಂದಿರುವ ವಿಭಕ್ತ ಅಥವಾ ಚಿಕ್ಕ ಆಧುನಿಕ ಅಣುಕುಟುಂಬವಿರಬಹುದು. ಒಟ್ಟಾರೆ ಕುಟುಂಬದ ಹಿರಿದಾದ ಅರ್ಥವನ್ನು ಕಿರಿದಾದ ಯಾವದೇ ಒಂದು ವ್ಯಾಖ್ಯೆಯ ಚೌಕಟ್ಟಿನಲ್ಲಿ ಹಿಡಿದಿಡುವುದು ಸಾಧ್ಯವಿಲ್ಲ. ಸಮಾಜಶಾಸ್ತ್ರೀಯ ದೃಷ್ಟಿಯಿಂದ ನೋಡಿದಾಗ ಕುಟುಂಬವು ಸಮಾಜದ ಸೂಕ್ಷ್ಮ ಪ್ರತಿರೂಪವಾಗಿದೆ. ಅಂದರೆ ಸಮಾಜದಲ್ಲಿ ಕಂಡುಬರುವ ಮುಖ್ಯಾಂಶಗಳೆಲ್ಲವೂ ಕುಟುಂಬದ ಪ್ರತಿಬಿಂಬವಾಗಿದೆ.

## ಕುಟುಂಬದ ಪ್ರಮುಖ ಲಕ್ಷಣಗಳು

### 1. ಕುಟುಂಬವು ವಿಶ್ವವ್ಯಾಪಕವಾದದ್ದು (Universality)

ಪ್ರಪಂಚದ ಎಲ್ಲ ಸಮಾಜಗಳಲ್ಲಿಯೂ ಕೌಟುಂಬಿಕ ವ್ಯವಸ್ಥೆಯಿದೆ. ಯಾವದೇ ಕಾಲ, ದೇಶ ತೆಗೆದುಕೊಂಡರೂ ಅಲ್ಲಿ ಕೌಟುಂಬಿಕ ಜೀವನ ಸಮಾಜದ ಮುಖ್ಯ ಘಟಕವಾಗಿದ್ದುದು ಕಂಡುಬರುವದು. ಆದಿವಾಸಿಗಳ ಜೀವನದಲ್ಲಿಯೂ ಕುಟುಂಬವಿದೆ. ಪ್ರಾಚೀನ ನಾಗರಿಕತೆಯಲ್ಲಿಯೂ ಕುಟುಂಬ ಇತ್ತು ಅಷ್ಟೇ ಏಕೆ ಮಾನವನಿಗಿಂತ ಕೆಳಮಟ್ಟದಲ್ಲಿರುವ ಕೀಳುಪ್ರಾಣಿಗಳಲ್ಲಿಯೂ ಕುಟುಂಬ ವ್ಯವಸ್ಥೆ ಇದೆ ಎಂದು ಫ್ರೆಂಚ್ ಸಮಾಜಶಾಸ್ತ್ರಜ್ಞನಾದ ಫೇಬರ್ ಎಂಬುವವರು ಅಭಿಪ್ರಾಯಪಟ್ಟಿರುವರು.

### 2. ಕುಟುಂಬವು ಆದರ್ಶಗಳ ದ್ಯೋತಕವಾಗಿದೆ (Ideality)

ಕುಟುಂಬವು ದಾಂಪತ್ಯ ಪ್ರೇಮ, ಸಂತಾನೋತ್ಪತ್ತಿ ಮಾತೃಪ್ರೇಮ, ಪಿತೃವಾತ್ಸಲ್ಯ, ಮಕ್ಕಳ ಪಾಲನೆ ಪೋಷಣೆ, ಅವರ ಅಭಿವೃದ್ಧಿ ಮುಂತಾದ ಸಂಗತಿಗಳನ್ನು ಒಳಗೊಂಡಿದೆ. ಕುಟುಂಬದ ಸದಸ್ಯರು ಸ್ವಾರ್ಥ ಪರರಾಗಿರದೇ ಪರಸ್ಪರ ಸುಖ ದುಃಖಗಳಲ್ಲಿ ಪಾಲುಗಾರರಾಗುತ್ತಾರೆ. ಕುಟುಂಬದ ಸದಸ್ಯರು ಕುಟುಂಬದ ಕಲ್ಯಾಣಕ್ಕಾಗಿ ತಮ್ಮ ವೈಯಕ್ತಿಕ ಸ್ವಾರ್ಥಗಳನ್ನು ಬಲಿಕೊಡುತ್ತಾರೆ.

### 3. ಪ್ರಾರಂಭಿಕ ಪ್ರಭಾವ (Formality Influence)

ಮಗು ಹುಟ್ಟುವದು ಕುಟುಂಬದಲ್ಲಿ, ಬೆಳೆಯುವದು ಕುಟುಂಬದಲ್ಲಿ, ಮಗು ಚಿಕ್ಕದಾಗಿರುವಾಗ ಅದರ ಮನಸ್ಸು ತುಂಬಾ ನಿರ್ಮೂಲವಾಗಿರುತ್ತದೆ. ಬಿಳಿಯ ಹಾಳೆಯಂತಿರುತ್ತದೆ. ಅದರ ಮೇಲೆ ಮಂಗನ ಚಿತ್ರವನ್ನಾದರೂ ಬಿಡಿಸಬಹುದು. ಮಹಾಪುರುಷನ ಚಿತ್ರವನ್ನಾದರೂ ಬಿಡಿಸಬಹುದು. ಈ ಚಿತ್ರ ಬಿಡಿಸುವವರು ಕುಟುಂಬದಲ್ಲಿಯ ತಂದೆ ತಾಯಿಗಳು, ಸಹೋದರರು, ಸಹೋದರಿಯರು, ಮೂರು ವರುಷದ ಬುದ್ಧಿ ನೂರು ವರುಷ ಎಂಬಂತೆ ಮಗು ಚಿಕ್ಕದಿದ್ದಾಗ ಕುಟುಂಬದಲ್ಲಿ ಏನನ್ನು ಕಲಿಯುವುದೋ ಅದನ್ನೇ ತನ್ನ ಜೀವನಪರ್ಯಂತ ಮುಂದುವರೆಸಿಕೊಂಡು ಬರುತ್ತದೆ. ಪ್ರೀತಿ, ಅನುಕಂಪ, ದಯೆ, ಪರೋಪಕಾರ, ತ್ಯಾಗ, ಶೀಲ, ಭಕ್ತಿ, ನಂಬಿಕೆ ಮುಂತಾದ ಜೀವನ ಮೌಲ್ಯಗಳ ಬಗೆಗೆ ಕುಟುಂಬವು ಶಿಕ್ಷಣ ಕೊಡುವದು ವ್ಯಕ್ತಿ ಕುಟುಂಬದೊಂದಿಗೆ ಜೀವನದ ಅಂತ್ಯದವರೆಗೂ ಸಂಬಂಧವನ್ನು ಇಟ್ಟುಕೊಳ್ಳಬೇಕಾಗುತ್ತದೆ. ವ್ಯಕ್ತಿಯು ಗೆಳೆಯರನ್ನು ಮರೆಯಬಹುದು. ಶಿಕ್ಷಕರನ್ನು ಮರೆಯಬಹುದು. ಆದರೆ ಕುಟುಂಬದ ಸದಸ್ಯರನ್ನು ಮರೆಯಲು ಸಾಧ್ಯವಿಲ್ಲ. ಪ್ರಾರಂಭಿಕ ಹಂತದಿಂದಲೇ ಅದು ವ್ಯಕ್ತಿಯ ಜೀವನದ ಮೇಲೆ ಪ್ರಭಾವವನ್ನು ಬೀರುತ್ತಿರುತ್ತದೆ.

### 4. ಚಿಕ್ಕ ಗಾತ್ರ (Small Size)

ಕುಟುಂಬವು ಗಾತ್ರದಲ್ಲಿ ಚಿಕ್ಕದು ಕೀರ್ತಿಯಲ್ಲಿ ಹಿರಿಯದು. ಇದೊಂದು ಸಮಾಜದ ಕೇಂದ್ರಬಿಂದು. ಇದು ಸಮಾಜದಲ್ಲಿ ಇನ್ನುಳಿದ ಸಂಘ ಸಂಸ್ಥೆಗಳೊಂದಿಗೆ ಹೋಲಿಕೆ ಮಾಡಿದಾಗ ತುಂಬಾ ಕಿರಿಯದು. ಸಂಯುಕ್ತ ಕುಟುಂಬ ಮಾತ್ರ ಗಾತ್ರದಲ್ಲಿ ದೊಡ್ಡದು. ನಾಗರಿಕತೆ ಹೆಚ್ಚುತ್ತಾ ನಡೆದಂತೆ ಕುಟುಂಬದ ಗಾತ್ರ ಚಿಕ್ಕದಾಗುತ್ತಾ ನಡೆದಿದೆ. ಅಮೆರಿಕೆಯಂತಹ ರಾಷ್ಟ್ರಗಳಲ್ಲಿ ಸಂತಾನರಹಿತ ಕುಟುಂಬಗಳ ಸಂಖ್ಯೆ, ದಿನೇ ದಿನೇ ಹೆಚ್ಚುತ್ತಾ ನಡೆದಿದೆ.

✍ **ಡಾ. ಶೋಭಾ ನಾಯ್ಕರ,** ಉಪನ್ಯಾಸಕರು, ಡಯಟ್ ಧಾರವಾಡ,

**5. ಸಮಾಜದ ಕೇಂದ್ರ ಬಿಂದು** (Central Point of Society)

ಸಾಮಾಜಿಕ ರಚನೆಯಲ್ಲಿ ಕುಟುಂಬಕ್ಕೆ ಕೇಂದ್ರಿಯ ಸ್ಥಾನವಿದೆ. ಮಾನವನ ಇಡೀ ಜೀವನವು ಕುಟುಂಬವನ್ನು ಆಧರಿಸಿರುವದು. ಇದೊಂದು ಕಿರಿಯ ಸಮಾಜವಿದ್ದಂತೆ ಬೇರೆ ಸಂಘ ಸಂಸ್ಥೆಗಳು ನಿರ್ವಹಿಸಲಾಗದಂತಹ ಹಲವಾರು ಮೂಲಭೂತ ಕಾರ್ಯಗಳನ್ನು ಕುಟುಂಬ ನಿರ್ವಹಿಸುವದು. ಚೀನಾ ದೇಶದ ತತ್ವಜ್ಞಾನಿಯಾದ ಕನ್‌ಫ್ಯೂಶಿಯಸ್ ''ಸಮಾಜವು ಅಭಿವೃದ್ಧಿ ಹೊಂದಬೇಕಾದರೆ ಮೊದಲು ಕುಟುಂಬವನ್ನು ಅಭಿವೃದ್ಧಿ ಪಡಿಸು''ಎಂದು ಹೇಳಿದ್ದಾರೆ.

**6. ಪರಸ್ಪರ ಜವಾಬ್ದಾರಿ** (Responsibility)

ಕುಟುಂಬದಲ್ಲಿ ಸದಸ್ಯರು ತಮ್ಮದೇಯಾದ ಜವಾಬ್ದಾರಿಯನ್ನು ಹೊತ್ತು ಆ ಜವಾಬ್ದಾರಿಗನುಗುಣವಾಗಿ ಕಾರ್ಯನಿರ್ವಹಿಸುತ್ತಾರೆ. ಆಹಾರ ಗಳಿಕೆ, ಸಂತಾನೋತ್ಪತ್ತಿ, ಶಿಶುಪಾಲನೆ, ಹಿರಿಯರ ಆರೈಕೆ, ಕುಟುಂಬದ ಗೌರವವನ್ನು ಕಾಪಾಡುವದು ಮುಂತಾದ ಜವಾಬ್ದಾರಿಗಳನ್ನು ಹೊಂದಿದ್ದಾರೆ. ಎಲ್ಲರೂ ಐಕ್ಯತೆಯಿಂದ ತ್ಯಾಗ ಮನೋಭಾವದಿಂದ ಕೆಲಸ ಮಾಡುತ್ತಾರೆ. ಮಕ್ಕಳ ಕಲ್ಯಾಣ ದೃಷ್ಟಿಯಿಂದ ತಂದೆ ತಾಯಿಗಳು ತಮ್ಮ ಮೂಲಭೂತ ಅವಶ್ಯಕತೆಗಳನ್ನು ಕಡೆಗಣಿಸುತ್ತಾರೆ.

**7. ಕುಟುಂಬದ ಸ್ಥಿರತೆ ಮತ್ತು ಬದಲಾವಣೆ** (Stability and Change)

ಶ್ರೇಷ್ಠ ಸಮಾಜಶಾಸ್ತ್ರಜ್ಞರಾದ ಮೆಕೈವರ್ ಮತ್ತು ಪೇಜರು ಹೇಳುವಂತೆ, ಕುಟುಂಬವು ಒಂದು ವ್ಯಾಪಕವಾದ ಸ್ಥಿರವಾದ ವ್ಯವಸ್ಥೆಯಾಗಿದೆ. ಮಾನವನ ಮೂಲಭೂತ ಬೇಡಿಕೆಗಳನ್ನು ಪೂರೈಸುವ ಕುಟುಂಬ ಒಂದು ಶಾಶ್ವತ ಸಂಘವಾಗಿದೆ. ಇದು ಎಲ್ಲಾ ಕಾಲಗಳಲ್ಲಿಯೂ ಸ್ಥಿರವಾಗಿ ಉಳಿದುಕೊಂಡು ಬಂದಿದೆ. ಅದೇ ರೀತಿಯಾಗಿ ಕುಟುಂಬ ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಅನುಭವಿಸಿದೆ. ಹಿಂದಿನ ಮತ್ತು ಇಂದಿನ ಕುಟುಂಬದ ರಚನೆ ಹಾಗೂ ಕಾರ್ಯಗಳನ್ನು ಅವಲೋಕನ ಮಾಡಿದಾಗ ಕುಟುಂಬವು ಬದಲಾವಣೆಯಾಗಿದೆ ಎಂಬುದು ವಿಧಿತವಾಗುವುದು.

**8. ಕುಟುಂಬದ ಕಾರ್ಯಗಳು** (Functions of Family)

ಮಾನವ ಸಮಾಜದ ಮೂಲಭೂತ ಘಟಕವಾದ ಕುಟುಂಬವು ಕೇವಲ ಯಾವದೋ ಒಂದು ಕಾರ್ಯವನ್ನು ನಿರ್ವಹಿಸಲಾರದು. ಅನೇಕ ಕಾರ್ಯಗಳನ್ನು ಇದು ನಿರ್ವಹಿಸುವುದು. ಕೆ. ಡೇವಿಸ್, ರೀಡ್, ಲುಂಡಬರ್ಗ್, ಮೆಕೈವರ್ ಮತ್ತು ಪೇಜ್ ಮುಂತಾದವರು ಕುಟುಂಬದ ಕಾರ್ಯಗಳನ್ನು ಅನೇಕ ಬಗೆಯಲ್ಲಿ ವಿಂಗಡಿಸಿದ್ದಾರೆ. ಮೆಕೈರವರು ಕುಟುಂಬದ ಕಾರ್ಯಗಳನ್ನು ಎರಡು ಪ್ರಕಾರಗಳಲ್ಲಿ ವಿಂಗಡಿಸಿದ್ದಾರೆ.

1. ಪ್ರಾಥಮಿಕ ಕಾರ್ಯಗಳು
2. ಮಾಧ್ಯಮಿಕ ಕಾರ್ಯಗಳು

ಕುಟುಂಬದ ಪ್ರಾಥಮಿಕ ಕಾರ್ಯಗಳಲ್ಲಿ ಅವರು ಮೂರು ಪ್ರಕಾರಗಳನ್ನು ಮಾಡಿದ್ದಾರೆ.

1. ಲೈಂಗಿಕ ಬಯಕೆಯ ಪೂರೈಕೆ
2. ಮಕ್ಕಳ ಪಾಲನೆ ಪೋಷಣೆ
3. ಗೃಹ ವಾತಾವರಣ ನಿರ್ಮಾಣ

ಈ ಮೂರು ಕಾರ್ಯಗಳನ್ನು ಪ್ರಪಂಚದಲ್ಲಿರುವ ಎಲ್ಲಾ ಕುಟುಂಬಗಳು ನಿರ್ವಹಿಸುವದರಿಂದ ಇವುಗಳನ್ನು ಪ್ರಾಥಮಿಕ ಕಾರ್ಯಗಳೆಂದು ಕರೆಯಲಾಗಿದೆ.

**1. ಪ್ರಾಥಮಿಕ ಕಾರ್ಯಗಳು** (Primary Functions)

**1. ಲೈಂಗಿಕ ಬಯಕೆಯ ಪೂರೈಕೆ :** ಲೈಂಗಿಕ ಬಯಕೆಯು ಒಂದು ಸಹಜ ಪ್ರವೃತ್ತಿಯಾಗಿದ್ದು ಸ್ತ್ರೀ ಪುರುಷ ಇಬ್ಬರಲ್ಲಿಯೂ ಅದರ ವಾಸನೆ ಇದೆ. ಇದು ಮಾನವರಲ್ಲಿ ಗೌಪ್ಯವಾಗಿರುವದು. ಇದನ್ನು ಆತ ಸಮಾಜದ ಮನ್ನಣೆಗನುಗುಣವಾಗಿ ಪೂರೈಸಿಕೊಳ್ಳಬೇಕು. ಕುಟುಂಬವು ವಿಧಿಬದ್ಧವಾಗಿ ಲೈಂಗಿಕ ಬಯಕೆಯನ್ನು ಈಡೇರಿಸಲು ವ್ಯವಸ್ಥೆ ಮಾಡುವದಲ್ಲದೆ ಅದರ ಮೇಲೆ ನಿಯಂತ್ರಣವನ್ನು ಹೊಂದಿದೆ. ಮನು, ವಾತ್ಸಾಯನ ಮುಂತಾದ ಚಿಂತಕರು ಲೈಂಗಿಕ ಸಂಬಂಧದ ವ್ಯವಸ್ಥೆಯು ಕುಟುಂಬದ ಪ್ರಮುಖ ಕಾರ್ಯ ಎಂದು ವರ್ಣಿಸಿದ್ದಾರೆ. ಕುಟುಂಬವು ಅನೈತಿಕ ಹಾಗೂ ಕಾನೂನು ಬಾಹಿರ ಲೈಂಗಿಕ ಸಂಬಂಧವನ್ನು ಸಹಿಸುವದಿಲ್ಲ. ಹ್ಯಾವಲಾಕ್ ಎಂಬ ಚಿಂತಕ ಹೇಳುವಂತೆ, ಲೈಂಗಿಕ ಹೊಂದಾಣಿಕೆ ಇಲ್ಲದ ವಿವಾಹವು ಜಾರುವ ಮರಳಿನ ಮೇಲಿರುವ ಮನೆಯಂತಾಗುತ್ತದೆ.

**2. ಮಕ್ಕಳ ಪಾಲನೆ ಪೋಷಣೆ :** ಪ್ರಜೋತ್ಪಾದನೆ ಮತ್ತು ಮಕ್ಕಳ ಪಾಲನೆ ಪೋಷಣೆಯು ಕುಟುಂಬದ ಅತಿ ಮುಖ್ಯವಾದ ಕಾರ್ಯವಾಗಿದೆ. ಮಾನವ ಶಿಶು ಜನಿಸಿದ ಕೆಲವು ವರ್ಷಗಳವರೆಗೆ ಅಸಹಾಯಕ ಸ್ಥಿತಿಯಲ್ಲಿರುತ್ತದೆ. ಇಂಥ ಅಸಹಾಯಕ ಸ್ಥಿತಿಯಲ್ಲಿ ಕುಟುಂಬವು ಮಗುವನ್ನು ಪಾಲಿಸದಿದ್ದರೆ ಮಗುವಿನ ಬೆಳವಣಿಗೆ ಕುಂಠಿತಗೊಳ್ಳುವದು. ತಂದೆ ತಾಯಿಗಳು ಮಗುವಿಗೆ ಪ್ರೀತಿ, ವಾತ್ಸಲ್ಯವನ್ನು ಉಣಿಸಿ, ಬೆಳೆಸುವರು. ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯು ಕುಟುಂಬದಿಂದಲೇ ಸಾಧ್ಯವಾಗುವದು.

**3. ಗೃಹ ವಾತಾವರಣ :** ಮನೆ ಎಂದರೆ ಕೇವಲ ಇಟ್ಟಿಗೆ, ಸಿಮೆಂಟ ಮತ್ತು ಪೀಠೋಪಕರಣಗಳನ್ನು ಹೊಂದಿರುವ ಒಂದು ರಚನೆ ಮಾತ್ರವಲ್ಲ. ಅದು ದೇವರ ಮನೆ, ಅಡುಗೆ ಮನೆ, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಪ್ರೀತಿ ವಾತ್ಸಲ್ಯಗಳ ಜೀವಂತ ಚಟುವಟಿಕೆಗಳನ್ನು ಹೊಂದಿದೆ. ದುಡಿದು ಬೆಂಡಾಗಿ ಬಂದ ದೇಹ ಮನಸ್ಸುಗಳಿಗೆ ಉಲ್ಲಾಸಮಯ ವಾತಾವರಣವನ್ನು ಕುಟುಂಬವು ಒದಗಿಸುವಂತಿರಬೇಕು. ನಗುಮುಖದ ಹೆಂಡತಿ, ಲವಲವಿಕೆಯಿಂದ ಇರುವ ಮಕ್ಕಳು ಬೇಜಾರವನ್ನು ಹೊಡೆದು ಹಾಕಬಲ್ಲದು. ಮನೆಯು ಸುಖ, ಸಂತೋಷ, ನೆಮ್ಮದಿ, ಪ್ರೀತಿ, ವಾತ್ಸಲ್ಯಗಳನ್ನು ದೊರಕಿಸುವ ಸ್ವರ್ಗವಿದ್ದಂತೆ.

**2. ಮಾಧ್ಯಮಿಕ ಕಾರ್ಯಗಳು** (Secondary Functions)

ಕುಟುಂಬದ ಮಾಧ್ಯಮಿಕ ಕಾರ್ಯಗಳನ್ನು ಪ್ರಮುಖವಾಗಿ ಐದು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

1. ಆರ್ಥಿಕ ಕಾರ್ಯಗಳು
2. ಶೈಕ್ಷಣಿಕ ಕಾರ್ಯಗಳು
3. ಧಾರ್ಮಿಕ ಕಾರ್ಯಗಳು
4. ಮನರಂಜನಾ ಕಾರ್ಯಗಳು
5. ಸಾಮಾಜೀಕರಣ

ಈ ಮೇಲಿನ ಐದು ಕಾರ್ಯಗಳಲ್ಲಿ ಸಾಮಾಜೀಕರಣವೊಂದನ್ನು ಹೊರತುಪಡಿಸಿ, ಉಳಿದ ನಾಲ್ಕು ಕಾರ್ಯಗಳು ಕುಟುಂಬದಿಂದ ತಪ್ಪಿ ಹೋಗಿ ಬೇರೆ ಸಂಘ ಸಂಸ್ಥೆಗಳಿಗೆ

ವರ್ಗವಾಗಿದೆ.

**1. ಆರ್ಥಿಕ ಕಾರ್ಯಗಳು** (Economic Functions) : ಮೊದಲು ಕುಟುಂಬಗಳು ಉತ್ಪಾದನಾ ಮತ್ತು ಉಪಭೋಗದ ಘಟಕವಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಅಂದರೆ ಸಾಂಪ್ರದಾಯಿಕ ಕುಟುಂಬಗಳು ತಮಗೆ ಅವಶ್ಯವಾದ ಸಾಮಗ್ರಿಗಳನ್ನು ತಾವೇ ತಯಾರಿಸಿಕೊಳ್ಳುತ್ತಿದ್ದವು. ಹಿಂದಿನ ಕಾಲದಲ್ಲಿ ಪ್ರತಿಯೊಂದು ಕುಟುಂಬವು ತನ್ನದೇಯಾದ ಕುಲಕಸಬನ್ನು ಹೊಂದಿತ್ತು, ಅದು ಬಡಿಗತನ ಇರಬಹುದು, ಕಮ್ಮಾರಿಕೆ ಇರಬಹುದು, ಕುಂಬಾರಿಕೆ ಇರಬಹುದು, ನೇಕಾರಿಕೆ ಇರಬಹುದು. ಕುಟುಂಬ ಮೂಲಭೂತ ಬೇಡಿಕೆಗಳನ್ನು ಪೂರೈಸುವದರೊಂದಿಗೆ ಉದ್ಯೋಗವನ್ನು ಕೂಡಾ ಒದಗಿಸುತ್ತಿತ್ತು, ಆದರೆ ಇಂದು ಕೈಗಾರೀಕರಣ, ಆಧುನೀಕರಣದಿಂದಾಗಿ ಆರ್ಥಿಕ ಕಾರ್ಯಗಳು ಕಾರ್ಖಾನೆ, ಬ್ಯಾಂಕು ಮುಂತಾದ ವಾಣಿಜ್ಯ ಮಳಿಗೆಗಳಿಗೆ ವರ್ಗಾಯಿಸಲ್ಪಟ್ಟಿವೆ.

**2. ಶೈಕ್ಷಣಿಕ ಕಾರ್ಯಗಳು** (Educational Functions) : ಮಗುವಿನ ಶಿಕ್ಷಣ ಮನೆಯಿಂದಲೇ ಪ್ರಾರಂಭವಾಗುವದು. ಮನೆಯೇ ಮೊದಲ ಪಾಠ ಶಾಲೆ, ಜನನಿ ತಾನೇ ಮೊದಲ ಗುರು, ಮಗು ತನ್ನ ತಾಯಿಯ ಮೂಲಕ ಮಾತೃ ಭಾಷೆಯನ್ನು ಕಲಿಯುತ್ತದೆ. ತನ್ನ ತಾಯಿ ನುಡಿಯನ್ನು ಕಲಿಯುವ ಮಗುವಿನ ಸಾಮಾಜೀಕರಣವು ಕುಟುಂಬದಲ್ಲಿ ಪ್ರಾರಂಭವಾಗುವದು. ಮಗು ಕುಟುಂಬದಲ್ಲಿ ಅತ್ಯಮೂಲ್ಯವಾದ ಜೀವನ ಶಿಕ್ಷಣವನ್ನು ಪಡೆಯುವದು ಮತ್ತು ಮಗು ಸಾಮಾಜಿಕ ಮೌಲ್ಯಗಳನ್ನು ಕಲಿಯುವುದು. ಆದ್ದರಿಂದ ಮನೆಯನ್ನು ಮಗುವಿನ ಜೀವನದ ನಿತ್ಯ ಶಾಲೆಯೆಂದು ಕರೆಯುತ್ತಾರೆ.

**3. ಧಾರ್ಮಿಕ ಕಾರ್ಯಗಳು** (Religious Functions) : ಸಾಂಪ್ರದಾಯಿಕ ಕುಟುಂಬವು ಧಾರ್ಮಿಕ ಆಚರಣೆಯ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿತ್ತು, ಕುಟುಂಬದ ಹಿರಿಯ ವ್ಯಕ್ತಿಯು ಪುರೋಹಿತನಾಗಿಯೂ ಮತ್ತು ನಿರ್ವಹಿಸುತ್ತಿದ್ದ ಕುಟುಂಬದಲ್ಲಿ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಪೂಜಾ ವಿಧಾನದ ಬಗ್ಗೆ ತಿಳಿಹೇಳುತ್ತಿದ್ದರು. ಕುಟುಂಬದಲ್ಲಿ ಮೇಲಿಂದ ಮೇಲೆ ಪ್ರಾರ್ಥನೆ, ಭಜನೆ, ಕೀರ್ತನೆ, ಹರಿಕಥೆ ಮುಂತಾದ ಧಾರ್ಮಿಕ ಕಾರ್ಯಗಳು ನಡೆಯುತ್ತಿದ್ದವು.

**4. ಮನರಂಜನಾ ಕಾರ್ಯಗಳು** (Entertainment Functions): ಮೊದಲಿನ ಕುಟುಂಬಗಳು ಸದಸ್ಯರಿಗೆ ಮನರಂಜನೆಯನ್ನು ಒದಗಿಸುತ್ತಿದ್ದವು. ಹಾಡುವುದು, ಕುಣಿಯುವುದು ಅಜ್ಜ ಅಜ್ಜಿಯರು ಕಥೆ ಹೇಳುವುದು, ಹಾಸ್ಯ ಮಾಡುವದು ಮುಂತಾದ ಕಾರ್ಯಕ್ರಮಗಳು ಕುಟುಂಬದಲ್ಲಿ ಜರುಗುತ್ತಿದ್ದವು. ಈ ಮನೆಯ ಮನರಂಜನೆಯು ದೇಹ ಮತ್ತು ಮನಸ್ಸು ಎರಡನ್ನೂ ತಣಿಸುತ್ತಿತ್ತು, ಆದರೆ ಆ ಕಾರ್ಯವನ್ನು ಇಂದು ದೂರದರ್ಶನ, ಚಲನಚಿತ್ರ ಮಂದಿರಗಳು, ಕ್ಲಬ್ಬು, ಹೋಟೆಲು ಪಡೆದುಕೊಂಡಿವೆ.

**5. ಸಾಮಾಜೀಕರಣ** (Socialization) : ವ್ಯಕ್ತಿಯ ಸಾಮಾಜೀಕರಣದಲ್ಲಿ ಕುಟುಂಬದ ಪಾತ್ರ ತುಂಬಾ ಪ್ರಮುಖವಾದುದು. ಈ ಸಾಮಾಜೀಕರಣದ ಮೂಲಕ ಮಗುವು ಕುಟುಂಬದಿಂದ ಸಾಮಾಜಿಕ ಮೌಲ್ಯಗಳು, ನೈತಿಕ ಸದ್ಗುಣಗಳು, ಸಂಸ್ಕೃತಿ, ಕಲೆ, ಧರ್ಮ ಮುಂತಾದವುಗಳನ್ನು ಪಡೆಯುವದು. ಮಗುವಿನ ನಡತೆಯನ್ನು ರೂಪಿಸುವಲ್ಲಿ ಕುಟುಂಬದ ಪಾತ್ರ ತುಂಬಾ ಅತ್ಯಮೂಲ್ಯವಾದುದು. ಮಗುವಿಗೆ ಸಾಮಾಜೀಕರಣದ ದೀಕ್ಷೆಯನ್ನು ನೀಡುವಲ್ಲಿ ಕುಟುಂಬದ ಪಾತ್ರವನ್ನು ಮಹಾತ್ಮಗಾಂಧೀಜಿ ಹಾಗೂ ಸಿಗ್ಮಂಡ್ ಫ್ರಾಯ್ಡ್ ಇವರು ಕೊಂಡಾಡಿದ್ದಾರೆ.

ಹೀಗೆ ಕುಟುಂಬವು ಕೆಲವೊಂದು ಕಡ್ಡಾಯ ಅಥವಾ ಪ್ರಾಥಮಿಕ ಕಾರ್ಯಗಳನ್ನು ಕೆಲವು ಮಾಧ್ಯಮಿಕ ಕಾರ್ಯಗಳನ್ನು ಅದು ನಿರ್ವಹಿಸುವದು. ಇಂದು ಕುಟುಂಬದ ಬಹುತೇಕ ಕಾರ್ಯಗಳನ್ನು ವಿಜ್ಞಾನ, ತಂತ್ರಜ್ಞಾನ ಶಿಕ್ಷಣ ಆಧುನೀಕರಣ, ನಗರೀಕರಣ ಕಾರ್ಯವನ್ನು ಕೆಲವು ಬೇರೆ ಬೇರೆ ಸಂಘ ಸಂಸ್ಥೆಗಳು ಕಸಿದುಕೊಂಡಿವೆ.

## ಆಕರ ಗ್ರಂಥಗಳು


- ಜೋಗುರ ಎಸ್. ಬಿ. (2005) ಸಮಾಜಶಾಸ್ತ್ರ ಒಂದು ವ್ಯವಸ್ಥಿತ ಅಧ್ಯಯನ, ವಿದ್ಯಾನಿಧಿ ಪ್ರಕಾಶನ, ಗದಗ
- ಕೊಂಗವಾಡ ಎನ್. ಬಿ. (2008) ಶಿಕ್ಷಣದ ತಾತ್ವಿಕ ಮತ್ತು ಸಾಮಾಜಿಕ ಬುನಾದಿಗಳು, ವಿದ್ಯಾನಿಧಿ ಪ್ರಕಾಶನ, ಗದಗ.
- Kongawad N. B. (2007) Education in Emerging India, Vidyanidhi Prakashana, Gadag.


■■

# ಜಾಗತೀಕರಣದ ಜಗತ್ತಿನಲ್ಲಿ ಶಿಕ್ಷಣ

## (EDUCATION IN THE WORLD OF GLOBALIZATION)

### ಪೀಠಿಕೆ

''ಜಾಗತಿಕ ಹಳ್ಳಿ'' ಯ ನಿರ್ಮಾಣಕ್ಕಾಗಿ ಜಾಗತೀಕರಣವು. ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ ಮತ್ತು ಶೈಕ್ಷಣಿಕ ಗಡಿರೇಖೆಗಳನ್ನು ಅಥವಾ ಅಡೆತಡೆಗಳನ್ನು ಹೋಗಲಾಡಿಸಿ, ಜಗತ್ತಿನ ಎಲ್ಲ ರಾಷ್ಟ್ರಗಳನ್ನು ಅನುಕಲನಗೊಳಿಸುವ ಒಂದು ಪ್ರಕ್ರಿಯೆಯಾಗಿದೆ. ಜಾಗತೀಕರಣವು ಅದರ ಫಲವಾಗಿ ಇಡೀ ಪ್ರಪಂಚವನ್ನೇ ''ಒಂದು ಕುಟುಂಬ'' ವನ್ನಾಗಿಸುವ ''ಸರ್ವೇಜನಾಃ ಸುಖಿನೋಭವಂತು'' ಸರ್ವಜನತೆಯೂ ಸುಖವಾಗಿರಬೇಕು, ಎಂಬ ಪರಿಕಲ್ಪನೆಯಾಗಿದೆ. ರಾಷ್ಟ್ರ–ರಾಷ್ಟ್ರಗಳು ತಮ್ಮ ಪರಿಸ್ಪರಾನುವರ್ತನೆ ಹಾಗೂ ಪರಸ್ಪರಾವಲಂಬನೆಯಿಂದ ಸ್ಪರ್ಧಾಪೂರ್ವಕ ಪ್ರಗತಿಯನ್ನೊಳಗೊಳ್ಳುವ ಪ್ರಕ್ರಿಯೆಯಾಗಿದೆ.

ಅಂತರಾಷ್ಟ್ರೀಯ ವಿತ್ತೀಯ ನಿಧಿ (IMF) ಯು ಜಾಗತೀಕರಣವನ್ನು ''ಪ್ರಬಲ ವಿಕಾಲಿತ ತಂತ್ರಜ್ಞಾನದ ಮೂಲಕ ಸರಕು ಮತ್ತು ಸೇವೆಗಳಲ್ಲಿ ಅಂತರರಾಷ್ಟ್ರೀಯ ಬಂಡವಾಳದ ಧಾರೆಯನ್ನು ವೈವಿಧ್ಯಮಯವಾಗಿ ವಿನಿಮಯ ಮಾಡಿಕೊಳ್ಳುವ ಮೂಲಕ ಜಗತ್ತಿನಾದ್ಯಂತ ರಾಷ್ಟ್ರಗಳ ಬೆಳವಣಿಗಾತ್ಮಕ ಆರ್ಥಿಕ ಅಂತರಾವಲಂಬನೆಯಾಗಿದೆ.'' ಎಂದು ವ್ಯಾಖ್ಯಾನಿಸಿದೆ.

### ಯು. ಎಲ್. ಹಿಲ್‌ರವರು

ಜಾಗತೀಕರಣವು ಹೆಚ್ಚು ಸಮಗ್ರೀಕೃತ ಮತ್ತು ಅಂತರಾವಲಂಬಿ ಜಾಗತಿಕ ಆರ್ಥಿಕತೆಯೆಡೆಗಿನ ತಿರುವಾಗಿದೆ. ಜಾಗತೀಕರಣವು ಎರಡು ಪ್ರಮುಖ ಘಟಕಾಂಶಗಳನ್ನು ಹೊಂದಿದೆ. ಮಾರುಕಟ್ಟೆಗಳ ಜಾಗತೀಕರಣ ಮತ್ತು ಉತ್ಪಾದನೆಯ ಜಾಗತೀಕರಣ ಎಂದಿದ್ದಾರೆ.

ಸಾಮಾನ್ಯವಾಗಿ ಜಾಗತೀಕರಣವು ಜಾಗತಿಕ ಮಾನಕಗಳಿಗೆ ಅನುಗುಣವಾಗಿ ಉದಯಿಸುತ್ತಿರುವ ಆರ್ಥಿಕ, ತಾಂತ್ರಿಕ, ಪರಿಸರಾತ್ಮಕ, ಸಾಂಸ್ಕೃತಿಕ, ರಚನೆಗಳನ್ನು ಒಗ್ಗೂಡಿಸುವುದಾಗಿದೆ. ಜಾಗತೀಕರಣವು ರಾಷ್ಟ್ರಗಳ ವೈಯಕ್ತಿಕ ಸ್ವಾತಂತ್ರ್ಯವನ್ನು ಹೆಚ್ಚಿಸಿ ಪರಸ್ಪರ ರಾಷ್ಟ್ರಗಳನ್ನು ಒಗ್ಗೂಡಿಸಿ ಜಾಗತಿಕ ಆರ್ಥಿಕತೆಯನ್ನು ರೂಪಿಸಿ ಸರಕು ಮತ್ತು ಸೇವೆಗಳನ್ನು ಹಾಗೂ ಕಾರ್ಮಿಕರ ಬಂಡವಾಳದ, ಕೌಶಲ್ಯ ಮತ್ತು ಜ್ಞಾನಗಳ ಜೊತೆಗೆ ವ್ಯಾಪಾರವನ್ನು ಮುಕ್ತ ಸಂಚಲನಗೊಳಿಸುವ ಪ್ರಕ್ರಿಯೆಯಾಗಿದೆ.

### ಜಾಗತೀಕರಣದ ಲಕ್ಷಣಗಳು

- ಜಗತ್ತಿನಾದ್ಯಂತ ವ್ಯಾಪಾರವನ್ನು ಆರಂಭಿಸುವುದು ಮತ್ತು ಅದರ ವಿಸ್ತರಣೆಗಾಗಿ ಯೋಜಿಸುವುದು.
- ದೇಶೀಯ ಮತ್ತು ವಿದೇಶಿಯ ಮಾರುಕಟ್ಟೆಯ ಅಂತರವನ್ನು ಅಳಿಸಿಹಾಕುವುದು.
- ವಿಶ್ವದ ಯಾವುದೇ ರಾಷ್ಟ್ರದಿಂದ ಯಾವುದೇ ರಾಷ್ಟ್ರಕ್ಕೆ ಸರಕು ಮತ್ತು ಸೇವೆಗಳನ್ನು ಮಾರುವುದು ಮತ್ತು ಕೊಂಡುಕೊಳ್ಳುವುದು.
- ರಾಷ್ಟ್ರೀಯ ಪರಿಗಣನೆಯ ಬದಲಾಗಿ ಕಾರ್ಯಸಾಧುವಾದ ಯಾವುದೇ ಪ್ರದೇಶದಲ್ಲಿ ಉತ್ಪಾದನೆ ಮತ್ತು ವಿತರಣೆಯ ಸೌಲಭ್ಯಗಳನ್ನು ಸ್ಥಾಪಿಸುವುದು.
- ಜಗತ್ತಿನ ಮಾರುಕಟ್ಟೆಯ ಪರಿಗಣನೆಯ ಮೇಲೆ ಉತ್ಪಾದನೆ ಮತ್ತು ಅಭಿವೃದ್ಧಿಯನ್ನು ಯೋಜಿಸುವುದು.
- ಸಮಗ್ರ ವಿಶ್ವದಿಂದ ಉತ್ಪಾದನೆಯ ಮತ್ತು ಅಂತರ್ಗಾಮಿಯ ಕಾರಕ ಮೂಲಗಳಾದ ಕಚ್ಚಾವಸ್ತುಗಳು, ಯಂತ್ರೋಪಕರಣಗಳು, ಹಣಕಾಸು, ತಂತ್ರಜ್ಞಾನ ಮತ್ತು ಮಾನವ ಸಂಪನ್ಮೂಲ ಹಾಗೂ ಕೌಶಲ್ಯಗಳನ್ನು ಬಳಕೆಮಾಡಿಕೊಳ್ಳುವುದು.
- ತಂತ್ರಗಾರಿಕೆಯಲ್ಲಿ, ಸಂಘಟನಾತ್ಮಕ ಸಂರಚನೆ, ಸಂಘಟನಾತ್ಮಕ ಸಂಸ್ಕೃತಿ ಮತ್ತು ವ್ಯವಸ್ಥಾಪನಾ ಪರಿಣಿತತೆಗಳಲ್ಲಿ ಜಾಗತಿಕ ಅಭಿಮುಖತೆಯನ್ನು ಹೊಂದುವುದು.
- ಇಡೀ ಗೋಳವನ್ನೇ ಒಂದೇ ಮಾರುಕಟ್ಟೆಯನ್ನಾಗಿ ನೋಡುವ ಮನೋಭಾವ.
- ಜಾಗತಿಕ ಅಭಿಮುಖತೆಯ ನೌಕರಶಾಹಿ ತರಬೇತಿ
- ಸರಕು ಮತ್ತು ಸೇವೆಗಳ ವಿನಿಮಯ
- ಯಾವುದೇ ವ್ಯಾಪಾರೀ ಸೇವೆ ಎಲ್ಲರಿಗಾಗಿ
- ರಾಷ್ಟ್ರದ ಬದಲಾಗಿ ಬಹುರಾಷ್ಟ್ರೀಯ ಕಂಪನಿಗಳ ಉದಯ.

### ಜಾಗತೀಕರಣದ ಅಗತ್ಯ ಸ್ಥಿತಿಗತಿಗಳು ಅಥವಾ ಶರತ್ತುಗಳು

ಜಾಗತೀಕರಣದ ಪ್ರಕ್ರಿಯೆಯ ಸುಗಮೀಕರಣಕ್ಕಾಗಿ ಜಾಗತೀಕರಣಕ್ಕೆ ಒಳಗಾಗುವ ರಾಷ್ಟ್ರಗಳ ಸರಕಾರಗಳು ಕೆಲವು ಶರತ್ತುಗಳನ್ನು ನಿಭಾಯಿಸುವ ಮೂಲಕ ಅನುಕೂಲಕರ ಸನ್ನಿವೇಶವನ್ನು ನಿರ್ಮಿಸಬೇಕು.

- ನಿಯಂತ್ರಣದ ನಿಯಮ ಅಥವಾ ಕಾನೂನುಗಳನ್ನು ಉದಾರೀಕರಿಸುವುದು
- ಮೀಸಲಾತಿಗಳು ಮತ್ತು ಅಂತಹ ಸಂಬಂಧಿ ಸವಲತ್ತುಗಳನ್ನು ತೊಡೆದು ಹಾಕುವುದು.
- ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ಸ್ವಾತಂತ್ರ್ಯ ಒದಗಿಸುವುದು.
- ಸಂರಚನೀಯತಾ ಸೌಲಭ್ಯಗಳನ್ನು ಒದಗಿಸುವುದು.
- ನೌಕರಶಾಹಿ ಸಂಬಂಧಿತ ಅಡೆತಡೆಗಳನ್ನು ಹೋಗಲಾಡಿಸುವುದು.
- ಸಂಶೋಧನೆ ಮತ್ತು ಅಭಿವೃದ್ಧಿಗಳನ್ನು ಉತ್ತೇಜಿಸುವುದು.
- ಗುಣಾತ್ಮಕತೆ, ಬೆಲೆ, ಗ್ರಾಹಕ ಸೇವೆ ಇತ್ಯಾದಿಗಳಲ್ಲಿ ಸ್ಪರ್ಧಾತ್ಮಕತೆಯನ್ನು ಉತ್ತೇಜಿಸುವುದು.
- ಸಾರ್ವಜನಿಕ ವಲಯದ ಕಂಪನಿಗಳಿಗೆ ಖಾಸಗಿ ಕಂಪನಿಗಳೊಂದಿಗೆ ಸ್ಪರ್ಧಿಸಲು ಸ್ವಾತಂತ್ರ್ಯ ಕೊಡುವುದು.
- ಜಾಗತೀಕರಣಕ್ಕೆ ಆಡಳಿತಾತ್ಮಕ ಮತ್ತು ಸರಕಾರಿ ಬೆಂಬಲವನ್ನು ಕೊಡುವುದು.

✍ ಎ. ವ್ಹಿ. ಕರಬಸನಗೌಡ್ರ, ಉಪನ್ಯಾಸಕರು, ಸನಾ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ.

- ಹಣಕಾಸಿನ ಮತ್ತು ಬಂಡವಾಳದ ಮಾರುಕಟ್ಟೆಯನ್ನು ಅಭಿವೃದ್ಧಿಗೊಳಿಸುವುದು.

**ಜಾಗತೀಕರಣದ ಹಂತಗಳು**

ಜಾಗತೀಕರಣವು ವಿಕಾಸಾತ್ಮಕ ಮಾರ್ಗದಲ್ಲಿ ಉಂಟಾಗುತ್ತಿದ್ದು ಒಹಾಮೆ ಅವರ ಪ್ರಕಾರ ಕೆಳಗಿನ ಹಂತಗಳನ್ನು ಒಂಳಗೊಂಡಿದೆ.

1. ದೇಶೀಯ ಕಂಪನಿಯು ವಿತರಕರ ಮೂಲಕ ವಿದೇಶಗಳಿಗೆ ಸರಕು ಮತ್ತುಸೇವೆಗಳನ್ನು ರಫ್ತುಮಾಡುವುದು.
2. ದೇಶೀಯ ಕಂಪನಿ ಅಥವಾ ಸಂಸ್ಥೆ ಸ್ವತಃ ಅದುವೇ ನೇರವಾಗಿ ಹೊರದೇಶಗಳಿಗೆ ಸರಕು ಮತ್ತುಸೇವೆಗಳನ್ನು ರಫ್ತುಮಾಡುವುದು.
3. ತೃತೀಯ ಹಂತದಲ್ಲಿ ಆಯಕಟ್ಟಿನ ಹೊರದೇಶಗಳಲ್ಲಿ ಉತ್ಪಾದನೆ ಮತ್ತು ಮಾರುಕಟ್ಟೆ ಕಾರ್ಯಾಚರಣೆಗಳನ್ನು ಸಂಸ್ಥಾಪಿಸುವ ಮೂಲಕ ದೇಶೀಯ ಕಂಪನಿ ಅಥವಾ ಸಂಸ್ಥೆ ಅಂತರರಾಷ್ಟ್ರೀಯ ಕಂಪನಿ ಅಥವಾ ಸಂಸ್ಥೆಯಾಗಿ ಬೆಳೆಯುವುದು.
4. ದೇಶೀಯ ಕಂಪನಿ ಅಥವಾ ಸಂಸ್ಥೆಯು ವಿದೇಶದಲ್ಲಿ ಪ್ರತಿಷ್ಠಿತ ಕಂಪನಿಯನ್ನು ಮಾದರೀಕರಿಸಿ ಎಲ್ಲ ಸೌಲಭ್ಯಗಳು ಹಾಗೂ ಸ್ವಾಯತ್ತಮಾನವ ಸಂಪನ್ಮೂಲಗಳನ್ನು ಹೊಂದುವುದು ನಾಲ್ಕನೇ ಹಂತವಾಗಿದೆ.
5. ಐದನೇ ಹಂತದಲ್ಲಿ ಕಂಪನಿ ಅಥವಾ ಸಂಸ್ಥೆಯು ವಿದೇಶೀಯರ ಸ್ಥಳೀಯ ಅಗತ್ಯತೆಗಳನ್ನು ಪೂರೈಸುವ ಮೂಲಕ ವಾಸ್ತವದಲ್ಲಿ ವಿದೇಶೀ ಕಂಪನಿಯೇ ಆಗುವುದು.

ಮಾರುಕಟ್ಟೆ, ಉತ್ಪನ್ನಗಳು, ಹೂಡಿಕೆ, ತಂತ್ರಜ್ಞಾನ ಮತ್ತು ಇತರ ಚಟುವಟಿಕೆಗಳನ್ನು ಜಾಗತೀಕರಿಸುವಲ್ಲಿ ಈ ಮೇಲಿನ ಹಂತಗಳು ಒಳಗೊಂಡಿವೆ.

**ಜಾಗತೀಕರಣದ ವಿಧಾನಗಳು**

ಕಂಪನಿಗಳು ಅಥವಾ ಸಂಸ್ಥೆಗಳು ತಮ್ಮ ಕಾರ್ಯಾಚರಣೆಗಳನ್ನು ಜಾಗತೀಕರಣಗೊಳಿಸಲು ಈ ಪದ್ಧತಿಗಳನ್ನು ಅನುಸರಿಸಬಹುದಾಗಿದೆ.

- ಸರಕು ಮತ್ತುಸೇವೆಗಳ ನೇರ ರಫ್ತು
- ಪರೋಕ್ಷ ರಫ್ತು
- ಪರವಾನಿಗೆ ನೀಡುವ ಮೂಲಕ (ಆಸಕ್ತರಿಗೆ)
- ವಿದೇಶದಲ್ಲಿಗುತ್ತಿಗೆ ಉತ್ಪಾದನೆ
- ಸಂಪೂರ್ಣ ಮಾರುಕಟ್ಟೆ ಸೌಲಭ್ಯಗಳ ಸ್ಥಾಪನೆ
- ಉತ್ಪಾದನಾ ಘಟಕಗಳ ಸಂಸ್ಥಾಪನೆ
- ಸಹಭಾಗಿತ್ವ ಅಥವಾ ಸಂಯೋಜನೆ
- ಒಕ್ಕೂಟಗಳು
- ವಿಲೀನಿಕರಣ

**ಜಾಗತೀಕರಣದ ನಿಯೋಗಗಳು**

- WTO - ವಿಶ್ವ ವಾಣಿಜ್ಯ ಸಂಘಟನೆ
- MNC$^s$ - ಬಹುರಾಷ್ಟ್ರೀಯ ಕಂಪನಿಗಳು
- G-8 - ರಾಷ್ಟ್ರಗಳು
- IMF - ಅಂತರರಾಷ್ಟ್ರೀಯ ವಿತ್ತೀಯ ನಿಧಿ
- TNC$^s$ - ಟ್ರಾಂಜಾಕ್ಸನಲ್ ಕಾರ್ಪೋರೇಶನ್‌ಗಳು
- WB - ವಿಶ್ವಬ್ಯಾಂಕ
- GATT - ಸಾಮಾನ್ಯ ವ್ಯಾಪಾರ ಒಪ್ಪಂದ
- GATS - ಸೇವಾ ಮತ್ತುವಾಣಿಜ್ಯ ಸಾಮಾನ್ಯ ಒಪ್ಪಂದ

**ಭಾರತೀಯ ಶಿಕ್ಷಣ ಮತ್ತು ಗ್ಯಾಟ್ಸ್(GATS) ಒಪ್ಪಂದ**

ಭಾರತೀಯ ಶಿಕ್ಷಣದ ಮೇಲೆ GATS ಒಪ್ಪಂದದ ಪ್ರಭಾವಗಳನ್ನು ಈ ಕೆಳಗಿನಂತೆ ವಿಧಿವಾರು ವಿವರಿಸಲಾಗಿದೆ.

**ಕಲಂ -1 :** ಭಾರತದ ಶಾಲೆ, ಕಾಲೇಜು ಮತ್ತುವಿಶ್ವವಿದ್ಯಾಲಯಗಳು ಎಲ್ಲ 145 ರಾಷ್ಟ್ರಗಳಿಂದ ಶಿಕ್ಷಣದ ಸೇವೆಯನ್ನು ಆಮದು ಮತ್ತು ರಫ್ತು ಮಾಡಿಕೊಳ್ಳಲು ಸಿದ್ಧವಿರಬೇಕು.

**ಕಲಂ -2 :** ಭಾರತವು Most Favoured Nation treutment ಅತ್ಯಾನುಕೂಲಕರ ರಾಷ್ಟ್ರದ ಉಪಚರಿಸುವಿಕೆಗೆ ಪಾತ್ರವಾಗಿದೆ.

**ಕಲಂ - 3 :** ಭಾರತ ಸರಕಾರವು ಶಿಕ್ಷಣ ಸಂಬಂಧಿಯಾದ ಎಲ್ಲ ನಿಯಮಾವಳಿಗಳಿಗೆ ಸಂಬಂಧಿಸಿದಂತೆ WTO ದೊಂದಿಗೆ ಪಾರದರ್ಶಕತೆ ಯಿಂದಿರಬೇಕು.

**ಕಲಂ - 4 :** ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರಗಳ ಸಹಭಾಗಿತ್ವವನ್ನು ದಕ್ಷತೆ ಮತ್ತು ಲಭ್ಯತೆಗಳಿಂದ ಹೆಚ್ಚಿಸುವುದು.

**ಕಲಂ -5 :** ಭಾರತವು ತನ್ನ ಉನ್ನತ ಶಿಕ್ಷಣ ಸೇವೆಗಳಲ್ಲಿನ ವಿಭೇದಿಕರಣ (ಮೀಸಲಾತಿ) ಮತ್ತು ಅಡೆತಡೆಗಳನ್ನು ತೊಡೆದು ಹಾಕಿ ವ್ಯಾಪಾರದ ಮೂಲಕ ಆರ್ಥಿಕ ಐಕ್ಯತೆ ಸಾಧಿಸಬೇಕು.

**ಕಲಂ -6 :** ಭಾರತ ಸರಕಾರವು ದೇಶೀಯವಾಗಿ ವಸ್ತುನಿಷ್ಠತೆ ಮತ್ತು ಶಿಕ್ಷಣದಲ್ಲಿ ನ್ಯಾಯಯುತತೆಯನ್ನು ನಿರ್ವಹಿಸಲು ಒಂದು ನ್ಯಾಯಯಂತ್ರವನ್ನು ಸ್ಥಾಪಿಸುವುದು ಅಗತ್ಯವಾಗಿದೆ.

**ಕಲಂ -7 :** ಭಾರತದ ವಿಶ್ವವಿದ್ಯಾಲಯಗಳು, ಕಾಲೇಜುಗಳು, ಶಾಲೆಗಳು ಅಂತರರಾಷ್ಟ್ರೀಯ ಮಾನ್ಯತೆಯನ್ನು ಗಳಿಸಬೇಕು.

**ಕಲಂ -8 :** ಸ್ಪರ್ಧಾತ್ಮಕತೆಯನ್ನು ತಡೆಗಟ್ಟುವ ಮತ್ತುಸ್ವಯಂ ಹಿತ ಸಾಧಿಸುವಿಕೆಯನ್ನು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸರಕಾರವು ನಿಯಂತ್ರಿಸಬೇಕು.

**ಕಲಂ -9 :** ಎಲ್ಲ ರಾಷ್ಟ್ರಗಳಲ್ಲಿರುವಂತೆ ಭಾರತವೂ ಶಿಕ್ಷಣ ಸೇವೆಗಳನ್ನು ಎಲ್ಲಾ ಹಂತಗಳಲ್ಲಿ ಒದಗಿಸುವುದು ಅವಶ್ಯವಾಗಿದೆ.

**ಕಲಂ -10 :** ಭಾರತ ಸರಕಾರವು ಕೆಲವು ಅವಿಭೇದನಾತ್ಮಕವಾದ ತುರ್ತು ಪರಿಸ್ಥಿತಿಯ ರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು.

**ಕಲಂ -11 :** ಭಾರತ ಸರಕಾರ ಅಥವಾ ಯಾವುದೇ ಪ್ರಾಧಿಕಾರ ಅಂತರರಾಷ್ಟ್ರೀಯ ವರ್ಗಾವಣೆಗಳನ್ನು ನಿರ್ಬಂಧಿಸಲಾರದು.

**ಕಲಂ - 12 :** ಭಾರತ ಸರಕಾರವು ಅವಿಭೇದಕ ನಿರ್ಬಂಧಗಳನ್ನು ಹಣಕಾಸಿನ ಬಿಕ್ಕಟ್ಟು ಉಂಟಾದಾಗ ಸಂಬಳದ ಬಾಕಿಯನ್ನು ಉಳಿಸಿಕೊಳ್ಳಬಹುದಾಗಿದೆ.

**ಕಲಂ -13 :** ಸರಕಾರವು ಯಾವುದೇ ಶಿಕ್ಷಣ ಸೇವೆಯನ್ನು ಪ್ರೋಕ್ಯುರ ಮಾಡಬಹುದಾಗಿದೆ.

**ಕಲಂ - 14 :** ಭಾರತ ಸರಕಾರವು ಸಂವಿಧಾನ ಬದ್ಧವಾಗಿ ರಾಷ್ಟ್ರದ ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ನ್ಯಾಯಯುತ ತಳಹದಿಯ ಮೇಲೆ ಯಾವುದೇ ಒತ್ತಡ ಅಥವಾ ಅನ್ವಯಗಳನ್ನು ಶಿಕ್ಷಣದಲ್ಲಿ ಹೊಂದಬಹುದಾಗಿದೆ.

**ಕಲಂ -15 :** ಭಾರತ ಸರಕಾರವು ಶಾಲಾಕಾಲೇಜುಗಳಿಗೆ ನೀಡಿದ ಸಬ್ಸಿಡಿಗಳ ವಿವರವಾದ ವರದಿಯನ್ನು ಸಿದ್ಧಗೊಳಿಸಬೇಕು.

**ಕಲಂ - 16 :** ಭಾರತ ಸರಕಾರವು ವಿದೇಶೀ ಮೂಲದ ಶಾಲಾ ಕಾಲೇಜುಗಳಿಗೂ ಸಹ ಮಾರುಕಟ್ಟೆಯನ್ನು ಲಭ್ಯವನ್ನಾಗಿಸಬೇಕು.

**ಕಲಂ - 17 :** ಭಾರತವು ಹೊರದೇಶೀಯ ಶಿಕ್ಷಣ ಸಂಸ್ಥೆಗಳಿಗೂ ಸಹ ದೇಶೀಯ ಉಪಚರಿಸುವಿಕೆಯಿಂದಿರಬೇಕು.

**ಕಲಂ - 18 :** GATS ನ ಸಾಮಾನ್ಯ ಕರಾರುಗಳಿಗೆ ಹೆಚ್ಚುವರಿ ಬದ್ಧತೆಯನ್ನು ತೋರುವುದು.

**ಕಲಂ - 19 :** GATS ನ ಉದ್ದೇಶಗಳನ್ನು ಸಾಧಿಸಿಕೊಳ್ಳುವಲ್ಲಿ ಎಲ್ಲ ಸದಸ್ಯ ರಾಷ್ಟ್ರಗಳು ಭಾಗವಹಿಸಬೇಕು.

**ಕಲಂ - 20 :** ಭಾರತ ಸರಕಾರವು GATS ನ ಅಡಿಯಲ್ಲಿ ಕೈಗೆತ್ತಿಕೊಂಡ ನಿರ್ದಿಷ್ಟ ಬದ್ಧತಾ ಕಾರ್ಯಗಳ ತಾಳೆಪಟ್ಟಿಯನ್ನು ಸಿದ್ಧಗೊಳಿಸಬೇಕು.

**ಕಲಂ - 21 :** GATS ನ ಬದ್ಧತಾ ಕಾರ್ಯದಲ್ಲಿ ಮುಂದುವರಿಯುವುದಕ್ಕಿಂತ ಹೊರಬರುವುದು ತುಂಬಾ ಕಠಿಣವಾಗಿದೆ.

**ಕಲಂ - 22 :** ಭಾರತ ಸರಕಾರವು GATS ನ ಬದ್ಧತೆಯಿಂದ ಹೊರಗುಳಿಯಲು ಅಥವಾ ಬದ್ಧತೆಯನ್ನು ಬದಲಾಯಿಸಲು ಅಥವಾ ಆಧುನೀಕರಿಸಲು WTOದೊಂದಿಗೆ ಸಂಪರ್ಕಿಸಿ ಇತರ ಸದಸ್ಯ ರಾಷ್ಟ್ರಗಳಿಗೆ ಬಾಧೆ ಉಂಟಾಗದಂತೆ ಮುನ್ನಡೆಯಬೇಕು.

**ಕಲಂ - 23 :** ಒಪ್ಪಂದವನ್ನು ಪಾಲಿಸುವಲ್ಲಿ ತೊಂದರೆ ಉಂಟಾದರೆ ದ್ವಿಪಕ್ಷೀಯ ಅಥವಾ ಬಹುಪಕ್ಷೀಯ ಮಾತುಕತೆಗಳಿಂದ ಬದ್ಧತೆಯನ್ನು ಉಳಿಸಿಕೊಳ್ಳಬೇಕು.

**ಕಲಂ - 24 :** ಭಾರತದ ಶಿಕ್ಷಣ ಸೇವೆಗಳೆಲ್ಲವೂ ಸರಕಾರದ ಮೂಲಕ ಉತ್ತರಾಧಿಕಾರಿಯಾಗಿರಬೇಕು.

**ಕಲಂ - 25 :** ಭಾರತೀಯ ಶಿಕ್ಷಣ ಸಂಸ್ಥೆಗಳು WTO ದಿಂದ ಸ್ಥಾಪಿಸಲ್ಪಟ್ಟ ಸಂಪರ್ಕ ಕೇಂದ್ರಗಳ ತಾಂತ್ರಿಕ ಸಹಾಯ ಪಡೆದುಕೊಳ್ಳಬೇಕು.

**ಕಲಂ - 26 :** UNO ಮತ್ತು ಇತರ ಅಂತರರಾಷ್ಟ್ರೀಯ ನಿಯೋಗಗಳೊಂದಿಗೆ ಭಾರತೀಯ ಶಿಕ್ಷಣ ಸಂಸ್ಥೆಗಳು ಬಾಂಧವ್ಯವಿರಿಸಿಕೊಳ್ಳಬಹುದು.

**ಕಲಂ - 27 :** ಭಾರತ ಸರಕಾರವು WTO ಸದಸ್ಯರಲ್ಲದ ರಾಷ್ಟ್ರಗಳಿಗೆ GATSನ ಶೈಕ್ಷಣಿಕ ಲಾಭಗಳನ್ನು ನಿರಾಕರಿಸಬಹುದು.

**ಜಾಗತೀಕರಣದ ಅನುಕೂಲತೆಗಳು**

- ಬಂಡವಾಳದ ಮುಕ್ತ ಹರಿವು ಮತ್ತು ತೊಡಗಿಸಿದ ಒಟ್ಟು ಬಂಡವಾಳದಲ್ಲಿ ಹೆಚ್ಚಳ
- ತಂತ್ರಜ್ಞಾನದ ಮುಕ್ತ ಹರಿವು
- ಕೈಗಾರಿಕೀಕರಣದ ಹೆಚ್ಚಳ
- ಜಾಗತಿಕವಾಗಿ ಉತ್ಪಾದನ ಸೌಲಭ್ಯಗಳ ವ್ಯಾಪಕವಾಗುವಿಕೆ
- ಜಾಗತಿಕ ಆರ್ಥಿಕತೆಗಳ ಸಮತೋಲಿತ ಅಭಿವೃದ್ಧಿ
- ಉತ್ಪಾದನೆ ಮತ್ತು ಅನುಭೋಗದಲ್ಲಿ ಹೆಚ್ಚಳ
- ಕಡಿಮೆದರದಲ್ಲಿ ಉನ್ನತ ಗುಣಮಟ್ಟದ ವಸ್ತುಗಳು
- ವೈವಿಧ್ಯ ಉತ್ಪನ್ನ ಮತ್ತು ಸಾಂಸ್ಕೃತಿಕ ವಿನಿಮಯಗಳಿಗೆ ಬೇಡಿಕೆ
- ಉದ್ಯೋಗಗಳು ಮತ್ತು ಆದಾಯ ಹೆಚ್ಚಳ
- ಜೀವನ ಮಟ್ಟಗಳ ಉತ್ತಮತೆ
- ಸಮತೋಲಿತ ಮಾನವ ಬೆಳವಣಿಗೆ

**ಜಾಗತೀಕರಣದ ಅನಾನುಕೂಲತೆಗಳು**

- ದೇಶೀಯ ವ್ಯಾಪಾರದ ಮೇಲೆ ಮಾರಕ ಪರಿಣಾಮ
- ಮಾನವ ಸಂಪನ್ಮೂಲದ ಶೋಷಣೆ
- ನಿರುದ್ಯೋಗ ಮತ್ತು ಕೆಳಮಟ್ಟದ ಉದ್ಯೋಗದ ಸಮಸ್ಯೆ
- ದೇಶೀಯ ಉತ್ಪನ್ನಗಳ ಬೆಲೆ, ಬೇಡಿಕೆ, ಉತ್ಪನ್ನದಲ್ಲಿ ಕುಸಿತ
- ಶ್ರೀಮಂತ ಬಡವರ ಹೆಚ್ಚಿದ ಅಂತರ
- ಸ್ವಾಭಾವಿಕ ಸಂಪನ್ಮೂಲಗಳ ವರ್ಗಾವಣೆ
- ರಾಜಕೀಯ ಮತ್ತು ಶಿಕ್ಷಣದ ವ್ಯಾಪಾರೀಕರಣ

**ಉಪಸಂಹಾರ**

ಭಾರತವು ಸಹಿಮಾಡಿ ಒಳಪಟ್ಟಿರುವ WTOದ GATS ಒಪ್ಪಂದದ ಫಲಪ್ರದತೆಗೆ ಭಾಜನವಾಗುವತ್ತ ಸಾಗುವಲ್ಲಿ UGC, AICTE, NCERT, NCTE, NUEPA ಹಾಗೂ ಅಂತಹ ಅನೇಕ ನಿಯೋಗಗಳೊಡಗೂಡಿ GATS ನ ಅನ್ವಯ ಹಾಗೂ ಅದರ ಫಲಗಳನ್ನು ಪರಮರ್ಶಿಸಿ ಶಿಕ್ಷಣದ ಸುಧಾರಣೆ ಮತ್ತು ಗುಣಾತ್ಮಕತೆಗೆ ಯೋಜನಾ ಬದ್ಧತೆಯಿಂದ ಕಾರ್ಯನಿರ್ವಹಿಸಿ, ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಜಾಗತಿಕ ಗುಣಮಟ್ಟದ ಶಿಕ್ಷಣವನ್ನು ಸತತವಾಗಿ ನಿಭಾಯಿಸಿದಾಗ GATS ನ ಬದ್ಧತೆ ಭಾರತದಲ್ಲಿ ಉಳಿದುಕೊಳ್ಳುತ್ತದೆ.

**ಆಕರ ಗ್ರಂಥಗಳು**


- Anita Joshva (2003) The Lesson Remain to be Learnt, The Hindu, Karnataka Edition, PP16-17 January - 2003
- Rangarajan C. (2003) Globalization : Concept and concerns The Hindu, Karnataka Edition, P. 10 January - 2003
- IGNOU (2002) Human Rights Society and Development Block 3, Globalization and Human Rights, IGNOU, New Delhi
- Singh L. C. (2002) Self financing Higher Education, University news Association of Indian Universities, edited by K.B. Power, New Delhi, 40 (52), PP.8-14. Dec - 2002
- Raj Chengappa (2002) Higher Education - The need for Radical Survary, India Today XXVII, (39). September 24-40, 2002.
- University Grants Commission, Annual Report (1993-94), New Delhi.


■■

# ಸಂವೇದನೆ
# (SENSATION)

**ಪೀಠಿಕೆ**

ಹುಟ್ಟಿದಾಗ ಏನನ್ನೂ ಅರಿಯದ ಮಗು ಬೆಳೆದಂತೆಲ್ಲಾ ಬಾಹ್ಯ ಪ್ರಪಂಚದ ಪರಿಚಯ ಮಾಡಿಕೊಳ್ಳುತ್ತದೆ. ಇಂತಹ ಹೊರಜಗತ್ತಿನೊಂದಿಗೆ ಸಂಪರ್ಕ ಕಲ್ಪಿಸುವ ಸಾಧನಗಳೆಂದರೆ ಪಂಚೇಂದ್ರಿಯಗಳು. ಒಂದು ವೇಳೆ ಪಂಚೇಂದ್ರಿಯಗಳು ಇಲ್ಲದಿದ್ದರೆ ನಾವು ಹೇಗೆ ಇರುತ್ತಿದ್ದೆವು ಎಂಬುದನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅತ್ಯಂತ ಸರಳ ರೂಪದ ಜೀವಿಗಳಲ್ಲಿಯೂ ಸಹ ಇಂದ್ರಿಯಗಳಿದ್ದು ಅವು ಬಾಹ್ಯ ಜಗತ್ತಿನೊಂದಿಗೆ ಸಂಪರ್ಕ ಏರ್ಪಡಿಸುತ್ತವೆ. ಹೊರಗಿನಿಂದ ಬರುವ ಸಮಾಚಾರಕ್ಕೆ ಒಳಗಾಲುವೆಗಳಂತಿರುವ ಈ ಅಂಗವ್ಯವಸ್ಥೆಗಳು ನಮ್ಮ ಸುತ್ತಮುತ್ತ ಇರುವ ದೃಶ್ಯಗಳು, ಶಬ್ದಗಳು ಮತ್ತು ವಾಸನೆಗಳನ್ನು ಅನುಭವಿಸಿ ಆನಂದಿಸಲು ನಮಗೆ ನೆರವಾಗುತ್ತವೆ. ಹಾಗೆಯೇ ಸ್ಪರ್ಶಸುಖದ, ರುಚಿಯ ಆಹ್ಲಾದದ ಅನುಭವವನ್ನು ನಮಗೆ ಒದಗಿಸುತ್ತವೆ. ಹೀಗೆ ಜಗತ್ತಿನ ವಿಶಾಲವಾದ ಅರಿವಿಗೆ, ಜ್ಞಾನಕ್ಕೆ ಇಂದ್ರಿಯಗಳು ಮನೆಯ ಕಿಟಕಿಗಳಿದ್ದಂತೆ ಅಂತೆಯೇ ಇವುಗಳನ್ನು ''ಜ್ಞಾನದ ಹೆಬ್ಬಾಗಿಲುಗಳು'' ಎನ್ನುವರು. ಇಂದ್ರಿಯಗಳ ಮೂಲಕ ಪರಿಚಯಿಸಲ್ಪಟ್ಟ ಸಂಗತಿಗಳು ಮೆದುಳನ್ನು ತಲುಪಿದಾಗ ನಮಗೆ ಅರಿವುಂಟಾಗುತ್ತದೆ. ಇದನ್ನೆ ಜ್ಞಾನ ಎನ್ನುವೆವು. ಇದು ನಡೆಯುವುದು ಮೂರು ಹಂತಗಳಲ್ಲಿ – ಇಂದ್ರಿಯಾನುಭವ ಸಂವೇದನೆ ಪ್ರತ್ಯಕ್ಷಾನುಭವ ಭಾವನೆಗಳು.

**ಅರ್ಥ**

''ಸಂವೇದನೆ ಎಂದರೆ ಒಂದು ಪ್ರಚೋದನೆ ಅಥವಾ ಸಂಗತಿಯ ಅವಿಶ್ಲೇಷಿತ, ಅರ್ಥರಹಿತ, ಇಂದ್ರಿಯಗಳ ಮೂಲಕ ಮೆದುಳಿನೊಂದಿಗೆ ಏರ್ಪಡುವ ಒಂದು ಯಾಂತ್ರಿಕ ಸಂಪರ್ಕ''.

**1. ಇಂದ್ರಿಯಾನುಭವ :** ಬಾಹ್ಯ ಪ್ರಪಂಚದ ವಸ್ತುಗಳು ಇಂದ್ರಿಯಗಳ ಸೀಮಾವ್ಯಾಪ್ತಿಗೆ ಬಂದರೆ ಇಂದ್ರಿಯಾನುಭವ ಉಂಟಾಗುತ್ತದೆ. ಅಂದರೆ ಬಾಹ್ಯ ವಸ್ತುಗಳು ನಮ್ಮ ಇಂದ್ರಿಯಗಳ ಸೀಮಿತ ವ್ಯಾಪ್ತಿಯಲ್ಲಿದ್ದರೆ ಅವುಗಳಿಂದ ಉಂಟಾದ ಪ್ರಚೋದನೆ ಇಂದ್ರಿಯಗಳನ್ನು ಪ್ರಚೋದಿಸುತ್ತದೆ. ಇದರಿಂದ ಇಂದ್ರಿಯಗಳು ಕ್ರಿಯಾಶೀಲವಾಗುತ್ತವೆ. ಇದನ್ನು 'ಇಂದ್ರಿಯಾನುಭವ' ಎನ್ನುವರು. ಇದು ಕೇವಲ ಅನುಭವ ಮಾತ್ರವೇ ವಿನಹ ಅರಿವಲ್ಲ. ರೇಡಿಯೋ ತರಂಗಗಳನ್ನು ಏರಿಯಲ್ ಸ್ವೀಕರಿಸುವಂತೆ, ದೂರದರ್ಶನ ತರಂಗಗಳನ್ನು ಅಂಟೇನಾ ಗ್ರಹಿಸುವಂತೆ ಇಂದ್ರಿಯಗಳು ಕೇವಲ ಗ್ರಾಹಕಗಳಂತೆ ಕೆಲಸ ನಿರ್ವಹಿಸುತ್ತವೆ.

ಇಂದ್ರಿಯಾನುಭವ ನಾಲ್ಕು ಹಂತಗಳಲ್ಲಿ ನಡೆಯುತ್ತವೆ. ಮೊದಲನೆಯದಾಗಿ ಒಳಗಿನಿಂದಲೊ, ಹೊರಗಿನಿಂದಲೊ ಒಂದು ಪ್ರಚೋದಕ ಒದಗಬೇಕು. ಎರಡನೆಯದಾಗಿ ಈ ಪ್ರಚೋದಕ ಯಾವುದಾದರೊಂದು ಗ್ರಾಹಕ ಕಣಗಳನ್ನು ಉತ್ತೇಜಿಸಿ, ಕ್ರಿಯಾಶೀಲಗೊಳಿಸಬೇಕು. ನಿರ್ದಿಷ್ಟ ಪ್ರಚೋದಕ, ನಿರ್ದಿಷ್ಟ ಗ್ರಾಹಕ ಕಣಗಳನ್ನು ಪ್ರಚೋದಿಸುತ್ತವೆ. ಉದಾ : ದೃಷ್ಟಿಗ್ರಾಹಕಗಳು ಭೌತಿಕ ಕಿರಣಗಳಿಂದ, ಶ್ರವಣ ಗ್ರಾಹಕ ಕಣಗಳು ಶಬ್ದ ತರಂಗಗಳಿಂದ ಉತ್ತೇಜಿಸಲ್ಪಡುತ್ತವೆ. ಮೂರನೆಯದಾಗಿ ಗ್ರಾಹಕ ಕಣಗಳು ಉತ್ತೇಜಿತವಾದಾಗ ಉದ್ಭವವಾದ ತಂತು ಅಲೆಗಳು ಜ್ಞಾನವಾಹಿನಿ ನರಗಳ ಮೂಲಕ ಮೆದುಳನ್ನು ಸೇರುತ್ತವೆ. ನಾಲ್ಕನೆಯದಾಗಿ ಮೆದುಳಿನಲ್ಲಿನ ತಂತು ಕಣಗಳನ್ನು ಕ್ರಿಯಾಶೀಲಗೊಳಿಸುತ್ತವೆ. ಈ ಹಂತಗಳಲ್ಲಿ ಯಾವುದೇ ಲೋಪವಾದರೂ ಇಂದ್ರಿಯಾನುಭವವಾಗುವುದಿಲ್ಲ.

**2. ಸಂವೇದನೆ :** ಜ್ಞಾನಾರ್ಜನೆಯಲ್ಲಿ ಇಂದ್ರಿಯಾನುಭವದ ನಂತರದ ಹಂತವೇ ಸಂವೇದನೆ. ಮೇಲಿನ ವಿವರಣೆಯಿಂದ ಪ್ರತಿಯೊಂದು ಜ್ಞಾನೇಂದ್ರಿಯವೂ ತನ್ನದೇ ಆದ ಕ್ರಿಯಾವಿಶೇಷತೆಯಿಂದ ಕೂಡಿದ್ದು ತನ್ನ ಮೂಲಕ ಹೊರಜಗತ್ತಿನ ಪರಿಚಯವನ್ನು ನಮಗೆ ಮಾಡಿಸುತ್ತಿರುತ್ತವೆ. ಹೀಗೆ ಹೊರಜಗತ್ತಿನ ಸಂಗತಿಗಳು ಮೆದುಳಿನೊಂದಿಗೆ ಜ್ಞಾನೇಂದ್ರಿಯಗಳ ಮೂಲಕ ಸಂಪರ್ಕಕ್ಕೆ ಬರುವಿಕೆಗೆ ಅಥವಾ ಹೊರಜಗತ್ತಿನ ಇಂದ್ರಿಯ ಸಂಪರ್ಕಕ್ಕೆ ಸಂವೇದನೆ ಎನ್ನುವರು.

ಸಂವೇದನೆಯ ಮೂಲಕ ಹೊರ ಸಂಗತಿಗಳು ಹೇಗಿರುತ್ತವೆಯೋ ಅವುಗಳ ಪಡಿಯಚ್ಚು ಮಾತ್ರ ನಮ್ಮ ಮೆದುಳಿನಲ್ಲಿ ಮೂಡಿ ಬರುತ್ತದೆ. ಅಂದರೆ ನಾವು ಪ್ರಚೋದನೆಯ ಅಥವಾ ಸಂಗತಿಯೊಂದಿಗೆ ಕೇವಲ ಸಂಪರ್ಕಕ್ಕೆ ಮಾತ್ರ ಬರುತ್ತೇವೆಯೇ ವಿನಹ ಆ ಸಂವೇದನೆ ಏನು ? ಹೇಗೆ ? ಏಕೆ ? ಎಂಬುದು ತಿಳಿದು ಬರುವುದಿಲ್ಲ. ಟೆಲಿಗ್ರಾಫ್ ಯಂತ್ರದಿಂದ ಉಂಟಾಗುವ ಸಂಜ್ಞೆಯಂತೆ ಸಂವೇದನಗಳು. ಟೆಲಿಗ್ರಾಫ್ ಯಂತ್ರ ಕೇವಲ ಟಿಕ್ ಟಿಕ್ ಶಬ್ದವನ್ನುಂಟುಮಾಡುತ್ತದೆ. ಅವುಗಳನ್ನು ವಿಶ್ಲೇಷಿಸದ ಹೊರತು ವಿಷಯವೇನೆಂಬುದು ತಿಳಿದು ಬರುವುದಿಲ್ಲ. ಇಂತಹ ಅವಿಶ್ಲೇಷಿತ ಅರ್ಥರಹಿತ ಸಂವೇದನೆಗಳು ಮೆದುಳನ್ನು ತಲುಪಿದಾಗ ಅಲ್ಲಿ ಅವು ಉನ್ನತ ಮಾನಸಿಕ ಕ್ರಿಯೆಗಳಿಗೆ ಒಳಪಟ್ಟು ವಿಶ್ಲೇಷಿಸಲ್ಪಟ್ಟಾಗ ಆ ಸಂವೇದನೆಯ ಅರ್ಥವು ತಿಳಿದು ಬರುತ್ತದೆ. ಅದನ್ನೇ ನಾವು 'ಗೊತ್ತಾಯಿತು', 'ತಿಳಿದುಕೊಂಡೆವು' ಎನ್ನುತ್ತೇವೆ. ತಿಳಿಯುವಿಕೆ ಮಾನಸಿಕ ಕ್ರಿಯೆಗಳ ಕೊನೆಯ ಹಂತವಾದರೆ ಸಂವೇದನೆ ಮೊದಲ ಹಂತ.

**ಅ. ಸಂವೇದನೆ ಕ್ರಿಯೆ :** ಸಂವೇದನಾ ಕ್ರಿಯೆಯು ಸಂವೇದನೆ ಹೇಗೆ ಉಂಟಾಗುತ್ತದೆ ಮತ್ತು ಅವು ಹೇಗೆ ಮೆದುಳನ್ನು ತಲುಪುತ್ತವೆ ಎಂಬುದನ್ನು ವಿವರಿಸುತ್ತದೆ. ಸಂವೇದನೆಯ ಹಿಂದಿನ ಶಕ್ತಿಯ ರೂಪವು ಅಂದರೆ ಜ್ಞಾನೇಂದ್ರಿಯಗಳು ಪ್ರಚೋದಿಸಲ್ಪಟ್ಟಾಗ ಅವುಗಳ ಮೇಲ್ಮೈನಲ್ಲಿರುವ ಗ್ರಾಹಕ ನರಕೋಶಗಳನ್ನು ತಲುಪುತ್ತವೆ. ಈ ನರಕೋಶಗಳು ಉತ್ತೇಜಿಸಲ್ಪಟ್ಟು ಅದರಲ್ಲಿ ನರ ವಿದ್ಯುತ್ ಪ್ರವಾಹ ಉಂಟಾಗುತ್ತದೆ. ಈ ವಿದ್ಯುತ್ ಪ್ರವಾಹದ ಜೊತೆಯಲ್ಲಿಯೆ ಸಂವೇದನೆಯು ಜ್ಞಾನವಾಹಿನಿ ನರಗಳ ಮೂಲಕ ಮೆದುಳನ್ನು ತಲುಪುತ್ತದೆ. ಈ ನರಕೋಶಗಳು ಉತ್ತೇಜಿಸಲ್ಪಟ್ಟು ಅದರಲ್ಲಿ ನರ ವಿದ್ಯುತ್ ಪ್ರವಾಹ ಉಂಟಾಗುತ್ತದೆ. ಈ ವಿದ್ಯುತ್ ಪ್ರವಾಹದ ಜೊತೆಯಲ್ಲಿಯೇ ಸಂವೇದನೆಯು ಜ್ಞಾನವಾಹಿನಿ ನರಗಳ ಮೂಲಕ ಮೆದುಳನ್ನು ತಲುಪುತ್ತದೆ. ಜ್ಞಾನವಾಹಿನಿ ನರಕೋಶಗಳಲ್ಲಿ 'ಬಾಹ್ಯ ಗ್ರಾಹಕಗಳು' ಮತ್ತು 'ಅಂತರ್ ಗ್ರಾಹಕ'ಗಳೆಂದು ಎರಡು ವಿಧಗಳಿವೆ.

✍ **ಪ್ರೊ. ಎಸ್. ಎಸ್. ಹೂಗಾರ** ಉಪನ್ಯಾಸಕರು, ಜೆ. ಎಸ್. ಎಸ್. ಶ್ರೀ ಮಂಜುನಾಥೇಶ್ವರ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ.

**1. ಬಾಹ್ಯ ಗ್ರಾಹಕಗಳು** (Exteroceptors) : ದೇಹದ ಹೊರ ಭಾಗದಲ್ಲಿ ಅಂದರೆ ಚರ್ಮದ ಮೇಲ್ಪದರಗಳಲ್ಲಿದ್ದು ಹೊರಗಿನಿಂದ ಬರುವ ಸಂವೇದನೆಗಳನ್ನು ಗ್ರಹಿಸುತ್ತದೆ. ಉದಾ. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಇವೆಲ್ಲಾ ಬಾಹ್ಯ ಗ್ರಾಹಕಗಳೇ ಆಗಿವೆ.

**2. ಅಂತರ್ ಗ್ರಾಹಕಗಳು** (Interoceptors) : ದೇಹದ ತೀರಾ ಒಳಭಾಗದಲ್ಲಿರುತ್ತವೆ. ರಕ್ತನಾಳಗಳಲ್ಲಿ, ಮಾಂಸಖಂಡಗಳಲ್ಲಿ, ಕೀಲುಗಳಲ್ಲಿ ನೆಲೆಸಿದ್ದು ದೇಹದ ಒಳಭಾಗದ ಸಂವೇದನೆಗಳನ್ನು ಗ್ರಹಿಸಿ ಮೆದುಳಿಗೆ ತಲುಪಿಸುತ್ತವೆ. ಆದ್ದರಿಂದ ನಮಗೆ ಶರೀರದ ಒಳಗೆ ಉಂಟಾಗುವ ಹಸಿವು, ನೋವು ಇತ್ಯಾದಿಗಳ ಅರಿವುಂಟಾಗುವುದು. ಒಟ್ಟಿನಲ್ಲಿ ಜ್ಞಾನವಾಹಿನಿ ನರಕೋಶಗಳ ಜಾಲ ಶರೀರದ ಒಳಗೆ ಮತ್ತು ಹೊರಗೆಲ್ಲ ಪಸರಿಸಿವೆ.

ಸಂವೇದನೆಗಳು ಕೇಂದ್ರ ನರಕೋಶವನ್ನು ಸೇರಿದಾಗ ಅವುಗಳನ್ನು ಸಮರ್ಪಕವಾಗಿ ಸ್ವೀಕರಿಸಲು ಅಲ್ಲಿ ನಿರ್ದಿಷ್ಟ ಪ್ರದೇಶಗಳಿರುತ್ತವೆ. ಚರ್ಮ ಮತ್ತು ಮಾಂಸ ಖಂಡಗಳಿಂದ ಬರುವ ಸಂವೇದನೆಯನ್ನು ಪೆರೈಟಲ್ (Parietal)ಪ್ರದೇಶವೂ, ಕಣ್ಣಿನ ಸಂವೇದನೆಗಳನ್ನು ಆಕ್ಸಿಪಿಟಲ್ (Occipital)ಭಾಗವೂ, ಕಿವಿಯಿಂದ ಬರುವ ವಿವರಗಳನ್ನು ಟೆಂಪೊರಲ್ (Temporal) ಪ್ರದೇಶವೂ ಸ್ವೀಕರಿಸುತ್ತದೆ. ಈ ಪ್ರದೇಶಗಳಿಗೆ ಯಾವುದೇ ಕಾರಣದಿಂದ ಅಘಾತವಾದರೆ ಇಂದ್ರಿಯಗಳು ಸರಿಯಿದ್ದೂ ನಿಷ್ಕ್ರೀಯವಾಗುತ್ತವೆ. ಉದಾ : ಆಕ್ಸಿಪೆಟಲ್‌ಗೆ ಆಘಾತವಾದರೆ ಕಣ್ಣು ಸರಿಯಾಗಿದ್ದರೂ ಕಾಣಿಸುವುದಿಲ್ಲ.

**ಆ. ಸಂವೇದನೆಯ ಲಕ್ಷಣಗಳು**

ಸಂವೇದನೆ ಇಂದ್ರಿಯ ಜನ್ಯ ವ್ಯಾಪಾರವಾಗಿದ್ದು ಕೆಲವು ವಿಶಿಷ್ಟ ಲಕ್ಷಣಗಳನ್ನೊಳಗೊಂಡಿದೆ.

1. ಸಂವೇದನೆ ಬಾಹ್ಯ ಜಗತ್ತಿನೊಡನೆ ಮೆದುಳಿನೊಂದಿಗೆ ಕೇವಲ ಸಂಪರ್ಕವನ್ನೇರ್ಪಡಿಸುತ್ತದೆ.
2. ಸಂವೇದನೆಯಿಂದ ವಸ್ತುವಿನ ಪರಿಚಯವಾಗುವುದಿಲ್ಲ.
3. ಸಂವೇದನೆ ಅವಿಶ್ಲೇಷಿತ, ಅರ್ಥರಹಿತ, ಸಂಜ್ಞಾರೂಪದಲ್ಲಿರುತ್ತದೆ.
4. ಇದು ಇಂದ್ರಿಯಗಳನ್ನು ನೇರವಾಗಿ ಅವಲಂಬಿಸಿದೆ. ಯಾವುದೇ ಸಂವೇದನೆ ಉಂಟಾಗಬೇಕಾದರೂ ಒಂದು ಕನಿಷ್ಠ ಮಟ್ಟದ ಇಂದ್ರಿಯ ಪ್ರಚೋದನೆ ಇರಲೇಬೇಕು.
5. ಇಂದ್ರಿಯಗಳಲ್ಲಿ ದೋಷವಿದ್ದರೆ ಸಂವೇದನೆಯೂ ದೋಷಪೂರಿತವಾಗಿರುತ್ತದೆ.
6. ಸಂವೇದನೆ ಬಾಹ್ಯ ವಸ್ತುಗಳ ಪಡಿಯಚ್ಚನ್ನು ಮೂಡಿಸುತ್ತದೆ. ವಸ್ತುಗಳು ಹೇಗಿರುತ್ತವೆಯೋ ಹಾಗೆ ಸಂವೇದನೆ ಉಂಟಾಗುತ್ತದೆ.

ಹೀಗೆ ಸಂವೇದನೆಗಳು ವ್ಯಕ್ತಿಯ ದೇಹದ ಹೊರಗೆ ಹಾಗೂ ಒಳಭಾಗದಲ್ಲಿ ನಡೆಯುತ್ತಿರುವ ಬದಲಾವಣೆಗಳನ್ನು, ಸಂಗತಿಗಳನ್ನು ಸೂಕ್ಷ್ಮ ಗ್ರಾಹಕ ನರಗಳ ಮೂಲಕ ಗ್ರಹಿಸಿ ಅವುಗಳನ್ನು ಕೇಂದ್ರ ನರವ್ಯವಸ್ಥೆಗೆ (ಮೆದುಳಿಗೆ) ತಲುಪಿಸುವುದರ ಮೂಲಕ ವ್ಯಕ್ತಿ ತನ್ನ ಪರಿಸರವನ್ನು, ದೇಹದ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಂಡು ಬದುಕಿನ ಹೋರಾಟದಲ್ಲಿ ಸಮರ್ಪಕವಾಗಿ ಹೊಂದಿಕೊಳ್ಳುವಲ್ಲಿ ಸಹಾಯಕವಾಗಿವೆ.

**3. ಪ್ರತ್ಯಕ್ಷಾನುಭವ** (Perception)

**ಪೀಠಿಕೆ**

ಸಂವೇದನೆ ಇಂದ್ರಿಯ ವ್ಯಾಪಾರವಾದರೆ ಪ್ರತ್ಯಕ್ಷಾನುಭವ ಮಾನಸಿಕ ವ್ಯಾಪಾರ. ಕೇಂದ್ರ ನರಮಂಡಲ ಮೆದುಳಿನಲ್ಲಿ ನಡೆಯುವ ಉನ್ನತ ಮಾನಸಿಕ ಕ್ರಿಯೆ. ಇಂದ್ರಿಯಗಳಿಂದ ಪಡೆದುಕೊಂಡ ಸಂವೇದನೆಗಳನ್ನು ಕೇಂದ್ರ ನರಮಂಡಲ ತನ್ನ ಹಿಂದಿನ ಆಲೋಚನೆ, ವಿವೇಚನೆ, ಅನುಭವದ ಸಾಮರ್ಥ್ಯದಿಂದ ಸಂವೇದನೆಗಳಿಗೆ ಅರ್ಥವನ್ನು ನೀಡುತ್ತದೆ. ಆಗ ನಮಗೆ ವಸ್ತು ವಿಚಾರ ಏನೆಂಬುದು ಗೊತ್ತಾಗುತ್ತದೆ. ಇದನ್ನೆ ನಾವು 'ಅರ್ಥಾನುಭವ' ಅಥವಾ 'ಗ್ರಹಿಕೆ ಅಥವಾ 'ಪ್ರತ್ಯಕ್ಷಾನುಭವ' ಎನ್ನುತ್ತೇವೆ. ಇಲ್ಲಿ ಇಂದ್ರಿಯ ವಿವರಗಳನ್ನು ಸಂಘಟಿಸುವ, ವ್ಯವಸ್ಥೆ ಮಾಡುವ ಕೆಲಸ ನಡೆಯುತ್ತದೆ. ವಿವಿಧ ಸಂವೇದನೆಗಳ ನಡುವೆ ಇರುವ ಸಂಬಂಧವನ್ನು ನಿಷ್ಕರ್ಷಿಸುತ್ತದೆ. ಒಂದೊಂದು ಸಂವೇದನೆಯೂ ವಿಶಿಷ್ಟ ಮೌಲ್ಯವುಳ್ಳದ್ದಾಗಿದ್ದು ಸಂಘಟಿಸಲ್ಪಟ್ಟಾಗ ಅವುಗಳ ರೂಪ ಬದಲಾಗಿ ಒಟ್ಟು ಚಿತ್ರ ಮೂಡಿಬರುತ್ತದೆ.

**ಅ. ಪ್ರತ್ಯಕ್ಷಾನುಭವದ ಅರ್ಥ** : ಒಂದು ಪ್ರಚೋದನೆಯ ಅರಿವು ಸಂವೇದನೆಯಿಂದ ಆರಂಭಗೊಂಡು, ಅವಧಾನದಿಂದ ಬಲಗೊಂಡು ಪ್ರತ್ಯಕ್ಷಾನುಭವದ ಮೂಲಕ ಅದು ಏನು ಎಂಬುದು ತಿಳಿದುಬರುತ್ತದೆ. ಆದ್ದರಿಂದ ಪ್ರತ್ಯಕ್ಷಾನುಭವ ಎಂದರೆ ಹೊರಗಿನಿಂದ ಇಂದ್ರಿಯಗಳ ಮೂಲಕ ಬರುತ್ತಿರುವ ಅರ್ಥರಹಿತ ಸಂವೇದನೆಗಳನ್ನು ವಿಶ್ಲೇಷಿಸಿ ಅದರ ಅರ್ಥವನ್ನು ಅರಿತುಕೊಳ್ಳುವಿಕೆ ''ಸಂವೇದನೆಯನ್ನು ಅರ್ಥವಾಗುವಂತೆ, ಉನ್ನತ ಮಾನಸಿಕ ಕ್ರಿಯೆಗಳ ಸಹಾಯದಿಂದ ಅನುವಾದಿಸಿಕೊಳ್ಳುವಿಕೆಗೆ ಪ್ರತ್ಯಕ್ಷಾನುಭವ'' ಎನ್ನುವರು.

ಸಂವೇದನೆ+ಹಿಂದಿನ ಅನುಭವಗಳು (ಅವಧಾನ) ಪ್ರತ್ಯಕ್ಷಾನುಭವ.

**ಆ. ಪ್ರತ್ಯಕ್ಷಾನುಭವದ ವಿಶೇಷತೆಗಳು ಮತ್ತು ಲಕ್ಷಣಗಳು** : ಪ್ರತ್ಯಕ್ಷಾನುಭವ ತನ್ನದೇ ಆದ ಕ್ರಿಯಾ ವಿಶೇಷತೆಯಿಂದ ಕೂಡಿದ್ದು ಕೆಲವು ವಿಶಿಷ್ಠ ಲಕ್ಷಣಗಳನ್ನು ಹೊಂದಿದೆ. ಈ ಲಕ್ಷಣಗಳೆಲ್ಲವೂ ಪ್ರತ್ಯಕ್ಷಾನುಭವದ ವಿವಿಧ ಅರ್ಥಗಳನ್ನು ಸೂಚಿಸುತ್ತವೆ. ಕೆಲವು ಮುಖ್ಯ ಲಕ್ಷಣಗಳು ಇಂತಿವೆ.

**1. ಸಂವೇದನೆಯ ಅಭಾವದಲ್ಲಿಯೂ ಪ್ರತ್ಯಕ್ಷಾನುಭವ ಕಾರ್ಯ ನಿರ್ವಹಿಸುತ್ತದೆ.**

ಸಂವೇದನೆಗೆ ಮಿತಿ ಇದೆ. ಅದು ಇಂದ್ರಿಯಗಳನ್ನು ಸಂಪೂರ್ಣವಾಗಿ ಅವಲಂಬಿಸಿರುವ ಕಾರಣ ಇಂದ್ರಿಯಗಳು ದೋಷಪೂರಿತವಾಗಿದ್ದರೆ ಅವುಗಳಿಂದ ಬರುವ ಸಂವೇದನೆಗಳೂ ಸಹ ದೋಷದಿಂದ ಕೂಡಿರುತ್ತವೆ. ಉದಾ : ದೃಷ್ಟಿ ದೋಷವುಳ್ಳವರು ಸ್ಪಷ್ಟವಾಗಿ ನೋಡಲಾರರು. ನೆಗಡಿಯಾದಾಗ ವಾಸನೆ ಗ್ರಹಿಸಲಾರೆವು. ಆದರೆ ಪ್ರತ್ಯಕ್ಷಾನುಭವಕ್ಕೆ ಈ ಮಿತಿ ಇಲ್ಲ. ಪ್ರತ್ಯಕ್ಷಾನುಭವವು ಸಂವೇದನೆಯನ್ನು ಅವಲಂಬಿಸಿದ್ದರೂ ಸಹ ಈ ಅವಲಂಬನೆಯ ಪ್ರಮಾಣ, ಪ್ರಾಮುಖ್ಯತೆ ತೀರಾ ಕಡಿಮೆ. ಸಂವೇದನೆಯ ಅಭಾವದಲ್ಲಿಯೂ ಸಹ ಪ್ರತ್ಯಕ್ಷಾನುಭವ ಕಾರ್ಯ ನಿರ್ವಹಿಸುತ್ತದೆ.

**2. ಅಪೂರ್ಣವಾದ ಸಂವೇದನೆಗಳಿದ್ದರೂ ಸಹ ಪ್ರತ್ಯಕ್ಷಾನುಭವ ವಸ್ತುವಿನ ಇಡೀ ಚಿತ್ರವನ್ನು ಗ್ರಹಿಸಿಕೊಳ್ಳುತ್ತದೆ:**

ಸಂವೇದನೆಯ ಮೂಲಕ ಒಂದು ವಸ್ತು, ಸಂಗತಿ ಹೇಗಿದೆಯೋ ಹಾಗೆ ಮೂಡಿ ಬಂದು ಪ್ರತ್ಯಕ್ಷಾನುಭವ ವಸ್ತು ಹೇಗಿರಬೇಕೋ ಹಾಗೆ ಚಿತ್ರಿಸಿಕೊಳ್ಳುತ್ತದೆ. ಅಂದರೆ ಒಂದು ವಸ್ತುವಿಗೆ ಸಂಬಂಧಿಸಿದಂತೆ ಇಂದ್ರಿಯಗಳ ಮೂಲಕ ಬರುವ ಅದರ ಸಂವೇದನೆಗಳು ಎಷ್ಟೇ ಕಡಿಮೆ ಇದ್ದು, ಅಪೂರ್ಣವಾಗಿದ್ದರೂ, ಅಷ್ಟರ ಸಹಾಯದಿಂದಲೇ ಉಳಿದು ಬಿಟ್ಟು ಹೋಗಿರುವ ಸಂವೇದನೆಗಳನ್ನು ಭರ್ತಿ ಮಾಡಿಕೊಂಡು ಸಂಗತಿಯ, ವಸ್ತುವಿನ ಇಡೀ ಚಿತ್ರವನ್ನು ಮೂಡಿಸುತ್ತದೆ. ಉದಾ: ದೂರದಲ್ಲಿ ಬರುತ್ತಿರುವ ವ್ಯಕ್ತಿಯ ಸಂವೇದನೆಗಳು ಅಸ್ಪಷ್ಟವಾಗಿದ್ದರೂ ವ್ಯಕ್ತಿಯನ್ನು ಗುರುತಿಸಲು ನಾವು ಶಕ್ಯರಾಗುತ್ತೇವೆ. ಮಾನಸಿಕವಾಗಿ ಮೂಡಿಬರುವಷ್ಟು ವಿವರಗಳೂ, ಸ್ಪಷ್ಟತೆಯೂ, ನಮಗೆ ಒದಗಿಬರುತ್ತಿರುವ ಸಂವೇದನೆಗಳಲ್ಲಿರುವುದಿಲ್ಲ.

**3. ಯಾವುದಾದರೂ ಒಂದು ಇಂದ್ರಿಯದಿಂದ ಬರುವ ಸಂವೇದನೆಯಿಂದಲೇ ಸಂಗತಿಯನ್ನು ಸಂಪೂರ್ಣವಾಗಿ ಪ್ರತ್ಯಕ್ಷಾನುಭವ ಮೂಡಿಸಿಕೊಳ್ಳುತ್ತದೆ.**

ಒಂದು ಸಂಗತಿಯ ಪೂರ್ಣ ಚಿತ್ರ ರೂಪುಗೊಳ್ಳಬೇಕಾದರೆ ಅದರಿಂದ ವಿವಿಧ ಇಂದ್ರಿಯಗಳ ಮೂಲಕ ಬರುವ ಸಂವೇದನೆಗಳು ಸಂಘಟಿತಗೊಳ್ಳಬೇಕು. ಆದರೆ ಯಾವುದೇ (ಒಂದು ಇಂದ್ರಿಯದಿಂದ ಸಂವೇದನೆ ಬಂದರೆ ಸಾಕು, ಉಳಿದ ಇಂದ್ರಿಯಗಳಿಗೆ ಸಂಬಂಧಿಸಿದ ಆ ಸಂಗತಿಯ ಸಂವೇದನೆಗಳೂ ಅದರ ಜೊತೆಗೆ ಮೂಡಿ ಬಂದು ಆ ಸಂಗತಿಯ ಇಡೀ ಚಿತ್ರ ಮೂಡಿಬರುತ್ತದೆ. ಉದಾ : ಬಂದುಗಳ ನಿರೀಕ್ಷೆಯಲ್ಲಿದ್ದಾಗ ಅವರು ಬರುವಾಗ ಉಂಟಾಗುವ ಕಾಲಿನ ಸಪ್ಪಳದಿಂದಲೇ ಅಥವಾ ಕೂಗಿದ ಧ್ವನಿಯಿಂದಲೇ ಅವರ ಇಡೀ ಚಿತ್ರವು ನಮ್ಮಲ್ಲಿ ಮೂಡಿಬರುತ್ತದೆ. ಹಾಗೆಯೇ ಅಡಿಗೆ ಮನೆಯ ಹಂಚಿನ ಮೇಲಿನ ಚುಯ್ ಚುಯ್ ಶಬ್ದ ಕೇಳುತ್ತಲೇ ಇಡೀ ದೋಸೆಯ ಹಾಗೂ ಅದರ ರುಚಿಯ ಅನುಭವವು ನಮ್ಮಲ್ಲಿ ಮೂಡಿಬರುತ್ತದೆ. ಇದನ್ನು ಕೆಳಗಿನ ಸೂತ್ರದಿಂದ ತೋರಿಸಬಹುದಾಗಿದೆ.

ಪ್ರತ್ಯಕ್ಷಾನುಭವ = ಸಂವೇದನೆ + ಭಾವಾನುವಾದ

**4.** ಪ್ರತ್ಯಕ್ಷಾನುಭವ ಕೇವಲ ಬಿಡಿ ಬಿಡಿ ಸಂವೇದನೆಗಳನ್ನು ವಿಶ್ಲೇಷಿಸುವುದರ ಜೊತೆಗೆ ಬಿಡಿ ಬಿಡಿ ಸಂವೇದನೆಗಳನ್ನು ಸಂಶ್ಲೇಷಿಸಿ, ಸಂಘಟಿಸಿ ಸನ್ನಿವೇಶವನ್ನು ಸಮಗ್ರವಾಗಿ ಪರಿಚಯಮಾಡಿಕೊಡುತ್ತದೆ. ಉದಾ : ಕೊಠಡಿಯಲ್ಲಿ ಕುಳಿತಿದ್ದಾಗ ಒಬ್ಬ ವ್ಯಕ್ತಿ ವೇಗವಾಗಿ ಮೋಟಾರ್ ಬೈಕ್‌ನಲ್ಲಿ ಹೋದದ್ದು ಕಾಣಿಸುತ್ತದೆ. ಕೆಲವೇ ಸೆಕೆಂಡುಗಳಲ್ಲಿ ಭಯಂಕರವಾದ ಶಬ್ದ ಕೇಳಿಬರುತ್ತದೆ. ಇಷ್ಟರಿಂದಲೇ ವ್ಯಕ್ತಿ ಅಘಾತಕ್ಕೊಳಗಾದನೆಂದು ಊಹಿಸುವದಷ್ಟೇ ಅಲ್ಲದೆ, ಅಲ್ಲಿ ಸಂಭವಿಸಿರಬಹುದಾದ ಘಟನೆಗಳ ಚಿತ್ರವೂ ಮನಸ್ಸಿನಲ್ಲಿ ಮುಡಿ ಬರುತ್ತದೆ.

**5. ಪ್ರತ್ಯಕ್ಷಾನುಭವ ಸಂವೇದನೆಯ ಎಲ್ಲಾ ವಿವರಗಳನ್ನು ಅರ್ಥಗ್ರಹಣಕ್ಕಾಗಿ ಬಳಸುವುದಿಲ್ಲ:**

ಒಂದು ಸಂಗತಿಗೆ ಸಂಬಂಧಿಸಿದಂತೆ ವಿವಿಧ ಇಂದ್ರಿಯಗಳಿಂದ ಬರುವ ಸಂವೇದನೆಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ಆರಿಸಿಕೊಂಡು ಅವುಗಳಿಗೆ ಆಕರ್ಷಕವಾದ ರೂಪವನ್ನು ಪ್ರತ್ಯಕ್ಷಾನುಭವ ಕೊಡುತ್ತದೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಪ್ರತ್ಯಕ್ಷಾನುಬವದ ಅರ್ಥಗಳನ್ನು ಕೆಳಗಿನಂತೆ ನಿರೂಪಿಸಬಹುದು. ಹೊರಗಿನಿಂದ ಮತ್ತು ದೇಹದ ಒಳಗಿನಿಂದ ಬರುವ ಅರ್ಥರಹಿತ ಸಂವೇದನೆಗಳನ್ನು ಹಿಂದಿನ ಅನುಭವ ಮತ್ತು ಇತರ ಉನ್ನತ ಮಾನಸಿಕ ಕ್ರಿಯೆಗಳ ಸಹಾಯದಿಂದ ಅರ್ಥ ಮಾಡಿಕೊಳ್ಳುವುದು ಪ್ರತ್ಯಕ್ಷಾನುಭವ.

ಬಿಡಿ ಬಿಡಿಯಾದ ಮತ್ತು ಅಪೂರ್ಣವಾದ ಸಂವೇದನೆಗಳನ್ನು, ಪ್ರಚೋದನೆಗಳನ್ನು ಅರ್ಥ ಬರುವಂತೆ ಪೂರ್ಣವಾಗಿ ರೂಪಿಸಿಕೊಳ್ಳುವುದು ಪ್ರತ್ಯಕ್ಷಾನುಭವ.

ಒಂದು ಸಂಗತಿಗೆ ಸಂಬಂಧಿಸಿದಂತೆ ಅದರಿಂದ ಬರುತ್ತಿರುವ ಸಂವೇದನೆಯು ಯಾವುದೇ ಒಂದು ಜ್ಞಾನೇಂದ್ರಿಯಕ್ಕೆ ಸಂಬಂಧಿಸಿದ್ದರೂ ಉಳಿದ ಜ್ಞಾನೇಂದ್ರಿಯಗಳು ಕ್ರಿಯಾಶೀಲವಾಗುವಂತೆ ಮಾಡುವುದು ಪ್ರತ್ಯಕ್ಷಾನುಭವ.

**ಇ. ಪ್ರತ್ಯಕ್ಷಾನುಭವದಲ್ಲಿನ ದೋಷಗಳು**

ಪ್ರತ್ಯಕ್ಷಾನುಭವದಲ್ಲಿ ಎರಡು ರೀತಿಯ ದೋಷಗಳನ್ನು ಕಾಣುತ್ತೇವೆ.

1. ಭ್ರಮೆಗಳು 2. ವಿಕೃತ ವಿಶ್ವಾಸ.

**1. ಭ್ರಮೆಗಳು :** ಒಂದು ಸಂಗತಿಯನ್ನು ಅದರ ಸಹಜ ರೂಪದಲ್ಲಿ ಅರ್ಥ ಮಾಡಿಕೊಂಡರೆ ಅದು ಪ್ರತ್ಯಕ್ಷಾನುಭವ. ಆದರೆ ಕೆಲವು ವೇಳೆ ನಮಗರಿವಿಲ್ಲದಂತೆ ಸಂಗತಿಯನ್ನು ಅಪಾರ್ಥದಲ್ಲಿ ಅಥವಾ ವಿಕೃತ ರೂಪದಲ್ಲಿ ತಿಳಿದುಕೊಳ್ಳುತ್ತೇವೆ. ಇದನ್ನೇ 'ಭ್ರಮೆ' ಎನ್ನುವರು. ಇದು ಇಂದ್ರಿಯಗಳಲ್ಲಿನ ದೋಷವಿರಬಹುದು, ಮಿದುಳಿನ ಕ್ರಿಯಾ ವಿಶೇಷತೆಗಳ ಸಾಮರ್ಥ್ಯದಲ್ಲಿನ ದೋಷವಿರಬಹುದು. ಭ್ರಮೆಯಲ್ಲಿ ಎರಡು ರೀತಿಗಳಿವೆ. 1. ಇಂದ್ರಿಯಜನ್ಯ ಭ್ರಮೆ ಮತ್ತು 2. ಮಾನಸಿಕ ಭ್ರಮೆ.

**i. ಇಂದ್ರಿಯ ಜನ್ಯ ಭ್ರಮೆ**


ಇಂದ್ರಿಯಜನ್ಯ ಭ್ರಮೆ ನೈಜತೆಯ ಅಥವಾ ಸಂವೇದನೆಯ ತಪ್ಪು ಗ್ರಹಿಕೆ. ಮನಸ್ಸು ಹೊರಗಿನಿಂದ ಬಂದ ಸಂವೇದನೆಗಳನ್ನು ಸರಿಯಾಗಿ ಅರ್ಥಮಾಡದೆ ತಪ್ಪಾಗಿ ಅನುವಾದಿಸಿರುತ್ತದೆ. ಉದಾ : ನೀರಿರುವ ಒಂದು ಪಾತ್ರೆಯಲ್ಲಿ ಕೋಲನ್ನು ಇಟ್ಟಾಗ ಕೋಲು ನೀರಿನಲ್ಲಿ ಬಾಗಿರುವಂತೆ ಕಾಣುತ್ತದೆ. ಇಂತಹ ಸಂಗತಿಗಳನ್ನು ಯಾರೇ ನೋಡಿದರೂ ತಪ್ಪಾಗಿಯೇ ಗ್ರಹಿಸುತ್ತಾರೆ. ಇಂದ್ರಿಯಜನ್ಯ ಭ್ರಮೆ ಅನೇಕ ರೀತಿಯಲ್ಲಿವೆ.

ಉದಾ : 1. ಮುಲ್ಲರ್ ವೈರ್ –ಭ್ರಮೆ– ಚಿತ್ರದಲ್ಲಿ



– ಎಂಬ ಎರಡು ಗೆರೆಗಳಿವೆ. ಯಾರೇ ಇವುಗಳನ್ನು ನೋಡಿದರೂ, ಉದ್ದವಾದದ್ದೆಂದು ತಿಳಿಯುವರು. ಆದರೆ ವಾಸ್ತವವಾಗಿ ಅವೆರಡೂ ಒಂದೇ ಅಳತೆಯುಳ್ಳವುಗಳಾಗಿವೆ. ಇಲ್ಲಿ ಭ್ರಮೆಗೆ ಕಾರಣ ಅವುಗಳ ಕೊನೆಯಲ್ಲಿರುವ < > ಆವರಣಗಳೇ ಆಗಿವೆ.

**2. ಸಮತಳ ಲಂಬಕ ಗೆರೆಗಳ ಭ್ರಮೆ**



ಇದರಲ್ಲಿಯೂ ಚಿತ್ರದಲ್ಲಿ ತೋರಿಸಿರುವಂತೆಗಿಂತ ಲಂಬರೇಖೆ ಹೆಚ್ಚು ಉದ್ದವಾಗಿರುವಂತೆ ಕಾಣುತ್ತದೆ. ಆದರೆ ಅವೆರಡೂ ಒಂದೇ ಅಳತೆಯವುಗಳು.

**2. ಮನೋಜ್ಯ ಭ್ರಮೆ**

ಮನೋಜನ್ಯ ಭ್ರಮೆಗೆ ನಮ್ಮ ಮನಸ್ಸೇ ಕಾರಣವಾಗಿದೆ. ಸಂವೇದನೆಗಳು ಇಲ್ಲದಿರುವಾಗ ವ್ಯಕ್ತಿಯ ಮಾನಸಿಕ ತುಮುಲ, ತಳಮಳ, ಭಾವಾವೇಶಗಳು ಭ್ರಮೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಇದು ಕೇವಲ ಸುಳ್ಳು ಗ್ರಹಿಕೆ. ಇದು ಮಾನಸಿಕ ರೋಗಗಳಿಗೆ ಒಳಗಾದವರಲ್ಲಿ, ಹೆಚ್ಚು ಮದ್ಯಸೇವನೆ ಮಾಡಿದವರಲ್ಲಿ, ಮಾದಕ ವಸ್ತುಗಳನ್ನು ಸೇವಿಸಿದವರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ.

**3. ವಿಕೃತ ವಿಶ್ವಾಸ** (Delecion)

ಇದು ಕೇವಲ ಮನರೋಗಿಗಳಲ್ಲಿ ಮಾತ್ರ ಕಂಡು ಬರುತ್ತದೆ. ಈ ಭ್ರಮೆಗೆ ಒಳಗಾದವರು ದೋಷಪೂರ್ಣವಾದ ವಿಕೃತ ವಿಶ್ವಾಸ, ದೃಢನಂಬಿಕೆ ಹೊಂದಿದ್ದು ವಿಚಿತ್ರ ನಡವಳಿಕೆಗಳಲ್ಲಿ ತೊಡಗಿರುತ್ತಾರೆ. ಉದಾ : ತಾನೊಬ್ಬ ನಟನೆಂದು ಭ್ರಮಿಸಿ ನಟನಂತೆ ವರ್ತಿಸುವುದು, ಶ್ರೀಮಂತನೆಂದು ಭ್ರಮಿಸಿ ಶ್ರೀಮಂತನಂತೆ ನಟಿಸುವುದು, ಅಪರಾಧಿ ಎಂದು ಭಾವಿಸಿ ಅಪರಾಧಿಯಂತೆ ನಟಿಸುವುದು, ಇತ್ಯಾದಿ ಲಕ್ಷಣಗಳೆಲ್ಲವೂ ವಿಕೃತ ವಿಶ್ವಾಸಗಳೇ ಆಗಿವೆ.

ಈ.

### ಗೆಸ್ಟಾಲ್ಟನ ಗ್ರಹಿಕೆಯ ನಿಯಮಗಳು

(Gestealt's Laws Perception)

ಗೆಸ್ಟಾಲ್ಟನು ಗ್ರಹಿಕೆಗೆ ಅಥವಾ ಪ್ರತ್ಯಕ್ಷನುಭವಕ್ಕೆ ಸಂಬಂಧಿಸಿದಂತೆ ಐದು ನಿಯಮಗಳನ್ನು ನಿರೂಪಿಸಿದ್ದಾನೆ.

1. ಸಾಮಿಪ್ಯ ನಿಯಮ
2. ಸಾಮ್ಯತೆ ನಿಯಮ
3. ಸಾತತ್ಯ ನಿಯಮ
4. ಸಮಾರೋಪ ನಿಯಮ
5. ಪ್ರಾಜ್ಞಾನ್ ನಿಯಮ

### 1. ಸಾಮಿಪ್ಯ ನಿಯಮ

ಪ್ರಚೋದನೆಗಳು ಒಂದೇ ಸಮನಿದ್ದು ಸಮಾನವಾಗಿದ್ದು ಒಂದಕ್ಕೊಂದು ಸಮೀಪದಲ್ಲಿದ್ದರೆ ಎಲ್ಲಾ ಬಿಡಿ ಬಿಡಿ ಪ್ರಚೋದನೆಗಳು ಒಂದುಗೂಡಿ ಒಂದು ಗುಂಪು ಅಥವಾ ಆಕೃತಿಯನ್ನು ಹೊಂದುತ್ತವೆ. ಇದನ್ನು ಸಾಮೀಪ್ಯ ನಿಯಮ ಎನ್ನುವರು. ಉದಾ : ಪ್ರತಿಯೊಂದು ಪದವು ಅನೇಕ ಬಿಡಿ ಬಿಡಿ ಅಕ್ಷರಗಳಿಂದ ಕೂಡಿದ್ದರೂ ನಾವು ಬಿಡಿ ಬಿಡಿಯಾಗಿ ನೋಡದೆ ಅವುಗಳಿಂದಾದ ಪದವನ್ನು ಮಾತ್ರ ನೋಡುತ್ತೇವೆ.

❋ ❋❋❋❋❋❋❋ | | | | | | | | |
❋ ❋❋❋❋❋❋❋ | | | | | | | | |
❋ ❋❋❋❋❋❋❋ | | | | | | | | |
❋ ❋❋❋❋❋❋❋ | | | | | | | | |
❋ ❋❋❋❋❋❋❋ | | | | | | | | |

ಎ ಬಿ

ಚಿತ್ರ 'ಎ'ನಲ್ಲಿನ ಚುಕ್ಕೆಗಳು ಅಡ್ಡಗೆರೆಯಂತೆಯೂ 'ಬಿ'ನಲ್ಲಿನ ಗೆರೆಗಳು ಉದ್ದ ಸರಳ ರೇಖೆಗಳಂತೆಯೂ ಕಾಣಿಸುತ್ತವೆ. ಇವುಗಳಿಗೆ ಕಾರಣ ಅವು ಒಂದಕ್ಕೊಂದು ಸಮೀಪದಲ್ಲಿರುವುದೇ ಆಗಿದೆ.

### 2. ಸಾಮ್ಯತೆ ನಿಯಮ

ಪ್ರಚೋದನೆಗಳಲ್ಲಿನ ಸಾಮ್ಯತೆ ಅಂದರೆ ಏಕರೂಪತೆ ಇದ್ದರೆ ಆವುಗಳ ನಡುವೆ ಅಂತರವಿದ್ದರೂ ಸಹ ಅವು ಒಂದು ಆಕಾರಕ್ಕೆ ಬರುತ್ತವೆ. ಒಂದಕ್ಕಿಂತ ಹೆಚ್ಚು ಅಂಶಗಳನ್ನು ಅಥವಾ ವಸ್ತುಗಳನ್ನು ಕೊಟ್ಟಾಗ ಅದರಲ್ಲಿ ಒಂದೇ ತೆರನಾಗಿರುವ ವಸ್ತುಗಳನ್ನೇ ಒಂದು ಗುಂಪಿಗೆ ಸೇರಿಸುವ ಪ್ರವೃತ್ತಿಗೆ ಸಾಮ್ಯತೆಯ ನಿಯಮ ಎನ್ನುವರು.

ಉದಾ : × × × × × × ×
– – – – – – –
❋ ❋ ❋ ❋ ❋ ❋ ❋
+ + + + + + +

ಮೇಲಿನ ಚಿತ್ರದಲ್ಲಿ ಪ್ರತಿಯೊಂದು ಅಂಶವೂ ತನ್ನದೇ ಆದ ಗುಂಪಿನಲ್ಲಿ ಗೋಚರಿಸುತ್ತದೆ.

### 3. ಸಾತತ್ಯ ನಿಯಮ

ಪ್ರಚೋದನೆಗಳಲ್ಲಿ ಸಾಮಿಪ್ಯ, ಸಾಮ್ಯತೆಗಳ ಅಂಶಗಳು ಇಲ್ಲದಿದ್ದರೂ ಅವುಗಳಲ್ಲಿ ಅವ್ಯವಸ್ಥೆಯಿರದೆ ಅವು ವ್ಯವಸ್ಥಿತವಾಗಿದ್ದು ಒಂದೇ ದಿಕ್ಕಿನಲ್ಲಿದ್ದರೆ ಅವೆಲ್ಲವೂ ಸೇರಿ ಒಂದಾಗಿ ಕಂಡುಬರುತ್ತವೆ. ಇದನ್ನು ಸಾತತ್ಯ ನಿಯಮ ಎನ್ನುವರು. ಉದಾ: ಆಕಾಶದಲ್ಲಿರುವ ನಕ್ಷತ್ರಗಳಲ್ಲಿ ಸಪ್ತರ್ಷಿ ಮಂಡಲ ಎಲ್ಲರ ಗಮನ ಸೆಳೆಯುತ್ತದೆ.

### 4. ಪೂರಕ ನಿಯಮ

ಸಂವೇದನೆಯ ಅನುಭವಗಳು ಸಂಯೋಜನೆಗೊಂಡು, ಒಟ್ಟುಗೂಡಿ ಪರಿಪೂರ್ಣತೆಯನ್ನು ಪಡೆದ ಒಂದು ಆಕೃತಿಯನ್ನು ಕೊಡುವುದೇ ಪೂರಕ ನಿಯಮ. ಅಂದರೆ ಪ್ರಚೋದನೆಗಳು ಅಪೂರ್ಣವಾಗಿದ್ದರೂ ಸಹ ವಸ್ತು ಹೇಗಿರಬೇಕೋ ಹಾಗೆ ಕಂಡುಬರುತ್ತದೆ. ಇಲ್ಲಿ ಬಿಟ್ಟುಹೋದ ಸಂಗತಿಯ ಭಾಗಗಳನ್ನು ಮನಸ್ಸು ಭರ್ತಿ ಮಾಡಿಕೊಳ್ಳುತ್ತದೆ.

### 5. ಪ್ರಾಜ್ಞಾನ್ ನಿಯಮ (ಆಕೃತಿ ಮತ್ತು ಹಿನ್ನೆಲೆ)

ನಾವು ಯಾವುದೇ ವಸ್ತುವನ್ನು ಯಾವುದೇ ಸಂದರ್ಭದಲ್ಲಿ ನೋಡುವಾಗಲೂ ಅದಕ್ಕೊಂದು ಹಿನ್ನೆಲೆಯಿದ್ದು ಆ ಹಿನ್ನೆಲೆಯಲ್ಲಿ ವಸ್ತು ಎದ್ದು ಕಾಣುತ್ತದೆ. ಇದರಲ್ಲಿ ವಸ್ತು ಯಾವುದು, ಹಿನ್ನೆಲೆ ಯಾವುದು ಎನ್ನುವುದು ವೀಕ್ಷಿಸುವ ವ್ಯಕ್ತಿಯನ್ನು ಅವಲಂಬಿಸಿರುತ್ತದೆ. ಉದಾ: ಆಕರ್ಷಕವಾದ ಕೆತ್ತನೆ ಕೆಲಸ ಮಾಡಿರುವ ತಟ್ಟೆಯಲ್ಲಿ ಎಲೆ– ಅಡಿಕೆ ಇದ್ದರೆ ಎಲೆ– ಅಡಿಕೆ ಹಾಕುವ ಅಭ್ಯಾಸದವರಿಗೆ ಕೇವಲ ಎಲೆ ಅಡಿಕೆ ಕಂಡುಬರುತ್ತದೆ. ಅದೇ ಓರ್ವ ಕಲಾಕಾರನಿಗೆ ತಟ್ಟೆಯಲ್ಲಿರುವ ಕೆತ್ತನೆ ಕಂಡುಬರುತ್ತದೆ. ಇಲ್ಲಿ ಒಂದಕ್ಕೊಂದು ಹಿನ್ನೆಲೆಯಾಗಿ ಕಾರ್ಯ ನಿರ್ವಹಿಸುತ್ತವೆ. ಇದೇ ಕಾರಣದಿಂದಲೇ ಪಕ್ಷಿಗಳು, ಕೋಳಿಗಳು, ನೆಲದ ಮೇಲಿನ ಕಾಳು, ಆಹಾರಗಳನ್ನು ಗುರುತಿಸಲು ಶಕ್ತವಾಗಿದೆ.

ಪ್ರತ್ಯಕ್ಷಾನುಭವವು ಕೇವಲ ಸಂವೇದನೆಗಳ ಯಾಂತ್ರಿಕ ಅನುವಾದವಾಗಿರದೆ ಅದು ವ್ಯಕ್ತಿಯ ವೈಯಕ್ತಿಕ ಅನುಭವ, ವ್ಯಕ್ತಿತ್ವದ ರಚನೆ, ಧೋರಣೆ, ಪರಿಸರ, ಹಿನ್ನೆಲೆ ಮತ್ತು ಸಂದರ್ಭಗಳಿಂದ ನಿರ್ಧರಿಸಲ್ಪಡುತ್ತದೆ.

### ಉ. ಪ್ರತ್ಯಕ್ಷನುಭವ ಮತ್ತು ಸಂವೇದನೆಗಳಿಗಿರುವ ವ್ಯತ್ಯಾಸಗಳು

★ಸಂವೇದನೆ ಒಂದು ದೈಹಿಕ ವ್ಯಾಪಾರ. ಇಂದ್ರಿಯಗಳಿಂದ ಭೌತಿಕ ವಿವರಗಳನ್ನು ಪಡೆಯುವ ಕ್ರಿಯೆ. ಶರೀರದ ಅಂಚಿನಲ್ಲಿ ಸಿದ್ಧವಾಗಿರುವ ಇಂದ್ರಿಯಗಳಲ್ಲಿ ಹುಟ್ಟಿದ ಭೌತಿಕ ಸಾಧನಗಳ ಮೂಲಕ ಮೆದುಳಿನ ಇಂದ್ರಿಯ ಕ್ಷೇತ್ರ. ಯಾವುದೇ ಸಂವೇದನೆ ಉಂಟಾಗಬೇಕಾದರೂ ಒಂದು ಕನಿಷ್ಠ ಪ್ರಮಾಣದ ಇಂದ್ರಿಯ ಪ್ರಚೋದನೆ ಇರಲೇಬೇಕು.

ಸಂವೇದನೆ ಹೊರಜಗತ್ತಿನ ಸಂಗತಿಗಳು ಹೇಗಿವೆಯೋ ಹಾಗೆ ಅವುಗಳ ಪಡಿಯಚ್ಚನ್ನು ಬಹಳ ವಿಧೇಯಕವಾಗಿಯೂ, ಯಾಂತ್ರಿಕವಾಗಿಯೂ ಮೆದುಳಿಗೆ ಒದಗಿಸುತ್ತವೆ. ಹೀಗೆ ಒದಗಿದ ಅರ್ಥ ರಹಿತ ಸಂವೇದನೆಗಳನ್ನು ಪ್ರತ್ಯಕ್ಷಾನುಭವವು ಉನ್ನತ ಮಾನಸಿಕ ಕ್ರಿಯೆಗಳಿಗೆ ಒಳಪಡಿಸಿ ಆ ಸಂಗತಿ ಹೇಗಿರಬೇಕೋ ಹಾಗೆ ಅವುಗಳ ಅರ್ಥವನ್ನು ಮೂಡಿಸುತ್ತದೆ.

★

| ಸಂವೇದನೆ | ಪ್ರತ್ಯಾಕ್ಷನುಭವ |
|---|---|
| 1. ಸಂವೇದನೆ ಇಂದ್ರಿಯ ಜನ್ಯ ವ್ಯಾಪಾರ | 1. ಪ್ರತ್ಯಕ್ಷಾನುಭವ ಮಾನಸಿಕ ವ್ಯಾಪಾರ |
| 2. ಸಂವೇದನೆ ಅರ್ಥರಹಿತ, ಅವಿಶ್ಲೇಷಿತ ಸಂಜ್ಞಾರೂಪ. | 2. ಸಂವೇಧನೆಗಳಿಗೆ ಸ್ಪಷ್ಟ ಅರ್ಥಕೊಟ್ಟು ವಿಶ್ಲೇಷಿಸುತ್ತದೆ. |
| 3. ಇಂದ್ರಿಯಗಳನ್ನು ನೇರವಾಗಿ ಅವಲಂಬಿಸಿದೆ. | 3. ಸಂವೇದನೆಗಳನ್ನು ಅವಲಂಬಿಸಿದ್ದರೂ ಅವಲಂಬನೆಯ ಪ್ರಮಾಣ ಕಡಿಮೆ |

| | |
|---|---|
| 4. ಇಂದ್ರಿಯಗಳಲ್ಲಿ ದೋಷವಿದ್ದರೆ ಸಂವೇದನೆಗಳಲ್ಲಿ ದೋಷವಿರುತ್ತದೆ. | 4. ಸಂವೇದನೆಗಳಲ್ಲಿನ ದೋಷಗಳನ್ನು ತಿದ್ದಿಕೊಂಡು ವಾಸ್ತವ ಚಿತ್ರ ಮೂಡಿಸುತ್ತದೆ. |
| 5. ಸಂವೇದನೆ ನಿರ್ದಿಷ್ಟವಾಗಿರುತ್ತದೆ. ಒಂದು ಇಂದ್ರಿಯ ತನಗೆ ಸಂಬಂಧಪಟ್ಟ ಸಂವೇದನೆಯನ್ನು ಮಾತ್ರ ಉಂಟು ಮಾಡಬಲ್ಲದು. | 5. ಎಲ್ಲಾ ಇಂದ್ರಿಯಗಳಿಂದ ಬರುವ ಸಂವೇದನೆಗಳನ್ನು ಸಂಘಟಿಸಿ ವಸ್ತುವಿನ ಇಡೀ ಚಿತ್ರವನ್ನು ರೂಪಿಸುತ್ತದೆ. |
| 6. ಸಂವೇದನೆಯಿಂದ ವಸ್ತುವಿನ ಸಂಪರ್ಕವುಂಟಾಗುತ್ತದೆಯೇ ವಿನಃ ಅದು ಏನು ? ಏಕೆ ? ಎಂದು ತಿಳಿದು ಬರುವುದಿಲ್ಲ. | 6. ಪ್ರತ್ಯಕ್ಷಾನುಭವದಲ್ಲಿ ವಸ್ತುವಿಗೆ ಅರ್ಥವುಂಟಾಗಿ ಏನು ? ಏಕೇ ? ಎಂಬ ಅರಿವುಂಟಾಗುತ್ತದೆ. |
| 7. ಸಂವೇದನೆ ವಸ್ತು ಅಥವಾ ಸಂಗತಿಯನ್ನು ನಮ್ರ ಸೇವಕನಂತೆ ವಿದೇಯಕವಾಗಿ, ಇದ್ದದ್ದು ಇದ್ದಹಾಗೆ ಪಡಿಯಚ್ಚಿನಂತೆ ಯಾಂತ್ರಿಕವಾಗಿ ಮೆದುಳಿಗೆ ತಲುಪಿಸುತ್ತದೆ. | 7. ಪ್ರತ್ಯಕ್ಷಾನುಭವ ವಸ್ತು ಅಥವಾ ಸಂಗತಿ ಹೇಗಿರಬೇಕೋ ಹಾಗೆ ಉನ್ನತ ಮಾನಸಿಕ ಕ್ರಿಯೆಗಳ ಸಹಾಯದಿಂದ ಸಂಗತಿಯ ಅರಿವುಂಟಾಗುವಂತೆ ಮಾಡುತ್ತದೆ. |
| 8. ಸಂವೇದನೆಗೆ ಮಿತಿ ಇದೆ. ಇದು ಇಂದ್ರಿಯಗಳ ವ್ಯಾಪ್ತಿಯಲ್ಲಿ ಮಾತ್ರ ಕಾರ್ಯ ನಿರ್ವಹಿಸಬಲ್ಲದು. | 8. ಪ್ರತ್ಯಕ್ಷಾನುಭವಕ್ಕೆ ಮಿತಿ ಇಲ್ಲ. ಸಂವೇದನೆಗಳ ಅಭಾವದಲ್ಲಿಯೂ ಅದು ಕಾರ್ಯ ಪ್ರವೃತ್ತವಾಗಬಲ್ಲದು. |

**ಆಕರ ಗ್ರಂಥಗಳು**


1. Mangal S.K (2007) "Advanced Educational Psychology" New Dehli Prentice Hall of India
2. G. Aruna Mohan (2007) "Educational Psychology" Hydrabad Neelkamal Publication
3. ಚಂದ್ರಾಚಾರ್ ಎಚ್. ಎಂ. (1998) 'ಶೈಕ್ಷಣಿಕ ಮನೋವಿಜ್ಞಾನ' ಬೆಂಗಳೂರು ಲೋಟಸ್ ಪ್ರಿಂಟರ್ಸ
4. ಕಾಶೀನಾಥ ಎಚ್. ಎಂ. (2000) 'ಶೈಕ್ಷಣಿಕ ಮನೋವಿಜ್ಞಾನ' ಗದಗ ವಿದ್ಯಾನಿಧಿ ಪ್ರಕಾಶನ


■■

# ಅಂತರ್ಜಾಲ
# (INTERNET)

### ಅಂತರ್ಜಾಲದ ಪೀಠಿಕೆ

ಇದು ಹುಟ್ಟಿದ್ದು 1969ರಲ್ಲಿ ಅಮೇರಿಕಾ ರಕ್ಷಣಾ ಇಲಾಖೆ ಇದನ್ನು ಹುಟ್ಟು ಹಾಕಿತು. ಇದೊಂದು ಒಂದಿಷ್ಟು ಕಂಪ್ಯೂಟರ್ ಜಾಲಗಳ ಮಹಾಜಾಲ ವಿಚಾರ ವಿನಿಮಯದ 'ಮಹಾ ಹೆದ್ದಾರಿ' ಇದು ಕ್ಷಣಕ್ಷಣಕ್ಕೂ ಬದಲಾಗುವ ವಿಸ್ತರಿಸುವ ಸೀಮ ಸರಹದ್ದುಗಳಿಲ್ಲದ ಅಭೌತಿಕ ಪರಿಸರ. ಈ ಕಂಪ್ಯೂಟರಗಳನ್ನು ದೂರವಾಗಿ ತಂತಿಗಳಿಂದಲೇ ದೃಕ್ ತಂತುಗಳ ಮೂಲಕವೋ ಉಪಗ್ರಹದ ರೀತಿಯಿಂದ ಜೋಡಿಸಲ್ಪಟ್ಟ ಕಂಪ್ಯೂಟರಗಳ ಗುಂಡಿಗೆ ಇಂಟರ್ ನೆಟ್ ಎನ್ನುವರು.

ಭಾರತದಲ್ಲಿ ಇಂಟರ್ ಸೇವೆಯನ್ನು ಮೊದಲು ಅಗಸ್ಟ್ 15.1995 ರಂದು ಜಾರಿಗೆ ಬಂದಿದೆ. ದೂರದಲ್ಲಿರುವ ಕಂಪ್ಯೂಟರ್‌ಗಳನ್ನು ಅಂದರೆ ಕರ್ನಾಟಕದ ಯಾವುದೇ ಮೂಲೆಯಲ್ಲಿರುವ ನಿಮ್ಮ ಕಂಪ್ಯೂಟರನಿಂದ ನ್ಯೂಯಾರ್ಕಿಗೂ ಸಂಪರ್ಕ ಪಡೆದು ಮಾಹಿತಿ ಪಡೆಯಬಹುದು. ಇಂಟರ್ ನೆಟ್ ಎಂಬುದು ಇಡೀ ಭೂಮಿಯನ್ನು ತನ್ನೊಳಗೆ ಅಡಗಿಕೊಂಡಿರುವ ವೆಟ್ ಎಂದೂ ಭಾರತದಲ್ಲಿ ಸದ್ಯಕ್ಕೆ ''ವಿದೇಶ ಸಂಚಾರಿ'' ನಿಗಮ ಮತ್ತು ಸಾಫ್ಟವೇರ ಟೆಕ್ನಾಲಜಿ ಪಾರ್ಕ ಹಾಗೂ ಇತರ ಕಂಪನಿಗಳ ಮೂಲಕ ಇಂಟರ್ ನೆಟ್ ಸೌಲಭ್ಯ ಪಡೆಯಬಹುದು.

### Internet ನ ಅರ್ಥ

ಈ ಪದವು ಕಮ್ಯುನಿಕೇಷನ್ ಅಥವಾ ನೆಟ್ ವರ್ಕ ಎಂಬ ಪದಗಳಿಂದ ಮೂಡಿ ಬಂದಿದ್ದು ಪರಸ್ಪರ ಸಹಯೋಗದಿಂದ ಕೆಲಸ ಮಾಡುವ ಕಂಪ್ಯೂಟರನ ಗುಂಪು Internet ಈ ನೆಟವರ್ಕಗೆ ಗೊತ್ತಾದ ನಿಯಂತ್ರ ಮತ್ತು ನಿಯಮಾವಳಿಗಳ ಮೂಲಕ ಸಂಪರ್ಕ ಏರ್ಪಡಿಸಲಾಗುತ್ತದೆ.

- ಅಸಂಖ್ಯಾತ ಲ್ಯಾನು ಮತ್ತು ವ್ಯಾನು ಸಂಪರ್ಕ ಸಮೂಹವೇ Internet ಎಂದು ಕರೆಯುತ್ತಾರೆ.
- ಸೂಕ್ಷ್ಮ ಕಂಪ್ಯೂಟರ್ Network ಗಳನ್ನು ಒಂದುಗೂಡಿಸಿ ದೊಡ್ಡ Network ನ್ನಾಗಿ ತಯಾರು ಮಾಡಿದಾಗ Internet ಎನ್ನುವರು.
- ಒಂದು ದಶಲಕ್ಷಕ್ಕಿಂತಲೂ ಹೆಚ್ಚು ಕಂಪ್ಯೂಟರಗಳಲ್ಲಿಗೆ ಪರಸ್ಪರ ಸಂಪರ್ಕ ಕಲ್ಪಿಸಿಕೊಂಡ Internet ಜಾಲವನ್ನು Internet ಎನ್ನುವರು.
- Internet ಎಂಬುದು ಒಂದು ದೊಡ್ಡ ಕಂಪ್ಯೂಟರ ಮತ್ತು ಜಾಲ, ಮಾಹಿತಿಯ ಮಹಾ ಹೆದ್ದಾರಿ.
- ಒಂದಕ್ಕಿಂತ ಹೆಚ್ಚು ಕಂಪ್ಯೂಟರಗಳನ್ನು ಒಂದು ಗೊತ್ತಾದ ವಿಧದಲ್ಲಿ ಜೋಡಿಸುವ ವ್ಯವಸ್ಥೆಯೇ ಕಂಪ್ಯೂಟರಿನ ಜಾಲ.

### ಅಂತರ್ಜಾಲದ ಪ್ರಕಾರಗಳು

ಇದರಲ್ಲಿ 2 ವಿಧಗಳಿವೆ ಅವು ಈ ಕೆಳಗಿನಂತಿವೆ.

**a) LAN ಸ್ಥಳೀಯ ಕ್ಷೇತ್ರಜಾಲ**

ಒಂದು ಆಫೀಸನೊಳಗೆ ಇರುವ ಎಲ್ಲಾ ಕಂಪ್ಯೂಟರಗಳನ್ನು ಜೋಡಿಸುವ ವ್ಯವಸ್ಥೆಯನ್ನು ಸ್ಥಳೀಯ ಕ್ಷೇತ್ರ ಜಾಲ ಎನ್ನುವರು.

**b) WAN ವಿಶಾಲ ಕ್ಷೇತ್ರಜಾಲ**

ಭೌಗೋಳಿಕವಾಗಿ ದೂರ-ದೂರದಲ್ಲಿ ಹರಡಿಕೊಂಡಿರುವ ಕಂಪ್ಯೂಟರಗಳನ್ನು ಜೋಡಿಸುವ ವ್ಯವಸ್ಥೆಯೇ WAN

### Internet ನಿಂದ ಆಗುವ ಲಾಭಗಳು

- Internet ಸಹಾಯದಿಂದ Computer ನಲ್ಲಿ Serach ಕೊಟ್ಟಾಗ ಯಾವ ಸಮಯದಲ್ಲಾದರೂ, ಎಲ್ಲಿ ಬೇಕಾದರೂ ಮಾಹಿತಿಯನ್ನು ನೀಡಿರುವ ಸ್ಥಳದಿಂದ ಪಡೆಯಬಹುದು.
- ಮಾಹಿತಿ ಪಡೆಯಲು ಬಹಳ ಸುಲಭ ಮತ್ತು ಅತೀ ಕಡಿಮೆ ವೆಚ್ಚ 'Browsing Center' ನಲ್ಲಿ ಒಂದು ಘಂಟೆಗೆ 10 ರೂ. ನಿಂದ 20 ರೂ.ಗಳು ಮಾತ್ರ ಖರ್ಚಾಗುತ್ತದೆ.
- Translate software ಇದ್ದಲ್ಲಿ ಯಾವ ಭಾಷೆಯಲ್ಲಾದರೂ ಅದನ್ನು ನಮಗೆ ಬೇಕಾದ ಭಾಷೆಯಲ್ಲಿ ತರ್ಜುಮೆ ಮಾಡಿಕೊಳ್ಳಬಹುದು.
- Digital Library ಯಲ್ಲಿ ಕೆಲವೊಂದು ಮಾಹಿತಿಗಳನ್ನು ಹಣವನ್ನು ವೆಚ್ಚ ಮಾಡದೇ ಪಡೆಯಬಹುದು.
- CD ಗಳಿಂದ ಹಲವಾರು ವಿಷಯವನ್ನು ಇಂಟರ್‌ನೆಟ್‌ನಿಂದ ಮಾಹಿತಿ ಸಂಗ್ರಹಿಸಿಡಲು ಸಾಧ್ಯ.
- Internet ಮೂಲಕ ನಮ್ಮಲ್ಲಿರುವ ವಸ್ತುಗಳನ್ನು ಮಾರಾಟ ಮಾಡಬಹುದು.
- ನಿಮ್ಮ ಪ್ರವಾಸವನ್ನು ಸುರಕ್ಷತ ಮತ್ತು ಸುಖಮಯವಾಗಿ ಇದರಿಂದ ಮಾಡಿಕೊಳ್ಳಬಹುದು.
- ಜಗತ್ತಿನಾದ್ಯಂತ ಇರುವ ಜನರ ಜೊತೆಗೆ ಮಾತನಾಡಲು ಸಹಾಯಕಾರಿ.
- E-mail ನಿಂದ ಜಗತ್ತಿನಾದ್ಯಂತ ಜನರಿಗೆ ಸಂದೇಶ ಕಳಿಸಬಹುದು.
- ಶಾಪಿಂಗ್ (ವ್ಯಾಪಾರ) ಬ್ಯಾಂಕ್ ವ್ಯವಹಾರ ಮಾಡಲು ಕೂಡಾ ಸಹಾಯಕಾರಿ.
- ಇದರಿಂದ ಕ್ರೀಡೆ, ಹಣಕಾಸು, ಸಾಹಿತ್ಯ, ರಕ್ಷಣೆ, ಸಿನಿಮಾ, ಸಂಗೀತ, ಆಹಾರ, ಔಷಧಿ ಮುಂತಾದ ವಿಷಯ ತಿಳಿಯಲು ಸಹಾಯಕಾರಿ.
- ವಧು-ವರರ ಸಮಾವೇಶಕ್ಕೆ ಸಾಕ್ಷಿಯಾಗಿದೆ. ನಿರ್ದಿಷ್ಠ ವಯೋ ಮಾನದವರು ನಿರ್ದಿಷ್ಠ ವಿಳಾಸವೂ ಇರುತ್ತದೆ.

### E-mail

ಇದು ಅತ್ಯಾಧುನಿಕ ತಂತ್ರಜ್ಞಾನ. ಇದರಿಂದ ಅತೀ ವೇಗವಾಗಿ

✍ ಸುಮಂಗಲಾ ಎಸ್. ಆಯಟ್ಟಿ, ಶ್ರೀ ಬಸವೇಶ್ವರ ರೂರಲ್ ಎಜ್ಯುಕೇಶನ್ ಅ್ಯಂಡ್ ಡೆವಲಪಮೆಂಟ್ ಟ್ರಸ್ಟ್ (ರಿ).
ಎಂ.ಇಡಿ., ಕಾಲೇಜ ಸತ್ತೂರು, ಧಾರವಾಡ.

ಸಂದೇಶಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕಳಿಸಬಹುದು. ಇದರಿಂದ ಜಗತ್ತಿಗೆ ಬಹಳ ಅನುಕೂಲವೂ ಇದೆ. ಇದರಿಂದ ಹಲವು ದುರುಪಯೋಗಗಳಿವೆ, ಹೆಣ್ಣು ಮತ್ತು ಗಂಡು / ಹುಡುಗರು–ಹುಡುಗಿಯರು ಇದರಿಂದ ಪ್ರೇಮ ಪ್ರಲಾಪ ಹಂಚಿಕೊಂಡು ದುರುಪಯೋಗ ಮಾಡಿಕೊಳ್ಳುತ್ತಿದ್ದರು. ಇಂತಹವು ಜರ್ಮನಿ, ಫ್ರಾನ್ಸ್‌ಗಳಲ್ಲಿ ನಡೆದ ಘಟನೆಗಳಾಗಿವೆ.

E-Mail ಎನ್ನುವದು ಎಲೆಕ್ಟ್ರಾನಿಕ್ mail ನ ಸಂಕ್ಷಿಪ್ತವಾದ ರೂಪವಾಗಿದೆ. ಇದನ್ನು ಕನ್ನಡದಲ್ಲಿ ವಿದ್ಯುನ್ಮಾನ ಅಂಚೆ ಎನ್ನುವರು.

ಇದನ್ನು ತಮ್ಮ ಕಂಪ್ಯೂಟರನ ಮೂಲಕ ಯಾರಿಗೆ ಬೇಕಾದರೂ ಪತ್ರವನ್ನು ಬರೆದು ಕಳುಹಿಸಬಹುದು. ಪ್ರತಿಯೊಬ್ಬರಿಗೂ ಅವರದೇ ಆದ – E-Mail ಅಡ್ರೆಸ್ ಇರುತ್ತದೆ. ಇದನ್ನು ID ಯಿಂದಲೂ ಗೆಳೆಯರ ಸೂಕ್ಷ್ಮ ಸೈಬರ ಕೆಫೆಯಿಂದಲೂ ಪಡೆಯಲೂಬಹುದು.

ಸಾಮಾನ್ಯವಾಗಿ ಸೈಬರ್ ಕೆಫೆ ಬ್ರೌಸಿಂಗ್ ಸೆಂಟರ್ ಎನ್ನುವರು. E-mail ಕಳುಹಿಸಲು ಜಾಸ್ತಿ ಹಣವೇನೂ ಬೇಕಾಗುವುದಿಲ್ಲ, ಸ್ಥಳೀಯ ದೂರವಾಣಿ ಕರೆಗಳ ದರದಲ್ಲಿಯೇ E-mail ಕಳುಹಿಸಲು ಸಾಧ್ಯ.

ಒಂದು E-mail ನ್ನು ಬೇಕಾದಷ್ಟು ಜನರಿಗೆ ಕಳುಹಿಸಬಹುದು. E-mail ನಿಂದ ನಮ್ಮ ಬಳಿಯಿರುವ ಸುದ್ದಿಯನ್ನು ಇಡೀ ಪ್ರಪಂಚಕ್ಕೆ ಹರಡಬಹುದು. ಇದು ತುಂಬಾ ವೇಗವಾಗಿ ಹಾಗೂ ಕಡಿಮೆ ಖರ್ಚಿನಲ್ಲಿ ಮಾಡಬಹುದು. ಇದು ಉತ್ತಮ ರೀತಿಯ ಸುದ್ದಿ ಮಾಧ್ಯಮ, ವಿಡಿಯೋ, photo ಮಾತುಗಳನ್ನು ಸಹ ಎಲ್ಲ ಕಡೆಗೆ ಕಳುಹಿಸಬಹುದು.

**ಉಪಸಂಹಾರ**

ಅಂತರ್ಜಾಲ ಎನ್ನುವುದು ಪ್ರತಿಯೊಂದು ಕ್ಷೇತ್ರಗಳಿಗೆ ಅಂದರೆ, ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಧಾರ್ಮಿಕ ಎಲ್ಲಾ ರಂಗಗಳಲ್ಲೂ ಇದರ ಕಾರ್ಯಕ್ಷಮತೆಯನ್ನು ನೋಡುತ್ತಿದ್ದೇವೆ. ಅಂತರ್ಜಾಲದಿಂದ ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ ತುಂಬಾ ಸಹಾಯಕವಾಗಿದೆ. ಅಧ್ಯಯನಕ್ಕೆ ಸಂಬಂಧಪಟ್ಟ ಮಾಹಿತಿಗಳು ಪಠ್ಯಪುಸ್ತಕಗಳಲ್ಲಿ ದೊರೆಯದೇ ಒಂದೇ ರೀತಿಯಲ್ಲಿಯೂ ಇದ್ದಾಗ ಅಂತರ್ಜಾಲದ ಮುಖಾಂತರ ಸಮಗ್ರವಾದ ಮಾಹಿತಿ ಪಡೆದು ವಿದ್ಯಾರ್ಥಿಗಳಿಗೆ ಬೋಧಿಸಲು ಶಿಕ್ಷಕರಿಗೆ ಸಹಾಯಕಾರಿಯಾದ ವಿದ್ಯಾರ್ಥಿಗಳು ಆ ಸಮಗ್ರ ಮಾಹಿತಿ ಪಡೆದು ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕ ಗಳಿಸಲು ಸಹಾಯಕಾರಿಯಾಗಿದೆ.

## ಆಕರ ಗ್ರಂಥಗಳು


1. **ಬಿಲಕಾರ ಎಂ.ಎಚ್.** : (2006–07) –''ಶಿಕ್ಷಣದಲ್ಲಿ ಸಂಶೋಧನೆ'' ವಿಜೇತ ಪ್ರಕಾಶನ, ಗದಗ. ಪುಟ ಸಂಖ್ಯೆ (157)
2. **ನಾಗರಾಜ ಪಿ.** : (2006–07) ಶಿಕ್ಷಣದಲ್ಲಿ ತತ್ವಶಾಸ್ತ್ರ ಮತ್ತು ಸಮಾಜಶಾಸ್ತ್ರ ವಿದ್ಯಾನಿಧಿ ಪ್ರಕಾಶನ, ಗದಗ. ಪುಟ ಸಂಖ್ಯೆ 612–616.



■■

# ಗ್ಯಾಗ್ನೆಯವರ ಸಂಚಿತ ಕಲಿಕೆಯ ಮಾದರಿ
## (GAGNE'S CUMULATIVE LEARNING MODEL)

**ಪೀಠಿಕೆ**

ರಾಬರ್ಟ್ ಎಂ. ಗ್ಯಾಗ್ನೆಯವರು ಅಮೇರಿಕಾದ ಒಬ್ಬ ಮನೋವಿಜ್ಞಾನದ ಶಾಸ್ತ್ರಜ್ಞ ಇವರು ಅಗಸ್ಟ 21, 1916 ಜನಿಸಿದರು. ಇವರು 1949 ರಲ್ಲಿ ಪಿಎಚ್.ಡಿ ಪದವಿಯನ್ನು ಪಡೆದುಕೊಂಡರು. ಇವರು ದ್ವಿತೀಯ ಮಹಾಯುದ್ಧ ಮುಗಿದ ನಂತರ ಅಮೇರಿಕಾದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಮನೋವಿಜ್ಞಾನದ ವಿಭಾಗದಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದ್ದಲ್ಲದೆ ಆ ವೇಳೆಗೆ ಅನೇಕ ಪ್ರಯೋಗಗಳನ್ನು ಕೈಗೊಂಡಿದ್ದರು. ಈ ಪ್ರಯೋಗಗಳ ಮೂಲಕ ಅವರು ತಿಳಿಸಿಕೊಟ್ಟಿದ್ದೇನೆಂದರೆ ಎಲ್ಲ ಕಲಿಕೆಯು ಒಂದೇ ತೆರನಾಗಿರುವುದಿಲ್ಲವೆಂದು ಹೇಳಿದ್ದಾರೆ.

ಗ್ಯಾಗ್ನೆಯವರು ಎಂಟು ಕಲಿಕಾ ಪ್ರಕಾರಗಳನ್ನು ಗುರುತಿಸಿದ್ದಾರೆ. ಈ ಎಂಟು ಕಲಿಕಾ ಪ್ರಕಾರದ ಹಂತಗಳು ಸಮಾನಸ್ಥಾನ ಪಡೆದುಕೊಂಡಿದ್ದು ಇವು ಒಂದೊಂದು ಹಂತಗಳನ್ನು ಅನುಕ್ರಮವಾಗಿ ಕಲಿಯುತ್ತಾ ಹೋದಂತೆ ಮುಂದಿನ ಹಂತವನ್ನು ಕಲಿಯಲು ಸಹಾಯಕವಾಗುತ್ತವೆ.




ಗ್ಯಾಗ್ನೆ ಕ್ರಮಾನುಗತ ಕಲಿಯುವಿಕೆಯ ಪಿರಾಮಿಡ್ ರಚನೆ.

**1. ಸಂಜ್ಞಾ ಕಲಿಕೆ**

ಇದು ಅತ್ಯಂತ ಕೆಳಹಂತದ ಕಲಿಯಾಗಿದ್ದು ಸಾಮಾನ್ಯವಾಗಿ ಕಲಿಕೆಯು ಸಂಜ್ಞೆಗಳ ಮೂಲಕವೇ ಸಾಗುತ್ತದೆ. ಅಂದರೆ ಕೈ ಸನ್ನೆ, ಕಣ್‌ಸನ್ನೆ ಮುಂತಾದವುಗಳ ಮೂಲಕ ಜರಗುತ್ತದೆ. ಇದು ಪಾವಲೋವನ ಅಭಿಜಾತ ಅನುಬಂಧಿತ ಕಲಿಕಾ ತತ್ವದ ಮೇಲೆ ಪ್ರತಿಪಾದಿತವಾಗಿದೆ. ಪ್ರಚೋದನೆಯಿಂದ ಪುನರ್ಬಲನ ಒದಗಿಸುತ್ತದೆ.

ಉದಾ : ಹೂವಿನ ಹತ್ತಿರ ಹೋದರೆ ಸುವಾಸನೆ.
ಈರುಳ್ಳಿಯನ್ನು ಕತ್ತರಿಸುವಾಗ ಕಣ್ಣೀರು.

**2. ಪ್ರಚೋದನಾ ಪ್ರತಿಕ್ರಿಯೆ ಕಲಿಕೆ**

ಇದು ಥಾರ್ನಡೈಕ್‌ರವರ ಪ್ರಯತ್ನ ದೋಷ ಕಲಿಕೆಯ ಮೇಲೆ ಪ್ರತಿಪಾದಿತವಾಗಿದೆ. ಇಲ್ಲಿ ಒಂದು ನಿರ್ದಿಷ್ಟ ಪ್ರಚೋಧನೆಗೆ ಒಂದು ನಿರ್ದಿಷ್ಟ ಪ್ರತಿಕ್ರಿಯೆ ಇರುತ್ತದೆ. ಇದು ನಿರಂತರ ಅಭ್ಯಾಸ ಮತ್ತು ಪುನರ್ಬಲನಗಳ ಮೂಲಕ ನಡೆಯುತ್ತದೆ. ನಿಯಂತ್ರಿತ ಉದ್ದೀಪನವು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಉದಾ : ಬಿಸಿಯಾದ ವಸ್ತುವನ್ನು ಮುಟ್ಟಿದಾಗ ತಕ್ಷಣ ಕೈಯನ್ನು ಹಿಂದಕ್ಕೆ ತೆಗೆದುಕೊಳ್ಳುವುದು.

**3. ಸರಪಳಿ ಕಲಿಕೆ**

ಸರಪಳಿ ಕಲಿಕೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಪ್ರಚೋಧನ ಮತ್ತು ಪ್ರತಿಕ್ರಿಯೆಗಳ ಒಂದು ಕೊಂಡಿಯಾಗಿರುತ್ತದೆ. ಇದು ನಿರಂತರ ಪ್ರಕ್ರಿಯೆಗಳ ಸರಣಿಯಾಗಿ ಪುನರ್ಬಲನವಾದಾಗ ಮಾತ್ರ ಕಲಿಕೆಯಾಗುತ್ತದೆ. ಈ ಕೊಂಡಿಗಳ ಸಂಬಂಧಗಳ ನಡುವೆ ಕಡ್ಡಾಯವಾಗಿ ನಿರಂತರತೆಯಿರಬೇಕು.

ಉದಾ : ವಿದ್ಯಾರ್ಥಿ ಮೊದಲು ಇಂಗ್ಲಿಷ ದಪ್ಪ ಅಕ್ಷರಗಳನ್ನು ಕಲಿಯುವನು.

SATTUR

**4. ಶಾಬ್ದಿಕ ಸಹಚರ್ಯ ಕಲಿಕೆ**

ಭಾಷೆಯ ಶಾಬ್ದಿಕವಾಗಿ ಹೆಣೆದುಕೊಂಡಿದ್ದರಿಂದ ಶಾಬ್ದಿಕವಾಗಿ ಕಲಿಕೆಯ ನಡೆಯುತ್ತಿರುತ್ತದೆ. ಕಲಿಕೆಯ ಪ್ರತಿಯೊಂದು ಶಬ್ದ–ಶಬ್ದಕ್ಕೂ ಸಂಬಂಧ ಕಲ್ಪಿಸುವುದರ ಮೂಲಕ ನಡೆಯುತ್ತದೆ. ಇಲ್ಲಿ ಕಲಿಕಾರ್ಥಿಯ ಏನನ್ನು ಸೂಚಿಸುತ್ತದೆಂಬುದನ್ನು ತಿಳಿದಿರಬೇಕು.

ಉದಾ : ಉಂಗುರ– ಬೆರಳು, ಓಲೆ– ಕಿವಿ

**5. ಬಹು ಪರ್ಯಾಯ ಕಲಿಕೆ**

ಕಲಿಕೆಯು ಒಂದು ಪ್ರಚೋದನೆ–ಪ್ರತಿಕ್ರಿಯೆಯ ಅಂಶಗಳ ಸರಪಳಿಯ ನಡುವೆ ಸಹ ಸಂಬಂಧವಿರುತ್ತದೆ. ಇಲ್ಲಿ ವಸ್ತುಗಳು ಘಟಕಗಳ ಉಪಯೋಗಗಳ ಗುಣಲಕ್ಷಣಗಳಿಗನುಗುಣವಾಗಿ ಪ್ರತ್ಯೇಕಿಸುವ ಸಾಮರ್ಥ್ಯವನ್ನು ಮಗು ಪಡೆದುಕೊಳ್ಳುತ್ತದೆ. ಇಲ್ಲಿ ಪ್ರತಿ ವಸ್ತುವು ಭಿನ್ನವಾಗಿಯೇ ತೋರುತ್ತದೆ.

ಉದಾ : ಪ್ರಾಣಿಗಳು, ಪಕ್ಷಿಗಳೂ, ಹೂಗಳು

**6. ಪರಿಕಲ್ಪನಾತ್ಮಕ ಕಲಿಕೆ**

ಒಂದು ನಿರ್ದಿಷ್ಟ ಗುಂಪು ವಿವಿಧ ಸನ್ನಿವೇಶಗಳಲ್ಲಿ ಭೌತಿಕವಾಗಿ ಸಾಮರ್ಥ್ಯಗಳನ್ನು ತೋರಿಸುವುದೇ ಪರಿಕಲ್ಪನೆಯಾಗಿರುತ್ತದೆ. ಒಂದು ವಸ್ತುವಿನ ಬಗ್ಗೆ ಅಥವಾ ವಿಷಯದ ಬಗ್ಗೆ ಹೊಂದಿರುವ ಸಂಪೂರ್ಣ ಅಭಿಪ್ರಾಯವೇ ಪರಿಕಲ್ಪನೆ. ಈ ಹಂತದಲ್ಲಿ ವಸ್ತುಗಳ ಗುಣಲಕ್ಷಣಗಳಿಂದಾಗಿ ಮತ್ತು ಸಾರ್ವತ್ರಿಕರಣಗೊಂಡ ಹೇಳಿಕೆಗಳಿಂದಾಗಿ ಪರಿಕಲ್ಪನೆಗಳು ಸ್ಪಷ್ಟಗೊಳ್ಳುತ್ತ ಹೋಗುತ್ತವೆ.

✍ ರೂಪಾ ಮ. ದೊಡಭಂಗಿ, ಎಂ.ಇಡಿ., ಕಾಲೇಜು, ಸತ್ತೂರ – ಧಾರವಾಡ

ಉದಾ : ಕಾಡು ಪ್ರಾಣಿಗಳು ಸಾಕು ಪ್ರಾಣಿಗಳು

**7. ನಿಯಮ ಅಥವಾ ಸಿದ್ಧಾಂತ ಕಲಿಕೆ**

ನಿಯಮ ನಿರೂಪನೆಯಾಧಾರದ ಮೇಲೆ ಒಂದು ಪರಿಕಲ್ಪನೆಯನ್ನು ಕಲಿಯಲು ಸಹಾಯ ಮಾಡುತ್ತದೆ. ಇಲ್ಲಿ ಮೊದಲಿನ ಕಲಿಕೆಯಾಗದೆ ಹೋದಲ್ಲಿ ಈ ಕಲಿಕೆ ಅಸಾಧ್ಯ.

ಉದಾ : ಯಾವುದಾದರೊಂದು ವಸ್ತುವಿಗೆ ಬೆಂಕಿ ಉರಿಯುತ್ತಿರಲು ಅದರಲ್ಲಿರುವ ಆಮ್ಲಜನಕ ನಶಿಸಿ ಹೋಗುತ್ತದೆ.

**8. ಸಮಸ್ಯಾ ಪರಿಹಾರ ಕಲಿಕೆ**

ಇದು ಗ್ಯಾಗ್ನೆಯವರ ಕಲಿಕಾ ಶ್ರೇಣಿಯ ಕೊನೆಯ ಮತ್ತು ಶ್ರೇಷ್ಠವಾದ ಹಂತವಾಗಿದೆ. ಇಲ್ಲಿ ವ್ಯಕ್ತಿ ಸಮಸ್ಯೆಗಳನ್ನು ಆಯ್ಕೆ ಮಾಡಿಕೊಂಡು ಅನೇಕ ಹಂತಗಳ ಮೂಲಕ ಆ ಸಮಸ್ಯೆಯನ್ನು ತನ್ನಷ್ಟಕ್ಕೆ ತಾನೇ ಪರಿಹರಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದುಕೊಂಡಿರುತ್ತಾನೆ. ಪೂರ್ವಭಾವಿ ಕಲಿತ ತತ್ವಗಳನ್ನು ಧಾರಣ ಮಾಡುವ ಸಾಮರ್ಥ್ಯ ಹೊಂದಿರಬೇಕು.

ಉದಾ : ಒಬ್ಬ ವಿದ್ಯಾರ್ಥಿ ಇಲ್ಲಿ ವ್ಯಾಕರಣದ ಬಗ್ಗೆ ಎಲ್ಲವನ್ನು ತಿಳಿದುಕೊಂಡ ನಂತರ ಅದರ ಉದಾಹರಣೆಗಳನ್ನು ಸುಲಭವಾಗಿ ಬಿಡಿಸುತ್ತಾನೆ.

**ಉಪಸಂಹಾರ**

ಹೀಗೆ ಗ್ಯಾಗ್ನೆಯವರು ಕಲಿಕೆಯ ಎಂಟು ಸೋಪಾನಗಳನ್ನು ತಿಳಿಸಿಕೊಟ್ಟಿದ್ದಾರೆ. ಇದರಿಂದ ಕಲಿಕೆ ಯಾವ ರೀತಿ ಅರ್ಥಪೂರ್ಣವಾಗುತ್ತದೆ. ಎಂಬುದನ್ನು ಅವರು ತಿಳಿಸಿಕೊಟ್ಟಿದ್ದಾರೆ. ಒಂದು ವಿಷಯವನ್ನು ಹಂತ ಹಂತವಾಗಿ ಕಲಿಯುವುದರಿಂದ ಕಲಿಕೆಯಲ್ಲಿ ಆಸಕ್ತಿ ಮತ್ತು ಅರ್ಥಪೂರ್ಣತೆಯನ್ನು ಸಾಧಿಸಬಹುದು ಎಂದು ತಿಳಿಸಿಕೊಟ್ಟಿದ್ದಾರೆ. ಒಂದು ವಿಷಯವನ್ನು ಸಂಜ್ಞೆಗಳ ಮೂಲಕ, ಪ್ರಚೋದನೆ ಮೂಲಕ, ಸರಪಳಿ ಮೂಲಕ ಹೀಗೆ ಕಲಿಯುತ್ತಾ ಹೋಗಿ ಕೊನೆಗೆ ನಾವು ಆ ವಿಷಯದ ಅರ್ಥವನ್ನು ಕಂಡುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

**ಆಕರ ಗ್ರಂಥಗಳು**

1. ಕುಲಕರ್ಣಿ ಕೆ. ಜಿ. (2006), ಶೈಕ್ಷಣಿಕ ಮನೋವಿಜ್ಞಾನ ಪ್ರದೀಪ ಪ್ರಕಾಶನ ಗದಗ, (123–126)
2. ಓಬಳೇಶಘಟ್ಟಿ ಆರ್. (2008), ಶೈಕ್ಷಣಿಕ ಮನೋವಿಜ್ಞಾನ ವಿದ್ಯಾನಿಧಿ ಪ್ರಕಾಶನ ಗದಗ, (113–119)
3. ಕೊಂಗವಾಡ ಎನ್. ಬಿ. (2008), ಶೈಕ್ಷಣಿಕ ಮನೋವಿಜ್ಞಾನ ವಿದ್ಯಾನಿಧಿ ಪ್ರಕಾಶನ ಗದಗ, (161–162)

■■

# ಸಮುದಾಯ ಮತ್ತು ಶಿಕ್ಷಣ
# (COMMUNITY AND EDUCATION)

## ಅರ್ಥ

''ಸಮುದಾಯ'' ಎಂಬ ಪದವನ್ನು ಬಹಳ ಶಿಥಿಲ ಅರ್ಥದಲ್ಲಿ ಬಳಸಲಾಗುತ್ತಿದೆ. ಜನಸಾಮಾನ್ಯರು ತಮ್ಮ ಆಡುವ ಮಾತಿನಲ್ಲಿ ಈ ಪದವನ್ನು ಬಹಳ ಧಾರಾಳವಾಗಿ ಆದರೆ ವಿಭಿನ್ನ ಅರ್ಥಗಳಲ್ಲಿ ಬಳಸುತ್ತಾರೆ. ಉದಾ ಕಾರ್ಮಿಕ ಸಮುದಾಯ, ಭಾಷಾ ಸಮುದಾಯ, ಜಾತಿ ಸಮುದಾಯ, ಬುಡಕಟ್ಟಿನ ಸಮುದಾಯ, ಸಾಂಸ್ಕೃತಿಕ ಸಮುದಾಯ, ಔದ್ಯೋಗಿಕ ಸಮುದಾಯ, ಶಿಕ್ಷಕ ವಿದ್ಯಾರ್ಥಿ ಸಮುದಾಯ, ರಾಷ್ಟ್ರೀಯ ಸಮುದಾಯ, ಮಾನವ ಸಮುದಾಯ ಮುಂತಾದ ಹಲವು ಅರ್ಥಗಳಲ್ಲಿ ಸಂದರ್ಭಕ್ಕನುಸರಿಸಿ ಈ ಪದವು ಬಳಸಲ್ಪಡುತ್ತಿದೆ. ಕುಟುಂಬ ಅಥವಾ ನಾಲ್ಕೈದು ಮಂದಿಯ ಚಿಕ್ಕ ಸಂಘದಿಂದ ಹಿಡಿದು ಇಡೀ ಮಾನವ ಕೋಟಿಯಂತಹ ಬೃಹತ್ ಸಮೂಹವನ್ನು ಸೂಚಿಸಲು ''ಸಮುದಾಯ'' ಎಂಬ ಪದವನ್ನು ಪ್ರಯೋಗಿಸುವುದುಂಟು, ಸಮಾಜಶಾಸ್ತ್ರದಲ್ಲಿ ಮಾತ್ರ ''ಸಮುದಾಯ'' ಎಂಬುದು ಒಂದು ಮೂಲಕಲ್ಪನೆಯಾಗಿದ್ದು ಅದಕ್ಕೊಂದು ವಿಶೇಷವಾದ ವ್ಯಾಖ್ಯಾನವನ್ನು ನೀಡಲಾಗಿದೆ.

## ಒಂದು ಸಾಮಾಜಿಕ ಘಟಕವಾಗಿ ಸಮುದಾಯ
(The Community as a Social unity)

ಸಮುದಾಯ ಎಂಬ ಶಬ್ಧವನ್ನು ಇಂದು ಸಮಾಜಶಾಸ್ತ್ರದಲ್ಲಿ ಎಲ್ಲರೂ ಬಳಸುತ್ತಿದ್ದರೂ ಅವರುಗಳಲ್ಲಿ ಅದರ ಅರ್ಥ ನಿಖರತೆಯ ಬಗ್ಗೆ ಸಹಮತವಿಲ್ಲ, ಅದನ್ನು ಹಲವರು ಹಲವು ವಿಧಗಳಲ್ಲಿ ಒಮ್ಮೊಮ್ಮೆ ತೀರಾ ಅಸ್ಪಷ್ಟ ಅರ್ಥದೊಂದಿಗೆ ಬಳಸುವುದುಂಟು.

## ಸಮುದಾಯದ ವ್ಯಾಖ್ಯೆಗಳು

ಸಾಮಾಜಿಕ ಜೀವನದ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಒಂದು ಅತೀ ಚಿಕ್ಕ ಸ್ಥಾನೀಯ ಜನ ಸಮೂಹವನ್ನು ಸಮುದಾಯ ಎನ್ನಬಹುದು.
**- ಕಿಂಗ್ಸಲೇ ಡೇವಿಸ್**

ನಾವು ನಮ್ಮವರು ಎಂಬ ಭಾವನೆಯೊಂದಿಗೆ ಒಂದು ನಿಶ್ಚಿತ ಭೂಪ್ರದೇಶದಲ್ಲಿ ವಾಸಿಸುವ ಜನಸಮೂಹವನ್ನು ಸಮುದಾಯ ಎನ್ನಬಹುದು. **- ಎಮೊಲ ಬೋಗಾರ್ಡಸ್**

ಸಾಮಾಜಿಕ ಸಾಮರಸ್ಯ ಅಥವಾ ಸಾಮಂಜಸ್ಯವನ್ನು ಹೊಂದಿರುವ ಒಂದು ಸಾಮಾಜಿಕ ನೆಲೆಯನ್ನು ಸಮುದಾಯ ಎನ್ನಬಹುದು.
**- ಆರ್. ಎಮ್. ಮೆಕೈವರ್ ಮತ್ತು ಸಿ. ಎಚ್. ಪೇಜ್**

ಒಂದೆಡೆ ಕಲೆತು ವಾಸಿಸುವ ಮತ್ತು ಯಾವುದೇ ಕೆಲವು ನಿರ್ದಿಷ್ಟ ಹಿತಾಸಕ್ತಿಗಳು ಮಾತ್ರವಲ್ಲದೆ, ಸಮಾನ ಹಿತಾಸಕ್ತಿಗಳ ರಾಶಿಯನ್ನೇ ಹೊಂದಿರುವ ಕಾರಣದಿಂದಾಗಿ ಒಂದುಗೂಡಿರುವ ಜನಸಮೂಹವನ್ನು ಸಮುದಾಯ ಎನ್ನಬಹುದು. **- ಮ್ಯಾನ್ ಹೀಮ್**

ಈ ಮೇಲಿನ ವ್ಯಾಖ್ಯೆಗಳು ಸಮುದಾಯವು ಬಹಳ ವಿಶಾಲಾರ್ಥದ ಮತ್ತು ಸರ್ವಸಮಾವೇಶಕ (All inclusive) ಕಲ್ಪನೆಯಾಗಿದೆ ಎಂಬ ಅಂಶವನ್ನು ಸ್ಪಷ್ಟಪಡಿಸುತ್ತವೆ. ಅದು ತನ್ನ ವ್ಯಾಪ್ತಿಯಲ್ಲಿ ಅನೇಕ ಸಂಘಗಳನ್ನು ಸಂಸ್ಥೆಗಳನ್ನು ಒಳಗೊಂಡಿರುತ್ತದೆ. ಸಮುದಾಯವು ನಮ್ಮ ಸಾಮಾಜಿಕ ಜೀವನವನ್ನು ಒಳಗೊಂಡಿರುವ ಒಂದು ವಿಶಾಲ ವ್ಯವಸ್ಥೆ ಉದಾ : ಗ್ರಾಮ ಪಟ್ಟಣ, ನಗರ, ಆದಿವಾಸಿ ಜನಸಮೂದಾಯ ತಾಲ್ಲೂಕ್, ಜಿಲ್ಲೆ ಪ್ರಾಂತ, ದೇಶ ಇತ್ಯಾದಿ.

## ಸಮುದಾಯದ ತಳಹದಿ ಅಥವಾ ಪ್ರಮುಖ ಮೂಲಾಂಶಗಳು
(Basic or he main elements of community)

ಸ್ಥಾನೀಯತೆ ಅಥವಾ ನಿಶ್ಚಿತ ಪ್ರದೇಶ ಮತ್ತು ಸಾಮುದಾಯಿಕ ಭಾವನೆ ಇವು ಸಮುದಾಯದ ಮುಖ್ಯ ತಳಹದಿಯಾಗಿವೆ.

### 1. ಸ್ಥಾನೀಯತೆ ಅಥವಾ ನಿಶ್ಚಿತ ಭೂಪ್ರದೇಶ (Locality)

ಸಮುದಾಯವು ಒಂದು ಸ್ಥಾನೀಯ ಸಮೂಹವಾಗಿದೆ. ಸಮುದಾಯದ ಕಲ್ಪನೆಯು ಯಾವಾಗಲೂ ನಿಶ್ಚಿತ ಭೂಪ್ರದೇಶವನ್ನು ಅವಲಂಬಿಸಿರುತ್ತದೆ. ನಿರ್ದಿಷ್ಟ ಸ್ಥಳವು ಸಮುದಾಯದ ಭೌತಿಕ ಆಧಾರವಾಗಿದೆ. (physical basis) ಅಲೆಮಾರಿಗಳಾಗಿರುವ ಜಿಪ್ಸಿ ಜನಾಂಗದವರೂ ಕೂಡಾ ಆಗಾಗ್ಗೆ ಬದಲಾಗುತ್ತಿದ್ದರೂ ಒಂದು ಗೊತ್ತಾದ ನೆಲೆಯನ್ನು ಹೊಂದಿರುವ ಒಂದು ನಿಶ್ಚಿತ ಪ್ರದೇಶದಲ್ಲಿ ಶಾಶ್ವತವಾಗಿ ನೆಲೆ ನಿಲ್ಲಲ್ಲು ಆರಂಭಿಸಿದ ಮೇಲೆಯೇ ಒಂದು ಸಮೂಹವು ಸಮುದಾಯ ಎನ್ನಿಸಿಕೊಳ್ಳುವುದು. ಒಂದೆಡೆ ನೆಲೆಸುವುದರಿಂದ ಜನರು ತಮ್ಮೊಳಗೆ ನಿರಂತರ ಸಂಪರ್ಕ ಸಂಬಂಧಗಳನ್ನು ಹೊಂದಿರಲು ಸಾಧ್ಯ. ಈ ಶಾಶ್ವತ ನೆಲೆಯು ಜನರಿಗೆ ರಕ್ಷಣೆ ಮತ್ತು ಭದ್ರತೆಯನ್ನು ಒದಗಿಸುವುದು. ತಮ್ಮ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲೂ ಅದು ಸಹಕಾರಿಯಾಗಿದೆ. ಈ ಭೌತಿಕ ನೆಲೆಯು ಜನರ ಸಾಮಾಜಿಕ ಜೀವನದ ಮೇಲೆ, ಅವರ ಕುಟುಂಬ, ಮತ-ಧರ್ಮ, ನಂಬಿಕೆ-ಶ್ರದ್ಧೆ, ಆಹಾರ-ವಿಹಾರ, ಆಚಾರ-ವಿಚಾರ ವ್ಯವಹಾರ ಇವುಗಳ ಮೇಲೆ ಗಣನೀಯ ಪ್ರಭಾವವನ್ನು ಬೀರುತ್ತದೆ.

ಆಧುನಿಕ ಜಗತ್ತಿನಲ್ಲಿ ಸಾರಿಗೆ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನದ ಸಾಧನಗಳು ಅತಿಯಾಗಿ ಹೆಚ್ಚಿದ್ದರಿಂದ ಸಮುದಾಯದ ಭೌತಿಕ ನೆಲೆಯ ಪರಿಧಿಯೂ ವಿಸ್ತಾರವಾಗಿದೆ. ಅದನ್ನು ಸಮುದಾಯ ವಸತಿ ಸ್ಥಾನಗಳ ಸಂಬಂಧ ಕಡಿದಿಲ್ಲ, ಸಮುದಾಯದ ಈ ಭೌತಿಕ ನೆಲೆಗೆ ಸಂಬಂಧಿಸಿದಂತೆ ಸತ್ವಯುಕ್ತ ಭೂಸಾರ, ಖನಿಜಗಳು, ಅರಣ್ಯ, ಜಲ ಮತ್ತು ಮತ್ಸ್ಯ ಸಂಪತ್ತು ಸಸ್ಯ ಸಂಪತ್ತು ಹವಾಮಾನ ಮುಂತಾದ ಅನೇಕ ಭೌತಿಕಾಂಶಗಳು ಸಮುದಾಯದ ಒಟ್ಟು ಜೀವನವನ್ನು ಅನೇಕ ರೀತಿಯಲ್ಲಿ ಪ್ರಭಾವೀಗೊಳಿಸುತ್ತವೆ. ಇವುಗಳಿಗೂ ಸಮುದಾಯದ ಆರ್ಥಿಕ ಚಟುವಟಿಕೆಗಳಿಗೂ ನೇರ ಸಂಬಧವಿದೆ.

### 2. ಸಾಮುದಾಯಿಕ ಭಾವನೆ (Community Sentiment)

ಸ್ಥಾನೀಯತೆಯು ಒಂದು ಅವಶ್ಯವಾದ ಅಂಶವಾಗಿದ್ದರೂ

✍ ಡಾ. ಎನ್.ಬಿ. ಕೊಂಗವಾಡ ಪ್ರಾಚಾರ್ಯರು, ಸನಾ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ.

ಅದೊಂದೇ ಸಮುದಾಯವನ್ನು ನಿರ್ಮಿಸಲಾರದು. ನಿರ್ದಿಷ್ಟ ಜಾಗದಲ್ಲಿ ವಾಸಿಸುವ ಜನರು ನಾವು–ನಮ್ಮವರು (we-feeling) ಅಥವಾ ನಾವು ಪರಸ್ಪರ ಒಂದು ಗೂಡಿದವರು ಎಂಬ ಭಾವನೆಗಳನ್ನು ಹೊಂದಿಲ್ಲದೇ ಹೋದಲ್ಲಿ ಸಮುದಾಯ ನಿರ್ಮಾಣವಾಗದು. ''ಸಾಮುದಾಯಿಕ ಭಾವನೆ'' ಯಿರುವ ಸಮೂಹ ಮಾತ್ರವೇ 'ಸಮುದಾಯ' ಎನ್ನಿಸಿಕೊಳ್ಳುವುದು. ಸಮುದಾಯವು ಸುಖ–ದುಃಖಗಳಲ್ಲಿ ಪರಸ್ಪರ ಭಾಗಿಯಾಗಿರುವ ವ್ಯಕ್ತಿಗಳ ಸಮೂಹ, ಅವರಲ್ಲಿ ಸಾಮೂಹಿಕ ಐಕ್ಯದ ಭಾವನೆ ಇರುತ್ತದೆ. ಮಾನಸಿಕ ಏಕರೂಪತೆ ವ್ಯಕ್ತಿಗಳಲ್ಲಿ ನಿಕಟ ಸಂಬಂಧವನ್ನೇರ್ಪಡಿಸುತ್ತದೆ. ಏಕತೆಯ ಅನುಭವವಿಲ್ಲದೆ ಪರಸ್ಪರ ಆತ್ಮೀಯತೆಯ ಭಾವನೆ ಹುಟ್ಟುವುದಿಲ್ಲ, ಆತ್ಮೀಯತೆಯ ಭಾವನೆಯಿಲ್ಲದೆ ಸಾಮೂದಾಯಿಕ ಭಾವನೆಯಿರಲು ಸಾಧ್ಯವಿಲ್ಲ.

ಸಾಮುದಾಯಿಕ ಭಾವನೆ ಸದಾ ಜಾಗೃತವಾಗಿರಬೇಕಾದರೆ ಜನರಲ್ಲಿ ಸಮಾನ ಆಸಕ್ತಿಗಳು ದೃಷ್ಟಿಕೋನ ಜೀವನ ವಿಧಾನವೂ ಇರಬೇಕಾಗುವುದು. ಈ ಸಾಮ್ಯ ಅಥವಾ ಸಾದೃಶ್ಯವಿಲ್ಲದೇ ಇದ್ದಲ್ಲಿ ಸಮುದಾಯದ ಭಾವನೆಗೆ ಯಾವುದೇ ಅರ್ಥವಿರಲಾರದು. ಒಂದೇ ಸ್ಥಳದಲ್ಲಿ ಶಾಶ್ವತವಾಗಿ ಸಿಲುಕಿಕೊಳ್ಳುತ್ತಾರೆ. ಈ ಭಾವನಾತ್ಮಕತೆ ಕ್ಷಣಿಕವಾಗಿರದೆ, ಶಾಶ್ವತವಾಗಿರುವುದು. ಅದೇ ಅವರಿಗೆ ಮಾನಸಿಕ ಶಾಂತಿ ಸಮಾಧಾನವನ್ನು ಸ್ವಲ್ಪಮಟ್ಟಿಗೆ ನೀಡುವುದು ಎಂದರೂ ಉತ್ಪ್ರೇಕ್ಷೆಯಲ್ಲ. ತನ್ನನ್ನು ತಾನು ತನ್ನ ಸಮುದಾಯದೊಂದಿಗೆ ಭಾವನಾತ್ಮಕವಾಗಿ ಬೆಸೆದುಕೊಂಡ ವ್ಯಕ್ತಿಯೋರ್ವ ಇದ್ದಕ್ಕಿದ್ದಂತೆಯೇ ಈ ಎಲ್ಲಾ ಬಂಧನಗಳನ್ನು ಕಿತ್ತೊಗೆದು ಇನ್ನೊಂದು ಪರಿಸರದಲ್ಲಿ ನೆಲೆಸಬೇಕಾದ ಪರಿಸ್ಥಿತಿಯೊದಗಿದಾಗ, ನೀರಿನಿಂದ ಹೊರತೆಗೆದ ಮೀನಿನಂತೆ ಚಡಪಡಿಸುವುದು ಇಂದಿನ ಆಧುನಿಕ, ಔದ್ಯೋಗಿಕ, ಸಮಾಜದಲ್ಲಿ ತೀರ ವಿಶೇಷವೆಂದೇನೂ ಎನಿಸುವುದಿಲ್ಲ. ಇಂತಹ ಸ್ಥಿತಿಯಲ್ಲಿ ಭಾವನಾಜೀವಿಗಳಾದ ಅನೇಕರು ತಮ್ಮ ಮಾನಸಿಕ ಸಮತೋಲನವನ್ನೇ ಕಳೆದುಕೊಳ್ಳುವುದುಂಟು. ಈ ಸ್ಥಿತಿಯನ್ನು ಸಮಾಜಶಾಸ್ತ್ರಜ್ಞರು 'ಸಾಮುದಾಯಿಕ ಭಾವನಾಭಂಗ' (Loss of community) 'ಅನಾಥ ಪ್ರಜ್ಞೆ' (alienation) ಎಂದು ಮುಂತಾಗಿ ವಿವರಿಸಿರುವುದುಂಟು. ಆದಾಗ್ಯೂ ಸಾಮುದಾಯಿಕ ಭಾವನೆಯು ಒಂದು ಮೂಲಪ್ರವೃತ್ತಿಯಲ್ಲ. ಅದನ್ನು ಪ್ರತಿಯೊಬ್ಬನೂ ಬೆಳೆಸಿಕೊಳ್ಳಬೇಕಾಗುವುದು.

## ಸಮುದಾಯದ ಇತರ ಮುಖ್ಯಾಂಶಗಳು

**1. ಸ್ಥಿರತೆ** (Stability) : ಸಮುದಾಯವು ಜನಮಂದೆ ಅಥವಾ ಶ್ರೋತೃವರ್ಗದ ಸಮೂಹದಂತೆ ಕ್ಷಣಿಕವಾದುದಲ್ಲ; ಆದರೆ ಸ್ಥಿರವಾದುದು. ಜನರು ಒಂದೆಡೆ ನೆಲೆನಿಂತು ವಾಸಿಸಲು ಆರಂಭಿಸಿದ ಮೇಲೆ ಅದನ್ನು ಅಷ್ಟು ಬೇಗನೆ ಬಿಟ್ಟು ಇನ್ನೊಂದೆಡೆಗೆ ಪಯಣಿಸಲಾರರು. ಅದರಲ್ಲೂ (ಸ್ಥಿರಾಸ್ತಿಯನ್ನು ಮನೆ ಮಾರು ಜಮೀನು ವ್ಯವಹಾರ) ಮಾಡಿಕೊಂಡ ಮೇಲಂತೂ ಆ ಜಾಗವನ್ನು ಬಿಟ್ಟು ಹೊರಡುವುದು ದೂರವೇ ಉಳಿಯಿತು.

**2. ಸ್ವಾಭಾವಿಕತೆ** (Naturalness) : ಸಮುದಾಯವು ಉದ್ದೇಶಪೂರ್ವಕ ಪ್ರಯತ್ನದಿಂದ ಮತ್ತು ಬುದ್ಧಿ ಪೂರ್ವಕ ಸೃಷ್ಟಿಯಾದುದಲ್ಲ, ಸಾಮಾನ್ಯವಾಗಿ ಅದು ಸಹಜವಾಗಿ ತನ್ನಿಂದ ತಾನೆ ವಿಕಾಸಹೊಂದಿ ಅಸ್ತಿತ್ವಕ್ಕೆ ಬರುವಂತಹದು. ಜನರು ಸಮುದಾಯದ ಸದಸ್ಯರಾಗುವುದೂ ಕೂಡ ಹುಟ್ಟಿನಿಂದಲೇ. ಆದ್ದರಿಂದ ಅದರ ಸದಸ್ಯತ್ವವು ಅನೈಚ್ಛಿಕವಾದುದು ಸಮುದಾಯವು ಸ್ವತಃ ಪ್ರವರ್ತಿತವಾದರೂ ಆಕಸ್ಮಿಕವಾದುದಾಗಲೀ, ಕೃತ್ರಿಮವಾದುದಾಗಲೀ ಅಲ್ಲ, ಇದ್ದಕ್ಕಿದ್ದಂತೆ ದಿಢೀರನೆ ಸಮುದಾಯವೆಂದಿಗೂ ಉದಯಿಸದು. ಅದು ಕ್ರಮೇಣವಾಗಿ ಮಂದಗತಿಯಿಂದ ವಿಕಾಸ ಹೊಂದಿರುವುದು.

**3. ಸಾಮಾಜಿಕ ನಿಯಂತ್ರಣ** (Social control) : ಪ್ರತಿಯೊಂದು ಸಮುದಾಯವು ಕಾಲಾನುಕ್ರಮದಲ್ಲಿ ತನ್ನದೇ ಆದ ರೂಢಿ ಸಂಪ್ರದಾಯಗಳು, ಲೋಕಾಚಾರ ಮತ್ತು ನೈತಿಕ ನಿಯಮಗಳು, ಆಚರಣೆ, ನಂಬುಗೆಗಳು ಇವುಗಳನ್ನು ಬೆಳೆಸಿಕೊಂಡು ತನ್ನ ಸದಸ್ಯರುಗಳ ನಡತೆಯನ್ನು ನಿಯಂತ್ರಿಸುವುದು.

**4. ಗಾತ್ರ** (Size) : ಸಮುದಾಯವು ಗಾತ್ರದಲ್ಲಿ ಚಿಕ್ಕದಾಗಿರಬಹುದು. ಇಲ್ಲವೇ ದೊಡ್ಡದಾಗಿರಬಹುದು. ಹಳ್ಳಿ ಪಟ್ಟಣಗಳಂತಹ ಚಿಕ್ಕ ಸಮುದಾಯಗಳಿರುವಂತೆ ನಗರ, ರಾಷ್ಟ್ರಗಳಂತಹ ಸಮುದಾಯಗಳೂ ಇವೆ.

**5. ವಿಶಿಷ್ಟ ಅಭಿದಾನ ಅಥವಾ ಹೆಸರು** (Specific Name) : ಪ್ರತಿಯೊಂದು ಸಮುದಾಯವೂ, ಅದು ಹಳ್ಳಿಯಾಗಿರಲಿ, ನಗರವಾಗಿರಲಿ, ದೇಶವಾಗಿರಲಿ ತನ್ನದೇ ಆದ ಹೆಸರನ್ನು ಹೊಂದಿದ್ದು ಅದರ ಮೂಲಕವೇ ಗುರುತಿಸಲ್ಪಡುತ್ತದೆ. ಒಟ್ಟಿನಲ್ಲಿ ಸಮುದಾಯವು ನಿಂತ ನೀರಾಗಿರದೆ ನಿರಂತರ ಗತಿಶೀಲತೆಯನ್ನು ಹೊಂದಿದೆ.

## ಆಕರ ಗ್ರಂಥಗಳು


- ಶಂಕರರಾವ್ ಚ.ನ. (2003) ಸಮಾಜಶಾಸ್ತ್ರದ ಪ್ರಾಥಮಿಕ ತತ್ವಗಳು ಮತ್ತು ಸಾಮಾಜಿಕ ಚಿಂತನೆ, ಜೈ ಭಾರತ ಪ್ರಕಾಶನ, ಮಂಗಳೂರು.
- ಕೊಂಗವಾಡ ಎನ್. ಬಿ. (2008) ಶಿಕ್ಷಣದ ತಾತ್ವಿಕ ಮತ್ತು ಸಾಮಾಜಿಕ ಬುನಾದಿಗಳು, ವಿದ್ಯಾನಿಧಿ ಪ್ರಕಾಶನ, ಗದಗ.
- ಜೋಗುರ ಎಸ್. ಬಿ. (2005) ಸಮಾಜಶಾಸ್ತ್ರ ಒಂದು ವ್ಯವಸ್ಥಿತ ಅಧ್ಯಯನ, ವಿದ್ಯಾನಿಧಿ ಪ್ರಕಾಶನ, ಗದಗ.


■■

# ಗುಣಾತ್ಮಕ ಶಾಲಾ ಶಿಕ್ಷಣ
# (QUALITY OF SCHOOL EDUCATION)

ವಿವಿಧ ಕ್ಷೇತ್ರಗಳ ಅಭಿವೃದ್ಧಿಯ ತಳಹದಿಯೇ ಶಿಕ್ಷಣ. ನಮ್ಮ ದೇಶ 1947 ರಲ್ಲಿ ಸ್ವತಂತ್ರ್ಯ ದೇಶವಾದರೂ ನಾವು ಶಾಲಾ ಶಿಕ್ಷಣದಲ್ಲಿ ಗುಣಮಟ್ಟ ಸಾಧಿಸಿರುವುದಿರಲಿ ಇದ್ದ ಮೌಲ್ಯಗಳನ್ನು ಉಳಿಸಿಕೊಳ್ಳದೇ ದಿನನಿತ್ಯ ಶಿಕ್ಷಣದಲ್ಲಿ ಮೌಲ್ಯಗಳು ಕಳಚಿ ಹೋಗುತ್ತಿರುವುದು ಅವಮಾನದ ಸಂಗತಿಯೇ ಆಗಿದೆ. ಇಲ್ಲಿಗೆ 64 ವರ್ಷಗಳು ಕಳೆದರೂ ನಮ್ಮ ದೇಶದ ಸಾಕ್ಷರತೆ ಶೇ.75 ಕ್ಕೆ ದಾಟಿ ನಿಂತಹ ದುರ್ಬಲ ಸ್ಥಿತಿಯಲ್ಲಿ ಎಷ್ಟು ಶೈಕ್ಷಣಿಕ ಯೋಜನೆಗಳು ಸಂಸ್ಥೆಗಳನ್ನು ಸ್ಥಾಪಿಸಿ ಮೌಲ್ಯರಹಿತ ಬೂಟಾಟಿಕೆಯ ನಾಟಕವಾಡಿ ಕೇವಲ ಹೆಸರಿಗೆ ಮಾತ್ರ ಅಭಿವೃದ್ಧಿ ಯೋಜನೆಗಳೆಂದು ನಮ್ಮ ಜನರ ಕಣ್ಣೊರೆಸುವ ಸ್ಥಿತಿಗೆ ಬಂದಿರುವುದು ಶೋಚನೀಯ ಸಂಗತಿ. ಶಾಲಾ ಶಿಕ್ಷಣದಲ್ಲಿ ಗುಣಮಟ್ಟ ಸಾಧಿಸುತ್ತೇವೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಡಿಯಲ್ಲಿ **NCERT, DSERT, UGC, DIET** ಮುಂತಾದ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ರಾಷ್ಟ್ರದ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು 1986 ರಲ್ಲಿ ರಾಷ್ಟ್ರಿಯ ಶಿಕ್ಷಣ ನೀತಿ ಜಾರಿಗೆ ಬಂದ ನಂತರ 1991–92 ರಲ್ಲಿ ಇದನ್ನು ಜಾರಿಗೆ ತಂದು ಇದು ನಿರ್ದಿಷ್ಟವಾಗಿ ಒಂದು ಜಿಲ್ಲೆಯ ಸೇವಾವಧಿ ತರಬೇತಿ ನೀಡಿ ಈ ಹಂತದ ಶಿಕ್ಷಣದ ಗುಣಮಟ್ಟ ಸುಧಾರಿಸಲು ಜಾರಿಗೆ ತರಲಾಯಿತು.

ಪ್ರಸಕ್ತ ದಿನಮಾನಗಳಲ್ಲಿ ವಿದ್ಯಾರ್ಥಿಗಳ ಮತ್ತು ಪಾಲಕರ ಮನೋಭಾವನೆಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ ಅವರಿಗೆಲ್ಲ ಗುಣಮಟ್ಟ ಶಿಕ್ಷಣ ಬೇಕಾಗಿರುವುದು ಸ್ಪಷ್ಟವಾಗುತ್ತದೆ. ಈ ದಿಶೆಯಲ್ಲಿ ಪರಿಣಾಮಕಾರಿ ಬೋಧನೆಯು ಶಿಕಣದ ಗುಣಮಟ್ಟವನ್ನು ಹೆಚ್ಚಿಸಬಲ್ಲ ಏಕೈಕ ಸಾಧನ. ಅಂತೆಯೇ ಬಲ್ಲರು "ಬೋಧನೆ ರಹಿತ ಶಿಕ್ಷಣ; ಬರಿ ವೇದನೆಯ ಕ್ಷಣ" ಎಂದು ಉದ್ಗರಿಸಿದ್ದಾರೆ. ಆದ ಕಾರಣ ಬೋಧನಾ ಗುಣಮಟ್ಟವನ್ನು ಹೆಚ್ಚಿಸಿ, ವಿದ್ಯಾರ್ಥಿ ಮತ್ತು ಪಾಲಕರ ಮನೋಭಾವನೆಗೆ ಸ್ಪಂದಿಸುವಂತಹ ಗುಣಾತ್ಮಕ ಶಾಲಾ ಶಿಕ್ಷಣವನ್ನು ಒದಗಿಸಿಕೊಡುವುದು ಅತ್ಯವಶ್ಯಕವಾಗಿದೆ.

### ಗುಣಮಟ್ಟದ ಕಲ್ಪನೆ (Concept of Quality)

ಗುಣಮಟ್ಟವು ಸಾಂದರ್ಭಿಕವಾಗಿರುತ್ತದೆ ಅಥವಾ ಪ್ರಾಸಂಗಿಕವಾಗಿರುತ್ತದೆ. ಗುಣಮಟ್ಟದ ವ್ಯಾಪಕವಾದ ವ್ಯಾಖ್ಯೆಯನ್ನು ಕೊಡುವುದು ಅಷ್ಟೊಂದು ಸುಲಭವಲ್ಲ. ಒಂದು ಪ್ರತ್ಯೇಕವಾದ ಶಾಲೆಯ ಉತ್ತಮ ಶಿಕ್ಷಕರು ಕೇವಲ ಇತರೆ ಶಾಲೆಗಳಲ್ಲಿ ಕಳಪೆ ಶಿಕ್ಷಕರಾಗಬಹುದು. ಏನೇ ಇದ್ದರೂ ಗುಣಮಟ್ಟಕ್ಕಾಗಿ ಶೋಧನೆಯು ಸಂಪೂರ್ಣವಾಗಿ ನಾಗರೀಕತೆಯ ಪ್ರಾಮುಖ್ಯವಾದ ಚಿಂತನೆಯಾಗಿದೆ. ಸಾಮಾನ್ಯವಾಗಿ ಗುಣಮಟ್ಟವು ಉತ್ಕೃಷ್ಠತೆ, ಪರಿಪೂರ್ಣತೆ, ಶ್ರೇಷ್ಠತೆ, ಮೌಲ್ಯಾಧಾರಿತ, ಸಮರ್ಥತೆ, ಸಂಗತವಾಗಿರುವಿಕೆ, ಸಾಮರಸ್ಯತೆ ಮತ್ತು ಪ್ರಸಂಗೋಜಿತತೆ ಮತ್ತು ಪ್ರಸಕ್ತತೆಗಳ ರೀತಿಯಲ್ಲಿ ವ್ಯಾಖ್ಯಾನಿಸಬಹುದು.

ಗುಣಮಟ್ಟವು ಉತ್ಕೃಷ್ಠತೆ ಅಥವಾ ಉತ್ತಮತೆಯ ಅಂಶವನ್ನು ವ್ಯಕ್ತಪಡಿಸುತ್ತದೆ. ಅದು ಉತ್ಪಾದನೆಯ, ಪ್ರಕ್ರಿಯೆಯ ಗುಣಲಕ್ಷಣಗಳನ್ನು ಮತ್ತು ನಡತೆಗಳನ್ನು ಅಥವಾ ಸೇವೆಯನ್ನು ವ್ಯಕ್ತ ಪಡಿಸಲಾದ ಅಥವಾ ಅಳವಡಿಸಲಾದ ಅಗತ್ಯತೆಗಳನ್ನು ಸಂತೃಪ್ತಗೊಳಿಸುವುದಕ್ಕೆ ಘಟಕಗಳುಳ್ಳ ಸಾಮರ್ಥ್ಯತೆಯನ್ನು ಸಹಿಸುವುದರ ಪರಿಪೂರ್ಣತೆಯಾಗಿದೆ. ಶೈಕ್ಷಣಿಕ ಗುಣಮಟ್ಟವು ಸಂಕೀರ್ಣ ವಿಷಯಾಂಶದಂತೆ ತೋರುತ್ತದೆ. ಅಂತೆಯೇ ಶಿಕ್ಷಣವು ಮಾನವ ಅಥವಾ ವ್ಯಕ್ತಿಗಳೊಂದಿಗೆ ಸಂಬಂಧಿಸಿದುದಾಗಿದೆ. ನಾವು ವ್ಯಕ್ತಿಯನ್ನು ಒಂದು ಉತ್ಪನ್ನದಂತೆ ವರ್ಣಿಸಿದರೆ ಒಂದೇ ರೀತಿಯಲ್ಲಿ ಅಥವಾ ಮಾರ್ಗದಲ್ಲಿ ಕಲಿಯುವವನ ಅಥವಾ ಶಿಕ್ಷಕರ ಎಲ್ಲ ಲಕ್ಷಣಗಳನ್ನು, ವೈಶಿಷ್ಟ್ಯತೆಗಳನ್ನು ಈ ವರ್ಣನೆಯು ಆವರಣಗೊಳಿಸಲು ಸಾಧ್ಯವಿಲ್ಲ. ಅಂತೆಯೇ ಒಬ್ಬರು ದಿನಸಿ, ಉಪಯುಕ್ತ ವಸ್ತುಗಳನ್ನು ವರ್ಣಿಸುತ್ತಾರೆ. ಆ ಕಾರಣದಿಂದ ಗುಣಮಟ್ಟದ ವ್ಯಾಖ್ಯೆಯು ವ್ಯಕ್ತಿಯ, ಸಂಸ್ಥೆಯ, ಶೈಕ್ಷಣಿಕ ಸನ್ನಿವೇಶಗಳ, ಸಾಮಾಜಿಕ ಮತ್ತು ರಾಷ್ಟ್ರೀಯ ಸನ್ನಿವೇಶಗಳ ಮೇಲೆ ಅವಲಂಬಿಸಿ ಬದಲಾಗುತ್ತದೆ.

'ಲಿಂಗ ಮತ್ತು ಸಾಮಾಜಿಕ ಗುಂಪುಗಳ ಭೇದವಿಲ್ಲದೆ ಶಾಲೆಯ ಎಲ್ಲಾ ಮಕ್ಕಳು, ತರಗತಿ ಹಾಗೂ ವಿಷಯವಾರು ನಿರೀಕ್ಷಿತ ಸಾಮರ್ಥ್ಯಗಳನ್ನು ಕಾಲಕಾಲಕ್ಕೆ ಪಡೆದುಕೊಂಡು ಮುಂದಿನ ತರಗತಿಗಳಿಗೆ ಪ್ರಗತಿ ಹೊಂದುವುದು ಹಾಗೂ ವಯಸ್ಸಿಗೆ ತಕ್ಕಂತೆ ಜೀವನ ಕೌಶಲ್ಯಗಳನ್ನು ಪಡೆದು ತಮ್ಮ ಸಂಪೂರ್ಣ ವ್ಯಕ್ತಿತ್ವ ವಿಕಸನಗೊಳಿಸಿಕೊಳ್ಳುವುದೇ ಗುಣಮಟ್ಟದ ಶಿಕ್ಷಣ'.

### ಗುಣಾತ್ಮಕತೆಯ ಚಿಂತನೆಯ ಕಾರಕಾಂಶಗಳು (Quality Concern Factors)

ಶಾಲಾ ಶಿಕ್ಷಣ ಕಾರ್ಯಕ್ರಮ ಶೈಕ್ಷಣಿಕ ವ್ಯವಸ್ಥೆಯ ಒಂದು ಸಮಗ್ರ ಭಾಗವಾಗಿದ್ದು, ಯಾವುದು ನೇರವಾಗಿ ಸಮಾಜದೊಂದಿಗೆ ಜೋಡಣೆಯನ್ನು ಹೊಂದಿದೆ. ಆಧುನಿಕ ಸಮಾಜದಲ್ಲಿ ಅದರ ವ್ಯಾಪ್ತಿ ಮತ್ತು ಉದ್ದೇಶಗಳು ವಿಶಾಲಗೊಳ್ಳಬಹುದಾಗಿದೆ. ಶಾಲಾ ಶಿಕ್ಷಣ ಗುಣಮಟ್ಟದ ಚಿಂತನೆಗಳ ಪ್ರಾಮುಖ್ಯ ಕಾರಕಾಂಶಗಳು ಆಗಮನ, ಪ್ರಕ್ರಿಯೆಗಳು(ಸಂಸ್ಕರಣೆ) ಮತ್ತು ಉತ್ಪನ್ನಗಳಾಗಿವೆ.

### ಆಗಮನ ಕಾರಕಾಂಶಗಳು (Input Factors)

ಇವು ಎಲ್ಲ ಭೌತಿಕ ಮೂಲಭೂತ ಸೌಕರ್ಯಗಳನ್ನು, ಕಟ್ಟಡ ಉಪಕರಣಗಳು, ಗ್ರಂಥಾಲಯ, ಪುಸ್ತಕಗಳು, ಪ್ರಯೋಗಾಲಯ, ಆಟದ ಮೈದಾನ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಅದೂ ಸಹ ವಿದ್ಯಾರ್ಥಿಗಳ ಇಂತಹ ಪ್ರವೇಶ ವರ್ತನೆಗಳನ್ನು ಅವರ ಕೌಟುಂಬಿಕ ಹಿನ್ನಲೆ, ಸಾಮಾಜಿಕ, ಆರ್ಥಿಕ ಸ್ಥಾನಮಾನ, ಶೈಕ್ಷಣಿಕ ಸಾಧನೆ, ಅವರ ಅಭಿರುಚಿ, ಬೇಡಿಕೆಗಳು ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

### ಪ್ರಕ್ರಿಯೆ (ಸಂಸ್ಕರಣಾ) ಕಾರಕಾಂಶಗಳು (Process Factors)

ಶಾಲಾ ಶಿಕ್ಷಣ ಕಾರ್ಯಕ್ರಮವು ಯಶಸ್ವಿಯುಳ್ಳದ್ದಾಗಿದೆ ಎಂದು ಹೇಳಬೇಕಾದರೆ ಅದರ ಉತ್ಪನ್ನಗಳು ವಿದ್ಯಾರ್ಥಿಗಳೊಂದಿಗೆ

✍ ಸಿ. ವ್ಹಿ. **ಹಿರೇಮಠ** ಪ್ರಾಂಶುಪಾಲರು, ಸಿ.ಟಿ.ಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಚಿಕ್ಕೋಡಿ.

ಗರಿಷ್ಠಕ್ಕೊಳಪಟ್ಟಿರಬೇಕಾಗುತ್ತದೆ. ಅದು ಅವಶ್ಯಕ ಕೌಶಲ್ಯಗಳ ರೀತಿಯಲ್ಲಿ ಮೌಲ್ಯಗಳು & ಮನೋವೃತ್ತಿಗಳ ರೀತಿಯಲ್ಲಿರಬೇಕು. ಈ ಉತ್ಪನ್ನಗಳು ವಿಶಾಲವಾಗಿ ಎಷ್ಟು ಪ್ರಯೋಜನಿಯವಾಗಿ ತರಬೇತಿ ಸಂಸ್ಕರಣೆ ಸಂಘಟನೆಗೊಂಡಿದೆ ಎಂಬುದನ್ನು ಅವಲಂಬಿಸಿದೆ. ಪ್ರಕ್ರಿಯೆಯು ಒಂದು ಪ್ರತ್ಯೇಕ ಕ್ರಿಯೆಯ ವಿಧಿಯಾಗಿದ್ದು ಇಚ್ಛಿಸಿದ ಫಲಿತಾಂಶಗಳನ್ನು ಸಾಧಿಸುವುದಕ್ಕೆ ಉದ್ದೇಶಿಸುತ್ತದೆ. ಅದು ಸಂರಕ್ಷಿಸಿದ ವಾತಾವರಣವಾಗಿದ್ದು, ಹಾಗೂ ಅದು ಸ್ವಾಭಾವಿಕ ಅಥವಾ ಮಾನವ ನಿರ್ಮಿತವಾಗಿರಬಹುದು. ಆದರೆ ಅದು ನಿರಂತರವಾದ ಚಟುವಟಿಕೆಗಳು ಅಥವಾ ಕಾರ್ಯವಾಗಿರುತ್ತದೆ. ಉತ್ತಮ ಗುಣಮಟ್ಟದ ಆಗಮನಗಳು ದುರ್ಬಲ ಪ್ರಕ್ರಿಯೆಗಳೊಂದಿಗೆ ಜೋಡಿಸಲ್ಪಟ್ಟಿದ್ದರೆ ಇಚ್ಛಿಸಿದ ಉತ್ಪನ್ನಗಳಿಗೆ ನಿರ್ದೇಶಿಸಲಿಕ್ಕಿಲ್ಲ. ಉತ್ತಮ ಗುಣಮಟ್ಟದ ಪ್ರಕ್ರಿಯೆಗಳು ಕನಿಷ್ಠ ಇಚ್ಛಿಸಿದ ಆಗಮನಗಳೊಂದಿಗೆ ಜೋಡಿಸಲ್ಪಟ್ಟಿದ್ದರೆ ಇಚ್ಛಿಸಿದ ಉತ್ಪನ್ನಗಳಿಗೆ ನಿರ್ದೇಶಿಸಬಹುದಾಗಿದೆ. ಅದು ಶಾಲಾ ಶಿಕ್ಷಣದ ಯುಕ್ತಿಗಳನ್ನು ಮತ್ತು ಸಂಸ್ಕರಣೆಗಳನ್ನು ಒಳಗೊಂಡಿರುತ್ತದೆ.

### ಉತ್ಪನ್ನಗಳ ಕಾರಕಾಂಶಗಳು (Product Factors):

ಉತ್ಪನ್ನ ಕಾರಕಾಂಶಗಳು ನೀಡಲ್ಪಟ್ಟ ವ್ಯಾಸಂಗದ ಶಾಲಾ ಶಿಕ್ಷಣದ ಕೊನೆಗೆ ಬಯಸಲ್ಪಟ್ಟ ಉತ್ಪನ್ನ ಅಥವಾ ಉತ್ಪಾದನೆಯಾಗಿದೆ. ಪ್ರತ್ಯೇಕ ವ್ಯಾಸಂಗದ ಶಾಲಾ ಶಿಕ್ಷಣದ ಉದ್ದೇಶಗಳನ್ನು ಸಾಫಲ್ಯಗೊಳಿಸಲಾಗಿದೆಯೇ ಅಥವಾ ಇಲ್ಲವೋ ಎಂಬುದನ್ನು ಇದರಿಂದ ಕಂಡುಕೊಳ್ಳಬಹುದು. ಅವುಗಳ ವಿದ್ಯಾರ್ಥಿಗಳ ಶೈಕ್ಷಣಿಕ ಸಾಫಲ್ಯತೆ, ಬೋಧನಾ ವೃತ್ತಿಗೆ ಅರ್ಪಣೆ, ಕಲಿಕೆಯಲ್ಲಿ ಕಾರ್ಯ ಸಮರ್ಥತೆ, ವ್ಯಕ್ತಿತ್ವದ ಅಭೀವೃದ್ಧಿ ಇತ್ಯಾದಿ.

## ಗುಣಾತ್ಮಕ ಶಾಲಾ ಶಿಕ್ಷಣದ ಸೂಚಕಗಳು

- ಸುಸಜ್ಜಿತ ಶಾಲಾ ಕಟ್ಟಡ ಮತ್ತು ಇತರೆ ಸೌಲಭ್ಯಗಳು.
- ಅರ್ಹ ಮತ್ತು ತರಬೇತಿ ಹೊಂದಿದ ಶಿಕ್ಷಕರು.
- ಶಿಕ್ಷಣ ಪ್ರೇಮಿ ಮತ್ತು ಪ್ರಾಮಾಣಿಕ ಆಡಳಿತ ಮಂಡಳಿ.
- ಕ್ರಿಯಾಶೀಲ ಮತ್ತು ಸಹೃದಯ ಎಸ್.ಡಿ.ಎಂ.ಸಿ.
- ಶಿಕ್ಷಕರ ಉತ್ತಮ ವಿಷಯ ಜ್ಞಾನ ಮತ್ತು ಬೋಧನಾ ಕೌಶಲ್ಯಗಳು.
- ಗುಣಾತ್ಮಕ ಕಲಿಕಾ ಸಮಯ.
- ಮಕ್ಕಳ ಕಲಿಕೆಯಲ್ಲಿ ತಂದೆ ತಾಯಂದಿರ ಸಕ್ರಿಯ ಭಾಗವಹಿಸುವಿಕೆ.
- ಚಟುವಟಿಕೆಯಿಂದ ಕೂಡಿದ ಬೋಧನಾ ಹಾಗೂ ಕಲಿಕಾ ಪ್ರಕ್ರಿಯೆ.
- ಪ್ರಾಯೋಗತೆಯಿಂದ ಕೂಡಿದ ವಿಜ್ಞಾನ ಬೋಧನೆ ಮತ್ತು ಕಲಿಕೆ.
- ಪ್ರಯೋಗಾಲಯದ ಸೌಲಭ್ಯ ಮತ್ತು ಸಮರ್ಪಕ ಬಳಕೆ.
- ಗ್ರಂಥಾಲಯದ ಸೌಲಭ್ಯ ಮತ್ತು ಸಮರ್ಪಕ ಬಳಕೆ.
- ಮಕ್ಕಳ ಕಲಿಕಾ ಸಾಮಗ್ರಿ ಲಭ್ಯತೆ.
- ಕ್ರೀಡೆ ಮತ್ತು ಮನೋರಂಜನೆಗೆ ಆದ್ಯತೆ.
- ಸಾಮಾಜಿಕ ನ್ಯಾಯ-ಸಮಾನತೆಗೆ ಆದ್ಯತೆ.
- ಲಿಂಗ ಸಂಬಂಧಿ ಆಯಾಮಕ್ಕೆ ಆದ್ಯತೆ.
- ಸುರಕ್ಷಿತ ಕುಡಿಯುವ ನೀರಿನ ಲಭ್ಯತೆ.
- ಬಾಲಕ ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯದ ಲಭ್ಯತೆ.
- ಪರಿಣಾಮಕಾರಿ ಮತ್ತು ಆಕರ್ಷಕ ಪಾಠೋಪಕರಣಗಳ ಬಳಕೆ.
- ಸೂಕ್ತ ಪೀಠೋಪಕರಣಗಳ ಲಭ್ಯತೆ.
- ಗಾಳಿ, ಬೆಳಕು, ಸಾಕಷ್ಟು ಸ್ಥಳಾವಕಾಶವಿರುವ ಕೊಠಡಿಗಳು.
- ಶೈಕ್ಷಣಿಕ ಚಟುವಟಿಕೆಯಲ್ಲಿ ಸ್ಥಳಿಯ ಸಂಪನ್ಮೂಲಗಳ ಬಳಕೆ.
- ಮಕ್ಕಳ ಹಕ್ಕುಗಳನ್ನು ಗೌರವಿಸುವುದು.
- ಮಕ್ಕಳ ಸ್ನೇಹಿ ಮತ್ತು ಆರೋಗ್ಯಕರ ವಾತಾವರಣ.
- ಸಮರ್ಪಕ ಶಿಕ್ಷಕ ಮತ್ತು ಮಕ್ಕಳ ಅನುಪಾತ.
- ವೈಯಕ್ತಿಕ ಮತ್ತು ಪರಿಸರದ ಶುಚಿತ್ವ.
- ನಿರಂತರ ಮೌಲ್ಯಮಾಪನ.
- ಶಿಕ್ಷಕರಿಗೆ ಸೇವಾವಧಿ ಕಾರ್ಯಕ್ರಮಗಳ ತರಬೇತಿ.
- ಸೂಕ್ತ ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳ ಸಂಘಟನೆ.
- ಗಣಕಯಂತ್ರ ಮತ್ತು ಅಂತರ್ಜಾಲದ ಸಮರ್ಪಕ ಬಳಕೆ.
- ಪೌಷ್ಠಿಕ ಆಹಾರದ ಲಭ್ಯತೆ.
- ಸಮನ್ವಯ ಶಿಕ್ಷಣಕ್ಕೆ ಅವಕಾಶ.
- ದಕ್ಷ ಮತ್ತು ಪ್ರಾಮಾಣಿಕ ಮೇಲ್ವಿಚಾರಣಾಧಿಕಾರಿಗಳಿಂದ ತಪಾಸಣೆ.

## ಗುಣಾತ್ಮಕ ಶಾಲಾ ಶಿಕ್ಷಣದ ನಿರ್ಧಾರಕ ಅಂಶಗಳು

- ಗುಣಮಟ್ಟದ ವಿಚಾರವಂತರು.
- ಗುಣಮಟ್ಟದ ಶಾಲಾ ನೀತಿಗಳು.
- ಗುಣಮಟ್ಟದ ಪಠ್ಯಕ್ರಮ ಸಂಕಲ್ಪಕರು.
- ಗುಣಮಟ್ಟದ ಪಠ್ಯಕ್ರಮ.
- ಗುಣಮಟ್ಟದ ವ್ಯವಹರಿಸುವಿಕೆ.
- ಗುಣಮಟ್ಟದ ಮೂಲಭೂತ ಸೌಲಭ್ಯಗಳು.
- ಗುಣಮಟ್ಟದ ಬೋಧನಾ-ಕಲಿಕಾ ಸಮಪನ್ಮೂಲಗಳು.
- ವಿದ್ಯಾರ್ಥಿ ಮತ್ತು ಸಿಬ್ಬಂದಿಗಳಿಗಾಗಿ ಗುಣಮಟ್ಟದ ಆಯ್ಕೆಯ ವಿಧಾನಗಳು.
- ಗುಣಮಟ್ಟದ ವ್ಯಕ್ತಿತ್ವದ ಬೆಳವಣಿಗೆ.
- ಗುಣಮಟ್ಟದ ಮೇಲುಸ್ತುವಾರಿ ವ್ಯವಸ್ಥೆ, ಕಾರ್ಯ ನಿರ್ವಹಣೆ, ಮೌಲ್ಯ ನಿರ್ಧಾರ ಮತ್ತು ವಿಶ್ವಸನೀಯತೆ.
- ಗುಣಮಟ್ಟದ ಪರಾಮರ್ಶನ ಸೇವೆಗಳು.
- ಗುಣಮಟ್ಟದ ಮಾರ್ಗದರ್ಶನ ಸೇವೆಗಳು.
- ಗುಣಮಟ್ಟದ ಸಮುದಾಯ ಜೋಡಣೆಗಳು ಮತ್ತು ಕಾರ್ಯಗಳು.
- ಗುಣಮಟ್ಟದ ನಿಯೋಜನ ಸೇವೆಗಳು.

- ಗುಣಮಟ್ಟದ ಸಂಸ್ಥೆಗಳೊಂದಿಗೆ ಸಂಪರ್ಕ.
- ಗುಣಮಟ್ಟದ ಸಹ–ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳು.
- ಗುಣಮಟ್ಟದ ಶಾಲಾ ಕಾರ್ಯಕ್ರಮಗಳು.
- ಗುಣಮಟ್ಟದ ಸೇವಾನಿರತ ತರಬೇತಿ ಕಾರ್ಯಕ್ರಮಗಳು.
- ಗುಣಮಟ್ಟದ ಪಾಲಕ–ವಿದ್ಯಾರ್ಥಿ ಸಂಘಗಳು.
- ಗುಣಮಟ್ಟದ ಸಂಶೋಧನೆ ಮತ್ತು ಅಭಿವೃದ್ದಿ.
- ಗುಣಮಟ್ಟದ ಆಧುನಿಕ ತಂತ್ರಜ್ಞಾನದ ಉಪಕರಣಗಳು.
- ಗುಣಮಟ್ಟದ ಪರೀಕ್ಷಾ ಮತ್ತು ಮೌಲ್ಯಮಾಪನ ಪದ್ದತಿ.
- ಗುಣಮಟ್ಟದ ಜ್ಞಾನ ಮತ್ತು ಕೌಶಲ್ಯಗಳ ಬೆಳವಣಿಗೆ.

## ಉಪಸಂಹಾರ

21 ನೆಯ ಶತಮಾನದಲ್ಲಿ ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ಮತ್ತು ರೂಪಾಂತರ ಮಾಡಿ, ಶಾಲಾ ಶಿಕ್ಷಣ ಸವಾಲುಗಳನ್ನು ಎದುರಿಸಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಿ ಉನ್ನತ ಕಲಿಕೆಯಲ್ಲಿ ಉನ್ನತ ಪಂಕ್ತಿಯನ್ನು ಸಾಧಿಸಬಹುದು. ಶಿಕ್ಷಣವು ವ್ಯಕ್ತಿಯ ವರ್ತನೆಯ ಪರಿವರ್ತನೆಯ ಸಂಕೇತವಾಗಿದೆ. ಮಕ್ಕಳು ಬಾಡದಂತಹ ಸುಂದರ ಪುಷ್ಪಗಳು, ಆ ಪುಷ್ಪಗಳನ್ನು ಪೋಷಿಸುವಂತಹ ಉದ್ಯಾನವನವೇ ಶಾಲೆ. ಆದಕಾರಣ ಅಂತಹ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು ಶಾಲೆಗಳ ಕಾರ್ಯವಾಗಿದೆ. ಕಾರಣ ಶಾಲಾ ಶಿಕ್ಷಕರು ಕ್ರಿಯಾಶಿಲತೆ, ರಚನಾತ್ಮಕತೆ, ಪ್ರಾಯೋಗಿಕ ತಂತ್ರಗಳು, ಅನ್ವಯ ಸಾಮರ್ಥ್ಯ, ವಿವೇಚನಾ ಶಕ್ತಿ ಮತ್ತು ವೈಜ್ಞಾನಿಕ ಮನೋಭಾವನೆ ಮುತಾದವುಗಳನ್ನು ಅಳವಡಿಸಿಕೊಂಡು ಗುಣಾತ್ಮಕ ಶಾಲಾ ಶಿಕ್ಷಣದತ್ತ ಗಮನ ಹರಿಸುವುದು ಶಿಕ್ಷಣದ ಅತ್ಯಂತ ಪ್ರಮುಖವಾದ ಗುರಿಯಾಗಿದೆ.

## ಆಕರ ಗ್ರಂಥಗಳು

- ರಾವ್ ಮಹಾಬಲೇಶ್ವರ (2009)–'ಪ್ರೌಢ ಶಿಕ್ಷಣ ಮತ್ತು ಶಿಕ್ಷಕನ ಕರ್ತವ್ಯಗಳು' ಗದಗ, ವಿದ್ಯಾನಿಧಿ ಪ್ರಕಾಶನ.
- ಮ್ಯಾಗೇರಿ. ಸಿ. ವಿ. (2007)–'ಶಿಕ್ಷಕರ ಶಿಕ್ಷಣ'–ಸಂಪುಟ 2 ಗದಗ, ವಿದ್ಯಾನಿಧಿ ಪ್ರಕಾಶನ.
- ಕರಿಗಣ್ಣವರ ಮತ್ತು ರಾಮದುರ್ಗ (2007)–'ಶೈಕ್ಷಣಿಕ ನಿರ್ವಹಣೆ' ಗದಗ, ಜ್ಞಾನಗಂಗೋತ್ರಿ ಪ್ರಕಾಶನ.
- ಓಬಳೇಶ ಘಟ್ಟಿ (2003)–'ಪ್ರೌಢ ಶಾಲಾ ಶಿಕ್ಷಣ ಮತ್ತು ಶಿಕ್ಷಕನ ಕಾರ್ಯಗಳು' ಗದಗ, ವಿದ್ಯಾನಿಧಿ ಪ್ರಕಾಶನ.
- ಸಮಕ್ಷಮ ಮಾಲಿಕೆ–3, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು.

■■

# ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮದಲ್ಲಿ ಸಾಕ್ಷರತೆಯ ಮೂಲಕ ಮಹಿಳಾ ಸಬಲೀಕರಣದ ಪ್ರಯತ್ನ - ವಿಶ್ಲೇಷಣಾತ್ಮಕ ಅಧ್ಯಯನ

# (EFFORT WOMEN EMPOWERMENT THROUGH LITERACY IN LITERACY PROGRAMME THROUGH STUDENTS - ANALYTIC STUDY)

## ಪೀಠಿಕೆ

ಮನುಕುಲದ ಇಂದಿನ ಪುರುಷ ಸಮಾಜದ ಮೇಲ್ಮಟ್ಟಕ್ಕೆ ಮಹಿಳೆಯು ಬುನಾದಿ ಎಂಬುದನ್ನು ನಾವು ಮರೆಯುವಂತಿಲ್ಲ. **''ಯತ್ರ ನಾರ್ಯಸ್ತು ಪೂಜ್ಯಂತೆ, ತತ್ರ ರಮಂತೆ ದೇವತಃ''** ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೊ ಅಲ್ಲಿ ದೇವತೆಗಳು ನೆಲೆಸಿರುವರು ಎಂಬ ಮನುವಿನ ಮಾತು ಅತ್ಯಂತ ಪುರಾತನವಾದುದು. ಆದರೆ ಈ ಸಮಾಜದಲ್ಲಿ ಮಹಿಳೆ ನಡೆದುಕೊಂಡು ಬಂದಿರುವ ದಾರಿ ಮಾತ್ರ ಅತ್ಯಂತ ದುರ್ಗಮವಾಗಿದೆ. ಅದಕ್ಕೆ ಕಾರಣ ಪುರುಷ ಸಮಾಜ ಎಂದು ಹೇಳಬಹುದು. ಅನಾದಿಕಾಲದ ಕೀಟೌರಿಮೆಯ ವ್ಯವಸ್ಥೆಯಲ್ಲಿಯೂ ಹಲವಾರು ಮಹಿಳೆಯರು ಉತ್ತಮ ಕ್ರಿಯಾ ಶೀಲತೆಯನ್ನು ಪ್ರದರ್ಶಿಸುತ್ತಾ ಬಂದಿದ್ದಾರೆ. ಲಿಂಗ ಸೂಕ್ಷ್ಮತೆಯನ್ನು ಮುಂದಿಟ್ಟುಕೊಂಡು ಅವಳು ಅಬಲೆ, ಅಶಕ್ತೆ, ಅಂಜಿಕೆಯ ಸ್ವಭಾವದವಳು, ಸೂಕ್ಷ್ಮ ಸ್ವಭಾವದವಳು, ಎಂಬೆಲ್ಲಾ ಕಾರಣಗಳನ್ನು ನೀಡುತ್ತಾ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಸ್ತ್ರೀಯು ಸರ್ವಕ್ಷೇತ್ರಗಳಲ್ಲಿಯೂ ವಂಚಿತಳಾಗುತ್ತಲೇ ಬಂದಿದ್ದಾಳೆ. ಅಂದಿನ ಸಮಾಜದಲ್ಲಿದ್ದ ಮೌಢ್ಯತೆ, ಅಂಧಕಾರ, ದುರ್ಬಲ ಮನೋಭಾವ, ಸಂಪ್ರದಾಯ, ಲೋಕರೂಢಿಗಳು, ಸಾಮಾಜಿಕ ಕಟ್ಟುಪಾಡುಗಳು ಇತ್ಯಾದಿ ಅಂಶಗಳಿಗೆ ಕಟ್ಟುಬಿದ್ದು ಸ್ತ್ರೀಯು ಪುರುಷನಂತೆ ಸಮಾನವಾಗಿ ಕಲಿಯುವ ಅವಕಾಶಗಳಿಂದ ವಂಚಿತಳಾಗಿದ್ದಾಳೆ ಎಂಬುದಕ್ಕೆ ದೇಶದ ಮಹಿಳಾ ಸಾಕ್ಷತರೆಯ ಪ್ರಮಾಣ ಹಿಡಿದ ಕನ್ನಡಿಯಂತಿದೆ.

ಸಹನೆ, ಸಂಯಮ, ಸ್ಥೈರ್ಯ, ಶೌರ್ಯ, ವಿಶೇಷ ಕೌಶಲ್ಯಗಳಿಂದ ಮತ್ತು ತನ್ನ ಸೂಕ್ಷ್ಮ ಸಂವೇದನೆ, ಸದೃಢತೆ, ಅಚಲ ನಿರ್ಧಾರ, ದೃಢನಿಲುವು, ನಿಶ್ಚಿತ ಮಾರ್ಗಗಳಿಂದ ಸಾಮಾಜಿಕ ಪರಿವರ್ತನೆಯನ್ನು ಉಂಟುಮಾಡಬಲ್ಲ ಶಕ್ತಿ ಮಹಿಳೆಯಲ್ಲಿದೆ. **''ದೇಶದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ವೈಜ್ಞಾನಿಕ ಕ್ಷೇತ್ರಗಳಲ್ಲಿ ನಿರೀಕ್ಷಿತ ಪ್ರಗತಿಯನ್ನು ಸಾಧಿಸಬೇಕಾದರೆ ಅದು 'ಮಹಿಳೆಗೆ ನೀಡುವ ಉತ್ತಮ ಶಿಕ್ಷಣ ಹಾಗೂ ಪುರುಷ ಸಮಾಜದ ಉತ್ತಮ ಭಾವನೆ'ಗಳನ್ನು ಅವಲಂಬಿಸಿದೆ''** ಎಂದು ಹೇಳಿದರೆ ತಪ್ಪಾಗಲಾರದು.

## ಮಹಿಳಾ ಸಬಲೀಕರಣದ ಅರ್ಥ

ಸಬಲೀಕರಣವೆಂದರೆ ಸಶಕ್ತೀಕರಣ, ಶಕ್ತಿಸಂವರ್ಧನೆ, ಶಕ್ತಿ ಸಂಚಯಿಸುವುದು ಬೆಳವಣಿಗೆ, ಅಭಿವೃದ್ಧಿ, ಕಾನೂನಿನ ಹಕ್ಕುಗಳನ್ನು ನೀಡುವುದು, ಅರ್ಹತೆಯನ್ನು ನೀಡುವುದು ಎಂದೆಲ್ಲಾ ಅರ್ಥೈಸಲಾಗುತ್ತದೆ.

''ಸಾಮಾಜಿಕವಾಗಿ ಮಹಿಳೆಯರು ಉತ್ತಮ ಸ್ಥಾನವನ್ನು ಹೊಂದಲು ಅಗತ್ಯವಾದ ಆತ್ಮವಿಶ್ವಾಸ, ಸ್ವಸಾಮರ್ಥ್ಯ ಹಾಗೂ ಆತ್ಮಗೌರವಕ್ಕೆ ಅವಕಾಶ ಮಾಡಿಕೊಡುವುದೇ ಮಹಿಳಾ ಸಬಲೀಕರಣ'' ಎಂದು ಹೇಳಲಾಗುತ್ತದೆ.

''ಮಹಿಳೆಗೆ ನೀಡುವ ಶೈಕ್ಷಣಿಕ ಆದ್ಯತೆಯನ್ನು ಆಧರಿಸಿದ ಮಹಿಳಾ ಶಿಕ್ಷಣವೇ ಮಹಿಳಾ ಸಬಲೀಕರಣ''.

**ಸ್ತ್ರೀವಾದಿಗಳ ಪ್ರಕಾರ :** ''ಮಹಿಳೆಯರ ಪರಾಧೀನ ಪರಿಸ್ಥಿತಿಗೆ ಕಾರಣವಾಗಿರುವ ಪ್ರಸ್ತುತ ಸಾಮಾಜಿಕ ರಚನೆಯಲ್ಲಿ ತೀವ್ರವಾದ ಬದಲಾವಣೆ ತರುವುದು ಮಹಿಳೆಯರ ಸಶಕ್ತೀಕರಣ'' ಎಂದಿದ್ದಾರೆ.

ಒಟ್ಟಾರೆ ಮಹಿಳೆಗೆ ಅಗತ್ಯವಾದ ಶಿಕ್ಷಣ ನೀಡಿ ಅವಳಲ್ಲಿ ಅಂತರ್ಗತವಾಗಿರುವ ವಿಶಿಷ್ಟ ಸಾಮರ್ಥ್ಯಗಳನ್ನು ಗುರುತಿಸಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಆಕೆಯ ಸಾಮರ್ಥ್ಯವನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಮಾಡುವುದೇ ಮಹಿಳಾ ಸಬಲೀಕರಣ ಎಂದು ಹೇಳಬಹುದು.

**''ಮಾನವನ ಆತ್ಮ ಸಾಕ್ಷಾತ್ಕಾರಕ್ಕೆ ಶಿಕ್ಷಣ ಅತ್ಯಗತ್ಯ''** ವೆಂದು ತಾತ್ವಿಕರು ಹೇಳಿದ್ದಾರೆ. ಆದರೆ ನಮ್ಮ ದೇಶದ ಮಹಿಳೆಯರ ಚಿತ್ರಣವೇ ಬೇರೆ, ಮಾನವನ ಜೀವನಕ್ಕೆ ಅತ್ಯಮೂಲ್ಯವಾಗಿ ಬೇಕಾಗಿರುವ ಮೂಲಭೂತ ಅಕ್ಷರಜ್ಞಾನವೇ ಅವರ ಪಾಲಿಗೆ ಮರೀಚಿಕೆಯಾಗಿದೆ ಎಂದರೆ ತಪ್ಪಾಗಲಾರದು. ಈ ಹಿನ್ನಲೆಯಲ್ಲಿ ಪ್ರಸಕ್ತ ಆಧುನಿಕ ಸಮಾಜದ ರಚನೆಯಲ್ಲಿ ಮಹಿಳೆ ಸಾಕ್ಷರತೆಯಲ್ಲಿ ಎಷ್ಟು ಮುಂದುವರಿದಿದ್ದಾಳೆ ? ಆಕೆಯ ಸಾಕ್ಷರ ಸ್ಥಿತಿ ಹೇಗಿದೆ ? ಮಹಿಳೆಗೂ ಶಿಕ್ಷಣ ಕೊಡುವ ನಮ್ಮ ಪ್ರಯತ್ನ ಎತ್ತ ಸಾಗಿದೆ ? ಸಾಕ್ಷರತೆಯ ಸಾಧನೆಯಲ್ಲಿ ರಾಜ್ಯ ಸರ್ಕಾರದ ಪ್ರಯತ್ನಗಳು ಮತ್ತು ಕೈಗೊಂಡಿರುವ ಕ್ರಮಗಳಾದರು ಏನು ? ಅವುಗಳ ಪ್ರಯೋಜನವೇನು ? ಈ ಮೂಲಕ ಆಕೆಯನ್ನು ಸಬಲೆಯನ್ನಾಗಿ, ಸಶಕ್ತಳನ್ನಾಗಿ ಮಾಡುವ ಪ್ರಯತ್ನಗಳು ಎಷ್ಟರ ಮಟ್ಟಿಗೆ ಫಲಕಾರಿಯಾಗಿವೆ ಎಂಬುದನ್ನು ವಿಶ್ಲೇಷಿಸುವ ಪ್ರಯತ್ನ ಈ ಪ್ರಬಂಧದಲ್ಲಿದೆ.

## ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮ

ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯ ಸಾಕ್ಷರತಾ ಮಿಷನ್ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ 2005–06ನೇ ಶೈಕ್ಷಣಿಕ ಸಾಲಿನಿಂದ ''ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮ'' ಎಂಬ ವಿನೂತನ ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಇದು **ಭಾರತದ ಮಾಜಿ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ರವರ ಕನಸಿನ ಯೋಜನೆಯಾಗಿದೆ.** ಪ್ರತಿ ಪ್ರೌಢಶಾಲೆಯ 9ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ತಮ್ಮ ಮನೆಯಲ್ಲಿ ಅಥವಾ ಮನೆಯ ಸಮೀಪದಲ್ಲಿರುವ ಇಬ್ಬರು ಅನಕ್ಷರಸ್ಥ ವಯಸ್ಕರನ್ನು ಆಯ್ಕೆಮಾಡಿಕೊಂಡು ಅವರಿಗೆ ಅಕ್ಷರ ಕಲಿಸುವ ಕಾರ್ಯಕ್ರಮವಾಗಿದೆ. ಈ ಮೂಲಕ 2010 ರ ವೇಳೆಗೆ ರಾಜ್ಯದಲ್ಲಿ 85% ರಷ್ಟು ಸಾಕ್ಷರತೆಯನ್ನು ಸಾಧಿಸಬೇಕೆಂಬುದು ಈ ಕಾರ್ಯಕ್ರಮದ ಮುಖ್ಯ ಗುರಿಯಾಗಿದೆ. ಇದನ್ನು ವಿದ್ಯಾರ್ಥಿಗಳು ತರಗತಿಯಲ್ಲಿ

✍ **ವರದರಾಜು ಎಸ್.**
ಮುಖ್ಯಸ್ಥರು, ಶಿಕ್ಷಣಶಾಸ್ತ್ರ ವಿಭಾಗ,
ಎಸ್.ಎಂ.ಎಸ್. ಪ್ರಥಮ ದರ್ಜೆ ಕಾಲೇಜು,
ಹೊನ್ನಾಳಿ, ದಾವಣಗೆರೆ ಜಿಲ್ಲಾ
varadalyg@gmail.com

✍ **ಪಾಟೀಲ ಎಸ್. ಎಸ್.**
ಡೀನರು, ಶಿಕ್ಷಣ ನಿಕಾಯ ಹಾಗೂ ಅಧ್ಯಕ್ಷರು ಸ್ನಾತಕೋತ್ತರ
ಶಿಕ್ಷಣ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ,
ಶಂಕರಘಟ್ಟ, ಶಿವಮೊಗ್ಗ
sathviksmith@yahoo.co.in

ಕೈಗೊಳ್ಳಬೇಕಾಗಿರುವ ಪ್ರಾಜೆಕ್ಟ್‌ರ ವರ್ಕ್‌ಗೆ ಬದಲಾಗಿ ಕೈಗೊಳ್ಳಬಹುದಾದ ಕಾರ್ಯ ಕ್ರಮವಾಗಿದೆ.

ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮದ ಮೂಲಕ ಮಹಿಳಾ ಸಬಲೀಕರಣಕ್ಕಾಗಿ ನಡೆದ ಪ್ರಯತ್ನಗಳ ವಿಶ್ಲೇಷಣಾತ್ಮಕ ಅಧ್ಯಯನ ಮಾಡಲಾಗಿದೆ.

### ಅಧ್ಯಯನದ ಉದ್ದೇಶಗಳು


- ಶಿವಮೊಗ್ಗ ಜಿಲ್ಲೆಯ ಸಾಕ್ಷರತಾ ಪ್ರಮಾಣದಲ್ಲಿ ಮಹಿಳಾ ಸಾಕ್ಷರತೆಯ ಸ್ಥಿತಿಗತಿಗಳ ವಿಶ್ಲೇಷಣಾತ್ಮಕ ಅಧ್ಯಯನ ಮಾಡುವುದು.
- ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮದಲ್ಲಿ ಮಹಿಳಾ ಫಲಾನುಭವಿಗಳ ಸಾಕ್ಷರ ಸಾಫಲ್ಯತೆಯ ಸ್ಥಿತಿಗತಿಗಳ ವಿಮರ್ಶಾತ್ಮಕ ಅಧ್ಯಯನ ಮಾಡುವುದು.

### ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನವನ್ನು **'ದಾಖಲೆಗಳ ಸಮೀಕ್ಷಾ ವಿಧಾನ'** ಮತ್ತು **''ಸಂದರ್ಶನ ವಿಧಾನ''** ದಲ್ಲಿ ಕೈಗೊಳ್ಳಲಾಗಿದೆ. ಸಂಬಂಧಿತ ಇಲಾಖೆಗಳ, ಸರ್ಕಾರಿ ಕಛೇರಿಗಳ ದಾಖಲೆಗಳ ನೆರವಿನಿಂದ ಪಡೆದ ಮಾಹಿತಿಗಳ ಆಧಾರದ ಮೇಲೆ ಅಧ್ಯಯನವನ್ನು ಕೈಗೊಳ್ಳಲಾಗಿದೆ.

### ಪ್ರತಿದರ್ಶಿ ಆಯ್ಕೆ

ಪ್ರಸ್ತುತ ಅಧ್ಯಯನಕ್ಕೆ ಶಿವಮೊಗ್ಗ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಒಟ್ಟು 7 ತಾಲ್ಲೂಕುಗಳಿದ್ದು, ಅಧ್ಯಯನಕ್ಕೆ ಶ್ರೇಣಿಕೃತ ಯಾದೃಚ್ಛಿಕ ವಿಧಾನದಲ್ಲಿ ಸಾಗರ, ಶಿಕಾರಿಪುರ, ಶಿವಮೊಗ್ಗ ಹಾಗೂ ತೀರ್ಥಹಳ್ಳಿ ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಶ್ರೇಣಿಕೃತ ಯಾದೃಚ್ಛಿಕ ವಿಧಾನದಿಂದ ಸಾಕ್ಷರತಾ ಕಾರ್ಯಕ್ರಮದ ಫಲಾನುಭವಿಗಳ ಪ್ರತಿಚಯನವನ್ನು ಈ ಕೆಳಗಿನಂತೆ ಆಯ್ಕೆ ಮಾಡಿಕೊಳ್ಳಲಾಗಿದೆ.




### ಅಧ್ಯಯನಕ್ಕೆ ಬಳಸಿದ ಸಾಧನ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ದತ್ತಾಂಶ ಸಂಗ್ರಹಿಸಲು ಸಂಶೋಧಕರು **'ಮಾಹಿತಿ ಪ್ರಣಾಳಿಕೆ'** (Information Schedule) ಯನ್ನು ಬಳಸಿಕೊಂಡು ಸಂಗ್ರಹಿಸಿದ ಮಾಹಿತಿಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಮತ್ತು ಸಂಶೋಧಕರೇ ತಯಾರಿಸಿದ **'ಸಂದರ್ಶನ ಪ್ರಣಾಳಿಕೆ'** (Interview Schedule) ಯನ್ನು ಆಧರಿಸಿ **''ಕಲಿಕಾ ಕಾರ್ಯಕ್ರಮ ಕುರಿತ ಫಲಾನುಭವಿಗಳ ಅಭಿಪ್ರಾಯ''**ಗಳನ್ನು ಸಂಗ್ರಹಿಸುವುದರ ಜೊತೆಗೆ ಸಂಶೋಧಕರು ತಯಾರಿಸಿದ **''ಫಲಾನುಭವಿಗಳ ಕಲಿಕಾ ಸಾಫಲ್ಯತೆ ಅಳೆಯುವ ಪರೀಕ್ಷಣ''** ಎಂಬ ಸಾಧನಗಳನ್ನು ಬಳಸಿಕೊಂಡು ಅಧ್ಯಯನ ಕೈಗೊಂಡಿದ್ದಾರೆ.

### ಅಧ್ಯಯನದ ಫಲಿತಾಂಶಗಳು

**ತಖ್ತೆ-1 : 1960 ರಿಂದ 2001 ರ ಅವಧಿಯಲ್ಲಿನ ಶಿವಮೊಗ್ಗ ಜಿಲ್ಲೆಯ ಸಾಕ್ಷರತೆಯ ಸ್ಥಿತಿಗತಿಗಳ ವಿವರ :**
**(ಪುರುಷರು -ಮಹಿಳೆಯರು, ನಗರ-ಪಟ್ಟಣ)**

| ವರ್ಷ | ನಗರ | | | ಗ್ರಾಮೀಣ | | | ಒಟ್ಟು ಶೇಕಡ |
|---|---|---|---|---|---|---|---|
| | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು | ಒಟ್ಟು | |
| 1960–61 | 38.33 | 16.4 | 28.05 | 34.48 | 12.39 | 23.9 | 25.97 |
| 1970–71 | 45.64 | 26.01 | 30.61 | 40.98 | 21.65 | 31.65 | 34.11 |
| 1980–81 | 53.74 | 34.61 | 44.44 | 49.05 | 28.03 | 38.91 | 41.68 |
| 1990–91 | 71.24 | 51.42 | 61.53 | 66.38 | 44.04 | 55.48 | 58.48 |
| 2000–01 | 86.32 | 74.05 | 80.38 | 78.32 | 60.50 | 69.42 | 74.86 |

(Source : Shimoga District Social and Economic Review 2001)

1960 –61ರಿಂದ 2000–01 ರ ಅವಧಿಯಲ್ಲಿ ಶಿವಮೊಗ್ಗ ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಾಕ್ಷರತೆಯು ಯಾವ ಪ್ರಮಾಣದಲ್ಲಿ ಇತ್ತು ಎಂಬುದನ್ನು ತಿಳಿಯಬಹುದಾಗಿದೆ.

### ಜಿಲ್ಲೆಯ ಒಟ್ಟು ಸಾಕ್ಷರತೆಯ ವಿವರ

- ಜಿಲ್ಲೆಯಲ್ಲಿ 1960–61 ರ ಅವಧಿಯಲ್ಲಿ ಒಟ್ಟು ಸಾಕ್ಷರತೆಯ ಪ್ರಮಾಣ 25.97% ರಷ್ಟಿದ್ದು, ಇದರಲ್ಲಿ ನಗರ ಪ್ರದೇಶ 28.05% ರಷ್ಟು ಮತ್ತು ಗ್ರಾಮೀಣ ಪ್ರದೇಶ 23.9% ರಷ್ಟು ಸಾಕ್ಷರತೆಯನ್ನು ಹೊಂದಿತ್ತು.
- 1970–71ರ ಅವಧಿಯಲ್ಲಿ ಜಿಲ್ಲೆಯ ಸಾಕ್ಷರತೆಯ ಪ್ರಮಾಣ 34.11%ಕ್ಕೆ ಏರಿಕೆಯಾಗಿದ್ದು, ಆ ಅವಧಿಯಲ್ಲಿ ನಗರ ಪ್ರದೇಶ 30.61% ರಷ್ಟು ಮತ್ತು ಗ್ರಾಮೀಣ ಪ್ರದೇಶ 31.65% ರಷ್ಟು ಸಾಕ್ಷರತೆಗೆ ಏರಿಕೆಯಾಗಿತ್ತು.
- 1980–81ರ ಅವದಿಯಲ್ಲಿ ಜಿಲ್ಲೆಯ ಸಾಕ್ಷರತೆಯ ಪ್ರಮಾಣ 41.68 ಕ್ಕೆ ಏರಿಕೆಯಾಗಿದ್ದು, ಆ ಅವಧಿಯಲ್ಲಿ ನಗರ ಪ್ರದೇಶ 44.44% ರಷ್ಟು ಮತ್ತು ಗ್ರಾಮೀಣ ಪ್ರದೇಶ 38.91% ರಷ್ಟು ಸಾಕ್ಷರತೆ ಏರಿಕೆಗೆ ಸಾಕ್ಷಿಯಾಗಿತ್ತು.

- 1990–91ರ ಅವಧಿಯಲ್ಲಿ ಜಿಲ್ಲೆಯ ಸಾಕ್ಷರತೆಯ ಪ್ರಮಾಣವು 58.48% ಕ್ಕೆ ಏರಿಕೆಯಾಗಿದ್ದು, ಆ ಅವಧಿಯಲ್ಲಿ ನಗರ ಪ್ರದೇಶ 61.53% ರಷ್ಟು ಮತ್ತು ಗ್ರಾಮೀಣ ಪ್ರದೇಶ 55.48% ರಷ್ಟು ಸಾಕ್ಷರತೆಯಲ್ಲಿ ಏರಿಕೆಯನ್ನು ಸಾಧಿಸಿತ್ತು
- 2000–01 ರ ಅವಧಿಯಲ್ಲಿ ಜಿಲ್ಲೆಯ ಒಟ್ಟು ಸಾಕ್ಷರತೆಯ ಪ್ರಮಾಣವು 74.89% ಕ್ಕೆ ಏರಿಕೆಯನ್ನು ಕಂಡಿದ್ದು; ಇದರಲ್ಲಿ ನಗರ ಪ್ರದೇಶದ ಪ್ರಮಾಣ 80.38% ರಷ್ಟು ಇದ್ದರೆ, ಗ್ರಾಮೀಣ ಪ್ರದೇಶದ ಪ್ರಮಾಣವು ಶೇ. 69.42 ರಷ್ಟಾಗಿರುವುದು ಕಂಡು ಬಂದಿದೆ.

**ಮಹಿಳಾ ಸಾಕ್ಷರತೆಯ ಸ್ಥಿತಿಗತಿಯ ವಿವರ**

- 1960–61ರಲ್ಲಿ ನಗರ ಪ್ರದೇಶದಲ್ಲಿ ಕೇವಲ 16.4% ರಷ್ಟು. ಗ್ರಾಮೀಣ ಪ್ರದೇಶದಲ್ಲಿ 12.39% ರಷ್ಟು ಮಹಿಳೆಯರು ಸಾಕ್ಷರರಿದ್ದರು.
- 1970–71ರಲ್ಲಿ ನಗರ ಪ್ರದೇಶದಲ್ಲಿ ಕೇವಲ 26.01% ರಷ್ಟು. ಗ್ರಾಮೀಣ ಪ್ರದೇಶದಲ್ಲಿ 21.65% ರಷ್ಟು ಮಹಿಳೆಯರು ಸಾಕ್ಷರರಿದ್ದರು.
- 1980–81ರಲ್ಲಿ ನಗರ ಪ್ರದೇಶದಲ್ಲಿ ಕೇವಲ 34.61% ರಷ್ಟು. ಗ್ರಾಮೀಣ ಪ್ರದೇಶದಲ್ಲಿ 28.03% ರಷ್ಟು ಮಹಿಳೆಯರು ಸಾಕ್ಷರರಿದ್ದರು.
- 1990–91ರಲ್ಲಿ ನಗರ ಪ್ರದೇಶದಲ್ಲಿ ಕೇವಲ 51.42% ರಷ್ಟು. ಗ್ರಾಮೀಣ ಪ್ರದೇಶದಲ್ಲಿ 44.04% ರಷ್ಟು ಮಹಿಳೆಯರು ಸಾಕ್ಷರರಿದ್ದರು.
- 2000–01ರಲ್ಲಿ ನಗರ ಪ್ರದೇಶದಲ್ಲಿ ಮಹಿಳಾ ಸಾಕ್ಷರರು 74.05% ರಷ್ಟು. ಗ್ರಾಮೀಣ ಪ್ರದೇಶದಲ್ಲಿ 60.50% ರಷ್ಟು ಮಹಿಳೆಯರು ಸಾಕ್ಷರರಿದ್ದರು.

ಒಟ್ಟಾರೆ 1960–61 ರಿಂದ 2000–01ರ ಅವಧಿಯಲ್ಲಿ ಒಂದು ದಶಕದಿಂದ ಮತ್ತೊಂದು ದಶಕಗಳ ನಡುವೆ ಸಾಕ್ಷರತೆಯ ಪ್ರಮಾಣ ಏರಿಕೆಯಾಗುತ್ತಾಸಾಗಿದೆ. ನಗರ ಮತ್ತು ಗ್ರಾಮೀಣ ಸಾಕ್ಷರತೆಯ ಪ್ರಮಾಣಕ್ಕೆ ಸಂಬಂಧಿಸಿದಂತೆ ಅವಲೋಕಿಸಿದಾಗ 1970ರ ದಶಕವನ್ನು ಹೊರತು ಪಡಿಸಿ; ಉಳಿದ ಎಲ್ಲಾ ಅವಧಿಯಲ್ಲಿ ಗ್ರಾಮೀಣ ಸಾಕ್ಷರತೆಯ ಪ್ರಮಾಣ ನಗರ ಪ್ರದೇಶದ ಸಾಕ್ಷರತೆಯ ಮಟ್ಟಕ್ಕಿಂತ ಕಡಿಮೆ ಇರುವುದು ಕಂಡು ಬರುತ್ತದೆ. ನಂತರ ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲಿ ಪುರುಷ ಮತ್ತು ಮಹಿಳೆಯರ ಸಾಕ್ಷರತೆಯ ಪ್ರಮಾಣಕ್ಕೆ ಸಂಬಂಧಿಸಿದಂತೆ ಗಮನಿಸಿದಾಗ; ಮಹಿಳಾ ಸಾಕ್ಷರತೆಯ ಪ್ರಮಾಣ ಪುರುಷರ ಸಾಕ್ಷರತೆಯ ಪ್ರಮಾಣಕ್ಕಿಂತ ಕಡಿಮೆ ಇರುವುದು ಕಂಡು ಬರುತ್ತದೆ. **ಆದರೆ ಪುರುಷ ಮತ್ತು ಮಹಿಳಾ ಸಾಕ್ಷರತೆಯ ನಡುವಿನ ವ್ಯತ್ಯಾಸ ದಶಕದಿಂದ ದಶಕಕ್ಕೆ ಕಡಿಮೆಯಾಗುತ್ತಾ ಸಾಗಿರುವುದು ಒಂದು ಪ್ರಮುಖ ಅಂಶವಾಗಿ ಕಂಡುಬರುತ್ತದೆ.** 1990–91 ರಿಂದ 2000–01 ರ ದಶಕದ ಅವಧಿಯಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚು ಗಮನಾರ್ಹ ರೀತಿಯಲ್ಲಿ ಏರಿವೆ. ಕಾರಣ ಶಿವಮೊಗ್ಗ ಜಿಲ್ಲೆಯಲ್ಲಿ ಸಾಕ್ಷರತೆಯ ಅಭಿವೃದ್ಧಿಗಾಗಿ ಅನುಷ್ಠಾನಗೊಂಡ ಹಲವಾರು ಸಾಕ್ಷರತಾ ಕಾರ್ಯಕ್ರಮಗಳು ಜನತೆಯ ಅರಿವನ್ನು ಮೂಡಿಸಲು ಪ್ರಯತ್ನಿಸಿವೆ ಎಂದು ಹೇಳಬಹುದು.

ಶಿವಮೊಗ್ಗ ಜಿಲ್ಲೆಯಲ್ಲಿರುವ ವಿವಿಧ ತಾಲ್ಲೂಕುಗಳಲ್ಲಿ ಸಾಕ್ಷರತೆಯ ಪ್ರಮಾಣ ಯಾವ ರೀತಿಯಲ್ಲಿ ಹಂಚಿಕೆಯಾಗಿದೆ ಎಂಬುದನ್ನು ಈ ಕೆಳಗಿನ ತಖ್ತೆಯ ಸಹಾಯದಿಂದ ತಿಳಿಯಬಹುದಾಗಿದೆ.

**ತಖ್ತೆ-2 : 2001 ರಲ್ಲಿನ ಶಿವಮೊಗ್ಗ ಜಿಲ್ಲೆಯಲ್ಲಿನ ತಾಲ್ಲೂಕುವಾರು ಸಾಕ್ಷರತೆಯ ವಿವರ : (ಪುರುಷರು-ಮಹಿಳೆಯರು)**

| ತಾಲ್ಲೂಕು | ಸಾಕ್ಷರತೆ (ಶೇಕಡಾವಾರು ಪ್ರಮಾಣದಲ್ಲಿ) | | |
|---|---|---|---|
| | ಪುರುಷರು | ಮಹಿಳೆಯರು | ಒಟ್ಟು |
| ಭದ್ರಾವತಿ | 81.29 | 66.38 | 73.93 |
| ಹೊಸನಗರ | 81.81 | 64.97 | 73.53 |
| ಸಾಗರ | 86.28 | 69.06 | 77.97 |
| ಶಿಕಾರಿಪುರ | 77.92 | 61.03 | 69.03 |
| ಶಿವಮೊಗ್ಗ | 83.17 | 71.57 | 77.49 |
| ಸೊರಬ | 80.65 | 61.28 | 71.44 |
| ತೀರ್ಥಹಳ್ಳಿ | 85.63 | 71.14 | 78.27 |
| ಒಟ್ಟು | 82.32 | 67.24 | 74.86 |

(Source : Census of India, 2001, Bangalore)

- ಶಿವಮೊಗ್ಗ ಜಿಲ್ಲೆಯು 7 ತಾಲ್ಲೂಕುಗಳನ್ನು ಒಳಗೊಂಡಿದ್ದು; ಅದರಲ್ಲಿ ತೀರ್ಥಹಳ್ಳಿ ತಾಲ್ಲೂಕು ಜಿಲ್ಲೆಯಲ್ಲೇ ಅತೀ ಹೆಚ್ಚು ಎಂದರೆ 78.27% ರಷ್ಟು ಸಾಕ್ಷರತೆಯನ್ನು ಹೊಂದಿದ ತಾಲ್ಲೂಕಾಗಿದೆ.
- ಶಿಕಾರಿಪುರ ತಾಲ್ಲೂಕು ಜಿಲ್ಲೆಯಲ್ಲಿಯೇ ಅತೀ ಕಡಿಮೆ ಎಂದರೆ, 69.59% ರಷ್ಟು ಸಾಕ್ಷರತೆಯನ್ನು ಹೊಂದಿದ ತಾಲ್ಲೂಕು ಎನಿಸಿಕೊಂಡಿದೆ.
- ಇಡೀ ಜಿಲ್ಲೆಯ ಒಟ್ಟು ಸಾಕ್ಷರತೆ 74.86% ರಷ್ಟಿರುವುದು ಕಂಡುಬರುತ್ತದೆ.
- ಜಿಲ್ಲೆಯಲ್ಲಿ ಪುರುಷ ಮತ್ತು ಮಹಿಳೆಯರ ಸಾಕ್ಷರತೆಯ ಪ್ರಮಾಣವನ್ನು ಅವಲೋಕಿಸಿದಾಗ, ಜಿಲ್ಲೆಯಲ್ಲಿನ ಎಲ್ಲಾ 7 ತಾಲ್ಲೂಕುಗಳಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣ ಪುರಷರ ಸಾಕ್ಷರತೆಯ ಪ್ರಮಾಣಕ್ಕಿಂತ ಕಡಿಮೆ ಇರುವುದು ಕಂಡು ಬರುತ್ತದೆ. ಮಹಿಳಾ ಮತ್ತು ಪುರುಷರ ಸಾಕ್ಷರತೆಯ ಪ್ರಮಾಣಗಳ ನಡುವೆಯೂ ಕೂಡ ವ್ಯತ್ಯಾಸವಿರುವುದನ್ನು ಗಮನಿಬಹುದಾಗಿದೆ.
- ಒಟ್ಟಾರೆಯಾಗಿ ತಿಳಿದುಬರುವ ಸಂಗತಿಯೆಂದರೆ; ಜಿಲ್ಲೆಯಲ್ಲಿನ ಸಾಕ್ಷರತೆಯ ಪ್ರಮಾಣ ತಾಲ್ಲೂಕಿನಿಂದ ತಾಲ್ಲೂಕಿಗೆ ಭಿನ್ನವಾಗಿರುವುದರ ಜೊತೆಗೆ; 1990–91ರಿಂದ 2000–01ರ ಅವಧಿಯಲ್ಲಿ ಜಿಲ್ಲೆಯಲ್ಲಿ ಸಾಕ್ಷರತಾ ಪ್ರಮಾಣ ಅತ್ಯಂತ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಲು ಕಾರಣ, ಕನ್ನಡನಾಡು ಸಾಕ್ಷರನಾಡು, ಸಮಗ್ರ ಸಾಕ್ಷರತಾ ಆಂದೋಲನ, ಅಕ್ಷರತುಂಗಾ ಸಾಕ್ಷರತಾ ಆಂದೋಲನಗಳು. ಈ ಆಂದೋಲನಗಳಲ್ಲಿ ಸಮಾಜದ ಎಲ್ಲಾ ವರ್ಗದವರು ಪಾಲ್ಗೊಂಡು ಜನರಿಗೆ ಶಿಕ್ಷಣದ ಅರಿವನ್ನು ಮೂಡಿಸಿದ್ದರಿಂದಾಗಿ; ಶಿಕ್ಷಣದ ಅರಿವು ಮಹಿಳೆಯರ ನ್ನೊಳಗೊಂಡಂತೆ ಸಮುದಾಯದ ಪ್ರತಿ ವರ್ಗಗಳೂ ಜಾಗೃತಗೊಳ್ಳುವಂತೆ ಮಾಡಿದವು ಎಂದು ಹೇಳಬಹುದು.

## ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮದಲ್ಲಿ ಮಹಿಳಾ ಸಾಕ್ಷರತೆಯ ಪ್ರಯತ್ನದ ವಿಶ್ಲೇಷಣೆ

**ತಖ್ತೆ-3 : ಸಂದರ್ಶನದ ವಿವರಗಳು :**

| ವಿವರಗಳು | | ತಾಲ್ಲೂಕುಗಳು | | | | ಒಟ್ಟು |
|---|---|---|---|---|---|---|
| | | ಸಾಗರ | ಶಿಕಾರಿಪುರ | ಶಿವಮೊಗ್ಗ | ತೀರ್ಥಹಳ್ಳಿ | |
| ಸಂದರ್ಶನ ಮಾಡಿದ ಒಟ್ಟು ಫಲಾನುಭವಿಗಳು (ಗಂಡು,ಹೆಣ್ಣು) | ಪುರುಷರು | 40 (28.7) | 39 (28.4) | 27(20.6) | 10 (12.6) | 116 (23.8) |
| | ಮಹಿಳೆಯರು | 99 (71.2) | 98 (71.5) | 104 (79.3) | 69 (87.3) | 370 (76.1) |
| | ಒಟ್ಟು | 139 (100) | 137 (100) | 131(100) | 79 (100) | 486 (100) |

### ಫಲಾನುಭವಿಗಳ ವಿವರ

- ಸಂದರ್ಶನ ಮಾಡಲಾದ ಫಲಾನುಭವಿಗಳಲ್ಲಿ 76.1% ಮಹಿಳೆಯರು ಇರುವುದು ಕಂಡು ಬಂದಿದೆ.
- ಪುರುಷ ಫಲಾನುಭವಿಗಳ ಪ್ರಮಾಣವು ಕೇವಲ 24% ರಷ್ಟಿರುವುದು ಕಂಡು ಬರುತ್ತದೆ.
- ಇದು ಜಿಲ್ಲೆಯಲ್ಲಿ ಅಧಿಕ ಪ್ರಮಾಣದಲ್ಲಿ ಮಹಿಳೆಯರು ಅನಕ್ಷರಸ್ಥರಿರುವುದನ್ನು ದೃಢಪಡಿಸುತ್ತದೆ.

**ತಖ್ತೆ - 4 : ಸಾಕ್ಷರ ಸಾಫಲ್ಯತೆಯ ಪರೀಕ್ಷಣದ ಫಲಿತಾಂಶ ವಿವರ :**

| ಫಲಿತಾಂಶ | ಉತ್ತಮ | ಸಾಧಾರಣ | ವಿಶೇಷ | ವಿಫಲತೆ | ಒಟ್ಟು |
|---|---|---|---|---|---|
| | ಅಕ್ಷರ ಓದುವ, ಬರೆಯುವ ಅಂಕಗಳನ್ನು ಗುರುತಿಸುವಲ್ಲಿ ಸಫಲರಾದವರು (ಪಡೆದಿರುವ ಅಂಕಗಳ ಮಟ್ಟ16-25) | ಕೇವಲ ಅಕ್ಷರಗಳನ್ನು, ಅಂಕಗಳನ್ನು ಗುರುತಿಸದೆ ನೋಡಿ ಬರೆಯುವ ಮತ್ತು ಅಲ್ಪಸ್ವಲ್ಪ ಗುರುತಿಸುವಲ್ಲಿ ಸಫಲರಾದವರು (ಪಡೆದಿರುವ ಅಂಕಗಳ ಮಟ್ಟ06-15) | ಶಾಲೆಗೆ ಸೇರಿ, ಶಾಲಾ ಹಂತ ಮುಗಿಸಿರುವ, ಅರ್ಧದಲ್ಲಿಯೇ ಶಾಲೆ ಬಿಟ್ಟಿರುವ, ಅಕ್ಷರ ಜ್ಞಾನ ಬಲ್ಲವರೂ ಕಾರ್ಯಕ್ರಮದಲ್ಲಿ ತೊಡಗಿದ್ದಾರೆ ಅವರು (ಪಡೆದಿರುವ ಅಂಕಗಳ ಮಟ್ಟ 25ಕ್ಕಿಂತ ಹೆಚ್ಚು) | ಕೇವಲ ಸಹಿ ಮಾಡುವ ಮತ್ತು ಸಹಿ ಮಾಡಲೂ ಬಾರದವರು (ಪಡೆದಿರುವ ಅಂಕಗಳ ಮಟ್ಟ00-05) | |
| ತಾಲ್ಲೂಕು | ಉತ್ತಮ ಗುಂಪಿನವರು | ಸಾಧಾರಣ ಗುಂಪಿನವರು | ವಿಶೇಷ ಗುಂಪಿನವರು | ವಿಫಲತೆಯ ಗುಂಪಿನವರು | |
| ಸಾಗರ | 46 (33) | 11(7.9) | 19 (13.6) | 63 (45.3) | 139 (100) |
| ಶಿಕಾರಿಪುರ | 25 (18.2) | 11(8) | 21 (15.3) | 80 (58.3) | 137(100) |
| ಶಿವಮೊಗ್ಗ | 28 (21.3) | 11 (8.3) | 19 (14.5) | 73 (55.7) | 131 (100) |
| ತೀರ್ಥಹಳ್ಳಿ | 32 (40.5) | 06 (7.5) | 06 (7.5) | 35 (44.3) | 79 (100) |
| ಒಟ್ಟು | 131(26.9) | 39 (8) | 65 (13.3) | 251 (51.6) | 486 (100 |

| ಒಟ್ಟು ಫಲಿತಾಂಶದ ವಿವರ | | | | |
|---|---|---|---|---|
| ಉತ್ತಮ | ಸಾಧಾರಣ | ವಿಶೇಷ | ವಿಫಲತೆಯ | ಒಟ್ಟು |
| 131 (26.9) | 39 (8) | 65 (13.3) | 251 (51.6) | 486 (100) |

(ಆವರಣದೊಳಗಿನ ಸಂಖ್ಯೆಗಳು ಪ್ರತಿಶತಗಳನ್ನು ಸೂಚಿಸುತ್ತವೆ)

### ಒಟ್ಟು ಸಾಕ್ಷರ ಸಾಫಲ್ಯತೆಯ ಫಲಿತಾಂಶದ ವಿವರ

- ಒಟ್ಟಾರೆ ಸಾಕ್ಷರ ಸಾಫಲ್ಯತೆಯ ಫಲಿತಾಂಶದಲ್ಲಿ ಕೇವಲ 29.9% ರಷ್ಟು ಫಲಾನುಭವಿಗಳು ಓದುವ, ಬರೆಯುವ ಮತ್ತು ಅಂಕೆಗಳನ್ನು ಗುರುತಿಸುವಲ್ಲಿ ಸಫಲರಾಗಿರುವುದು ಕಂಡುಬರುತ್ತದೆ.
- ಕೇವಲ 8% ರಷ್ಟು ಫಲಾನುಭವಿಗಳು ಮಾತ್ರ ಸಾಧಾರಣ ಮಟ್ಟದ ಸಾಕ್ಷರ ಸಾಫಲ್ಯತೆಯನ್ನು ಸಾಧಿಸಿರುವುದು ಕಂಡು ಬಂದಿದೆ.
- ಅತ್ಯಧಿಕ ಪ್ರಮಾಣದಲ್ಲಿ ಅಂದರೆ 51.6% ರಷ್ಟು ಫಲಾನುಭವಿಗಳು ಸಾಕ್ಷರ ಸಾಫಲ್ಯತೆಯಲ್ಲಿ ಸಂಪೂರ್ಣ ವಿಫಲರಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

### ತಾಲ್ಲೂಕುವಾರು ಫಲಿತಾಂಶದ ವಿವರ

- ತಾಲ್ಲೂಕುವಾರು ಫಲಿತಾಂಶದಲ್ಲಿಯೂ ತೀರ್ಥಹಳ್ಳಿ ಮತ್ತು ಸಾಗರ ತಾಲ್ಲೂಕುಗಳಲ್ಲಿ ಸ್ವಲ್ಪ ಮಟ್ಟಿನ ಅಂದರೆ 40% ರಷ್ಟು ಪ್ರಮಾಣದಲ್ಲಿ ಉತ್ತಮ ಫಲಿತಾಂಶ ದೊರೆತಿರುವುದು ಕಂಡು ಬರುತ್ತದೆ.

| ಒಟ್ಟು ಫಲಿತಾಂಶದ ವಿವರ | | | | |
|---|---|---|---|---|
| ಉತ್ತಮ | ಸಾಧಾರಣ | ವಿಶೇಷ | ವಿಫಲತೆಯ | ಒಟ್ಟು |
| 107 (28.9) | 19 (5.1) | 45 (12.1) | 199 (53.7) | 370 (100) |

(ಆವರಣದೊಳಗಿನ ಸಂಖ್ಯೆಗಳು ಪ್ರತಿಶತಗಳನ್ನು ಸೂಚಿಸುತ್ತವೆ)

- ಉಳಿದಂತೆ ಶಿಕಾರಿಪುರ ಮತ್ತು ಶಿವಮೊಗ್ಗ ತಾಲ್ಲೂಕುಗಳಲ್ಲಿ ವಿಫಲತೆಯ ಪ್ರಮಾಣವು 50% ಕ್ಕಿಂತ ಅಧಿಕವಾಗಿರುವುದು ಕಂಡು ಬಂದಿದೆ.

**ಮಹಿಳಾ ಸಾಕ್ಷರ ಸಾಫಲ್ಯತೆಯ ಫಲಿತಾಂಶ**

- ಮಹಿಳಾ ಸಾಕ್ಷರತಾ ಸಾಫಲ್ಯತೆಯು ಒಟ್ಟು ಫಲಿತಾಂಶಕ್ಕಿಂತ ಭಿನ್ನವಾಗಿರುವುದಿಲ್ಲ, ಕೇವಲ 28.9% ರಷ್ಟು ಮಹಿಳೆಯರು ಈ ಕಾರ್ಯಕ್ರಮದಲ್ಲಿ ಯಶಸ್ವಿಯಾಗಿರುವುದು ಕಂಡು ಬಂದಿದೆ.
- ಕೇವಲ 5% ರಷ್ಟು ಮಹಿಳೆಯರು ಮಾತ್ರ ಸಾಧಾರಣ ಮಟ್ಟದ ಸಾಕ್ಷರ ಸಾಫಲ್ಯತೆಯಲ್ಲಿ ಯಶ ಕಂಡಿದ್ದಾರೆ.
- 53.7% ರಷ್ಟು ಮಹಿಳಾ ಫಲಾನುಭವಿಗಳು ಈ ಸಾಕ್ಷರತಾ ಕಾರ್ಯಕ್ರಮದಲ್ಲಿ ವಿಫಲತೆಯನ್ನು ಹೊಂದಿರುವುದು ಕಂಡು ಬರುತ್ತದೆ.
- 12.1% ರಷ್ಟು ಮಹಿಳೆಯರು ವಿಶೇಷ ಗುಂಪಿನಲ್ಲಿ ಗುರುತಿಸಲ್ಪಟ್ಟಿದ್ದಾರೆ.

**ಫಲಿತಾಂಶ**

- ಒಟ್ಟಾರೆ ಫಲಿತಾಂಶವು ಕೇವಲ 26.9% ರಷ್ಟು ಮಾತ್ರ ಯಶಸ್ವಿಯಾಗಿದೆ ಎಂದು ಹೇಳಬಹುದು.
- 8% ರಷ್ಟು ಸಾಧಾರಣ ಪ್ರಗತಿ ಹಾದಿಯಲ್ಲಿರುವುದು ಕಂಡು ಬರುತ್ತದೆ.
- ಒಟ್ಟಾರೆ ಕಾರ್ಯಕ್ರಮವು 51.6% ರಷ್ಟು ಸ್ಪಷ್ಟ ವಿಫಲತೆಯನ್ನು ಹೊಂದಿದೆ ಎಂಬುದು ಅಧ್ಯಯನದಿಂದ ತಿಳಿದು ಬರುತ್ತದೆ.
- ಒಟ್ಟಾರೆ ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮವು ಕೇವಲ ಸರ್ಕಾರಿ ದಾಖಲೆಗಳಲ್ಲಿ ಮಾತ್ರ ಸಾಕ್ಷರ ಸಾಧನೆಯ ಕಾರ್ಯಕ್ರಮವಾಗಿರುವುದು ಕಂಡು ಬರುತ್ತದೆ.
- ಮಹಿಳಾ ಸಾಕ್ಷರ ಸಾಫಲ್ಯತೆಯ ಮೂಲಕ ಮೂಲಭೂತ ಅಕ್ಷರ ಜ್ಞಾನವನ್ನು ನೀಡುವಂತಹ ಸರ್ಕಾರದ ಈ ಬಗೆಯ ಕಾರ್ಯಕ್ರಮಗಳು ಮಹಿಳಾ ಸಬಲೀಕರಣಕ್ಕೆ ಯಾವುದೇ ರೀತಿಯಿಂದಲೂ ಪೂರಕ, ಪ್ರೇರಕವಾಗಿಲ್ಲದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.
- ಸರ್ಕಾರ ಇಂತಹ ಕಾರ್ಯಕ್ರಮಗಳಲ್ಲಿಯೂ ಮಹಿಳೆ ಅದರ ಅವಕಾಶಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಲಾಗದೆ ಸಾಕ್ಷರ ಅವಕಾಶಗಳಿಂದಲೂ ವಂಚಿತಳಾಗುತ್ತಿರುವುದನ್ನು ಗಮನಿಸಬಹುದಾಗಿದೆ.
- ಈ ಕಾರ್ಯಕ್ರಮವು ಯೋಜಿತ ಅನುಷ್ಠಾನ ಕಾರ್ಯಕ್ರಮವಾಗಿರದೆ ಕೇವಲ ಸರ್ಕಾರದ ದಾಖಲೆಯ ಯೋಜನೆಗಳಾಗಿವೆ ಎಂಬುದು ವ್ಯಕ್ತವಾಗುತ್ತದೆ.
- ಮೌಲ್ಯಮಾಪನ, ಮೇಲ್ವಿಚಾರಣೆ ಯೋಜಿತವಾಗಿಲ್ಲದಿರುವುದು ಇದರ ಸ್ಪಷ್ಟ ವಿಫಲತೆಗೆ ಕಾರಣವಾಗಿದೆ ಎನ್ನುವುದು ಸ್ಪಷ್ಟವಾಗಿದೆ.
- ಜಿಲ್ಲೆಯಲ್ಲಿ 5 ವರ್ಷಗಳ ಅವಧಿಯಲ್ಲಿ ಕರ್ನಾಟಕ ಸರ್ಕಾರವು ಈ ಕಾರ್ಯಕ್ರಮವೊಂದಕ್ಕೆ 50 ಲಕ್ಷಕ್ಕೂ ಅಧಿಕ ಪ್ರಮಾಣದ ಹಣವನ್ನು ವಿನಿಯೋಗಿಸಿ ಕೇವಲ ಇಲಾಖಾ ದಾಖಲೆಗಳಲ್ಲಿ ಮಾತ್ರ ಸಾಕ್ಷರ ಸಾಫಲ್ಯತೆಯ ಸಾಧನೆಗಳನ್ನು ದಾಖಲಿಸುತ್ತಾ ಬಂದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

**ಉಪಸಂಹಾರ**

ಬದಲಾಗುತ್ತಿರುವ ಸಾಮಾಜಿಕ ಬದುಕಿನಲ್ಲಿ ಸ್ತ್ರೀಶಕ್ತಿಯನ್ನು ಅತ್ಯಂತ ಸಮರ್ಪಕವಾಗಿ ಸದ್ಬಳಕೆ ಮಾಡಿಕೊಳ್ಳುವ ಅನಿವಾಯರತೆ ಇಂದಿನ ಸಮಾಜದ ಮುಂದಿದೆ. ಪ್ರಸಕ್ತ ಸನ್ನಿವೇಶದಲ್ಲಿ ಇದು ಅತ್ಯಂತ ಚಿಂತನಶೀಲ, ಸ್ವಾಗತಾರ್ಹ ವಿಚಾರವಾಗಿದೆ ಎಂದರೆ ತಪ್ಪಾಗಲಾರದು. ದೇಶದಲ್ಲಿ ಇರುವ ಮಾನವ ಸಂಪನ್ಮೂಲವನ್ನು ಪರಿಪೂರ್ಣವಾಗಿ ಸದ್ಬಳಕೆ ಮಾಡಿಕೊಂಡಾಗ ಮಾತ್ರ ದೇಶವನ್ನು ಅತ್ಯುನ್ನತ ಮಟ್ಟಕ್ಕೆ ಕೊಂಡೊಯ್ಯಲು ಸಾಧ್ಯ. ಈ ಹಿನ್ನಲೆಯಲ್ಲಿ ಸ್ತ್ರೀಸಬಲೀಕರಣದಂತಹ ಭಾವನಾತ್ಮಕ ಪರಿವರ್ತನೆಗೆ ಸಮಾಜದಲ್ಲಿ ಹೆಚ್ಚು ಆದ್ಯತೆ ನೀಡಬೇಕಾದ ಅನಿವಾರ್ಯತೆ ಇದೆ ಎಂದರೆ ತಪ್ಪಾಗಲಾರದು.

ಇಂತಹ ಭಾವನಾತ್ಮಕ ಪರಿವರ್ತನೆಯಲ್ಲಿ ಶಿಕ್ಷಣದಿಂದ ವಂಚಿತಳಾಗುತ್ತಲೇ ಬಂದಿರುವ ಸ್ತ್ರೀಗೆ ಮೂಲಭೂತವಾದ ಅಕ್ಷರ ಜ್ಞಾನವನ್ನು ಮೊದಲು ನೀಡಬೇಕಾದದ್ದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಇದಕ್ಕೆ ಜವಾಬ್ದಾರಿಯುತ ಸರ್ಕಾರಗಳು ಇಂತಹ ಅನುಪಯುಕ್ತ ಯೋಜನೆಗಳನ್ನು ತಜ್ಞರ ಸೂಕ್ತ ಸಲಹೆಗಳ ಆಧಾರದ ಮೇಲೆ ಅನುಷ್ಠಾನಗೊಳಿಸುವುದು ಅತ್ಯಂತ ಸೂಕ್ತ. ಗ್ರಾಮೀಣ ಪ್ರದೇಶದಲ್ಲಿ ಇರುವ ಅನಕ್ಷರಸ್ಥ ಮಹಿಳೆಯರನ್ನು ಗುರುತಿಸುವ ಕಾರ್ಯ ಅತ್ಯಂತ ಯೋಜನಬದ್ಧವಾಗಿಯೂ, ವೈಜ್ಞಾನಿಕವಾಗಿಯೂ ಇರಬೇಕಾಗುತ್ತದೆ. ಇಂತಹ ಸಾಕ್ಷರತಾ ಕಾರ್ಯಕ್ರಮಗಳನ್ನು ಕೇವಲ ದಾಖಲೆಗಾಗಿ ಜಾರಿಗೊಳಿಸದೆ ಸಮಾಜ ಉಪಯೋಗಿ ದೃಷ್ಠಿಯಿಂದ ಕೈಗೊಳ್ಳುವುದು ಒಳಿತು. ವಿಶೇಷವಾಗಿ ಮಹಿಳೆಯರು ಇಂತಹ ಸಾಕ್ಷರತಾ ಕಾರ್ಯಕ್ರಮಗಳ ಬಗ್ಗೆ ಆಸಕ್ತಿವಹಿಸಿ, ಅವುಗಳ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ಸಾಕ್ಷರರಾಗಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಸಶಕ್ತರಾಗಿ ದುಡಿಯುವಂತಾದಾಗ ಮಾತ್ರ ಸ್ತ್ರೀಸಬಲೀಕರಣದ ಭಾವನೆ ಎಲ್ಲೆಡೆ ಪಸರಿಸಲು ಸಾಧ್ಯವಿದೆ ಎಂದು ಹೇಳಬಹುದು.

**ಆಕರ ಗ್ರಂಥಗಳು**


- ಅಧಿಕೃತ ಜ್ಞಾಪನಾ ಪತ್ರ : ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ, ಲೋಕ ಶಿಕ್ಷಣ ನಿರ್ದೇಶನಾಲಯ, 6ನೇ ಕ್ರಾಸ್, ಬೆಂಗಳೂರು–03. ದಿನಾಂಕ 17–12–2009
- ಅಧಿಕೃತ ಜ್ಞಾಪನಾ ಪತ್ರ : ಆಯುಕ್ತರ ಕಛೇರಿ, ಲೋಕ ಶಿಕ್ಷಣ ಇಲಾಖೆ, 6ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು. 2005–06 ನೇ ಸಾಲಿನಿಂದ 2009–10 ರವರೆಗಿನ ಪತ್ರಗಳು.
- ಪ್ರಗತಿ ವರದಿಗಳು : ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮ ಯೋಜನೆಯ ಪ್ರಗತಿ ವರದಿಗಳು, ಶಿವಮೊಗ್ಗ ಜಿಲ್ಲೆ, 2006 ರಿಂದ 2010 ರವರೆಗೆ.
- Shah S. Y. : An Encyclopedia of Indian Adult Education, National Literacy Mission, Directorate of Adult Education, MHRD, Govt. of India, New Delhi-11.
- Varadaraju S. & Patil S. S. : Financial Investment in Literacy Programme through Students-Achievement Analysis National Seminar Paper, Vijaya Teacher's College, Bangalore, on 6th, 7th August 2010.
- Venkatesha T. : "Literacy Through Students - A Study" State Resource Center - Karnataka, (KSAEC) Old H.D. Kote Road, Mysore- 08.2007

# ಬಿಜಾಪೂರ ಆದಿಲ್ ಶಾಹಿಗಳ ಕಾಲದ ಕೆರೆ-ಬಾವಿಗಳ ನೀರಾವರಿ ವ್ಯವಸ್ಥೆ

## ಪ್ರಸ್ತಾವನೆ

ದಕ್ಷಿಣ ಭಾರತದಲ್ಲಿ ಬಿಜಾಪೂರ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಕ್ರಿ. ಶ. 1489 ರಿಂದ 1686ರ ವರೆಗೆ ಸುಮಾರು ಎರಡನೂರು ವರ್ಷಗಳ ಕಾಲ ಕರ್ನಾಟಕದಲ್ಲಿ ಆಡಳಿತ ಮಾಡಿದ ಆದಿಲ್‌ಶಾಹಿಗಳು ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ, ವಾಸ್ತು ಶಿಲ್ಪಕಲೆಯಲ್ಲಿ ಹಾಗೂ ನಿರಾವರಿ ವ್ಯವಸ್ಥೆಗೆ ತಮ್ಮದೇ ಆದ ಅಪಾರ ಕೊಡುಗೆಯನ್ನು ನೀಡಿರುತ್ತಾರೆ. ಇವರು ತಮ್ಮ ರಾಜಕೀಯ ಏಳು–ಬೀಳುಗಳ ನಡುವಿನಲ್ಲಿಯೂ ಕೂಡಾ ರಾಜ್ಯದ ಆರ್ಥಿಕ ವ್ಯವಸ್ಥೆ ಸುಭದ್ರವಾಗಿರುವಂತೆ ನೋಡಿಕೊಂಡರು. ಅದಕ್ಕಾಗಿ ನೀರಾವರಿ ವ್ಯವಸ್ಥೆಗೂ ಅವರು ನೀಡಿದ ಪ್ರಾಮುಖ್ಯತೆ ಅಸಾಧಾರಣವಾಗಿತ್ತೆಂಬುದನ್ನು ಅವರ ಕಾಲದ ನೀರಾವರಿ ಸೌಲಭ್ಯಗಳಿಂದ ತಿಳಿದುಬರುತ್ತದೆ.

ಯಾವುದೇ ಒಂದು ರಾಜ್ಯ ಆಡಳಿತಾತ್ಮಕವಾಗಿ ಸುಭದ್ರವಾಗಿರ ಬೇಕಾದರೆ ಆರ್ಥಿಕ ವ್ಯವಸ್ಥೆ ಭದ್ರವಾಗಿರಬೇಕು ಎಂಬ ಅಂಶವನ್ನು ಅರಿತುಕೊಂಡು ಆದಿಲ್‌ಶಾಹಿ ಅರಸರು, ಪ್ರಪಂಚದಲ್ಲೇ ಒಂದು ದೊಡ್ಡ ನಗರವೆಂದು ಹೆಸರಾದ ಬಿಜಾಪೂರ ರಾಜಧಾನಿಯಲ್ಲಿ ಮತ್ತು ನಾಡಿನ ಬೇರೆ ಕಡೆ ಕಲ್ಪಿಸಲಾದ ನೀರಾವರಿ ಸೌಲಭ್ಯಗಳು ಆಧುನಿಕರನ್ನು ಆಶ್ಚರ್ಯಗೊಳಿಸುತ್ತದೆ. ಬಿಜಾಪೂರ ನಗರದ ಪಶ್ಚಿಮ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಭೂಮಿಯ ಮಟ್ಟ ತೊಟ್ಟಿಲಾಕಾರದಲ್ಲಿ ಎತ್ತರವಾಗಿದ್ದದ್ದನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಬಿದ್ದ ಮಳೆಯ ನೀರಿನ ಒಂದು ಹನಿಯನ್ನೂ ಸಹ ಪೋಲಾಗದ ಹಾಗೆ ಸಂಗ್ರಹಿಸಿದ್ದಾರೆ. ಕೆರೆಯಿಂದ ಕೆರೆಗೆ, ಬಾವಿಯಿಂದ ಬಾವಿಗಳಿಗೆ, ಕಾರಂಜಿಗಳಿಗೆ ಅರಮನೆಯ ರಾಜ ಪರಿವಾರದವರ ಬಳಕೆಗಾಗಿ, ಈಜಾಡುವ ಕೊಳ್ಳ, ಬಾವಿಗಳಿಗೆ, ನಗರದ ಜನರಿಗೆ ಕುಡಿಯುವದಕ್ಕಾಗಿ ಸುತ್ತಮುತ್ತಲಿನ ತೋಟ, ಉದ್ಯಾನಗಳಿಗಾಗಿ, ರೈತರ ವ್ಯವಸಾಯಕ್ಕಾಗಿ ಮಣ್ಣಿನಿಂದ ತಯಾರಿಸಿದ ಪೈಪುಗಳ ಮೂಲಕ ಮತ್ತು ಭೂಮಿಯ ಒಳಗಡೆಯಿಂದ ಗುರುತ್ವಾಕರ್ಷಣೆಯ ಶಕ್ತಿಯ ಮೂಲಕ ಕಾಲುವೆಯ ಮುಖಾಂತರ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಿದ್ದರೆಂದು ಇತ್ತೀಚಿನ ಸಂಶೋಧನೆಗಳಿಂದ ಸ್ಪಷ್ಟವಾಗಿದೆ. ಈ ನೀರಾವರಿ ವ್ಯವಸ್ಥೆಯ ಕುರಿತು ಮೊದಲ ಬಾರಿಗೆ ಗಮನ ಹರಿಸಿದ ಬಾದಶಾಹ ಎಂದರೆ ಮೊದಲನೆಯ ಅಲಿ ಆದಿಲ್ ಶಾಹ ಎಂದು ಫೇರಿಸ್ತಾರವರು ತಮ್ಮ ವರದಿಯಲ್ಲಿ ಉಲ್ಲೇಖಿಸಿರುತ್ತಾರೆ.[1] ನಂತರದ ದಿನಗಳಲ್ಲಿ ಬಿಜಾಪೂರದ ಕೋಟೆಯನ್ನು ಕಟ್ಟಿದ ಕಿಶ್ವರಖಾನನೇ ಬಾದಶಾಹನ ಅಪೇಕ್ಷೆಯಂತೆ ಐದು ಕೋಸು ದೂರದಿಂದ ನಗರಕ್ಕೆ ಪೈಪುಗಳ ಮೂಲಕ ನಳದ ನೀರನ್ನು ತರಲು ಅಲ್ಲಲ್ಲಿ ಬಂಡೆಗಳನ್ನು ಕೊರೆದು ನೀರನ್ನು ತಂದು ಕೋಟೆಯ ಹತ್ತಿರ ಒಂದು ದೊಡ್ಡ ಹೌಜನ್ನು ಕಟ್ಟಿಸಿ, ಅದರಲ್ಲಿ ಸಂಗ್ರಹಿಸಿ ಅದನ್ನು ಸದಾಕಾಲ ತುಂಬಿರುವಂತೆ ನೋಡಿಕೊಂಡನೆಂದು ತಿಳಿದು ಬರುತ್ತದೆ. ಅದೇ ರೀತಿ ತೊರವಿಕೆರೆ, ಕಮತಗಿ ಕೆರೆ, ಅಫ್ಜಲಪೂರ ಕೆರೆ, ಬೆಗಂ ತಲಾಭ, ಚಾಂದಬಾವಡಿ ಇತ್ಯಾದಿ ನೂರಾರು ಬಾವಿಗಳ..... ಅಧ್ಯಯನಕ್ಕೆ ಆಧಾರಗಳಾಗಿವೆ.

## ಈವರೆಗಿನ ಅಧ್ಯಯನಗಳು

ಬಿಜಾಪೂರದ ಆದಿಲ್ ಶಾಹಿಗಳ ಮನೆತನದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿದಂತೆ Henry Covens (1916) Bijapur and its Architeetural Remains; Merklinger Elizabeth (1918) Indian Islamic Architecture The Deccan; Sher wani H. K. and P. M. Joshi (1973) History of the medeval deccan; Nazim M. (1936) Bijapur Inscriptions; Taylar Medows (1986) Avoble Queen; Nayeem M. A. (1974) External Relations of the Bijapur Kingdom and The Heritage of the Adilshahis of Bijapur; Abdul Gani Imartwale (2007) History of Bijapur subah; S. K. Joshi (2008-09) Water suply system in Bijapur ಕೃಷ್ಣ ಕೋಲಾರ ಕುಲಕರ್ಣಿ (2002), ಬಿಜಾಪೂರ ಆದಿಲ್‌ಶಾಹಿ, ಅಣ್ಣಿಗೇರಿ ಎ. ಎಂ. (1980) ಬಿಜಾಪೂರ ಶಿಲ್ಪಕಲಾ ವೈಭವ, ಕುಲಕರ್ಣಿ ಕೃಷ್ಣಾ ಕೋಲಾರ (1999) ಬುಸಾತಿನೆಸಲಾತಿನ, ಢವಳಗಿ ಸಂಗನಗೌಡ (2001) ಬಿಜಾಪೂರ ಒಂದನೆಯ ಅಲಿ ಆದಿಲ್ ಶಾಹನ ಜೀವನ ಮತ್ತು ಸಾಧನೆ, ಪಿಎಚ್.ಡಿ. ಗ್ರಂಥ, ತರಿಕೇರಿ ರಹಮತ್ (2001) ಕರ್ನಾಟಕದ ಸೂಫಿಗಳು, ಷೇಕ ಅಲಿ ಬಿ. (1997) ಸಂಪುಟ–4, ಕರ್ನಾಟಕ ಚರಿತ್ರೆ, ಬಡಿಗೇರ ವಾಸುದೇವ (2006) ಬಿಜಾಪೂರ ಜಿಲ್ಲೆಯ ದೇವಾಲಯಗಳು, ಇನ್ನು ಕೆಲವರು ಸಾಮಾಜಿಕ, ಆಡಳಿತ, ರಾಜಕೀಯ, ಆರ್ಥಿಕ ವಾಸ್ತುಶಿಲ್ಪ, ಗೋರಿಗಳ ಕುರಿತಂತೆ ಎಂ.ಫಿಲ್. ಪ್ರಬಂಧಗಳನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿರುತ್ತಾರೆ.

ಆದರೆ ಆದಿಲ್ ಶಾಹಿಗಳ ಕಾಲದ ನೀರಾವರಿ ವ್ಯವಸ್ಥೆ ಕುರಿತಂತೆ ನೇರವಾಗಿ ಈವರೆಗೂ ಯಾರೂ ಸಂಶೋಧನಾತ್ಮಕ ಅಧ್ಯಯನಗಳನ್ನು ಮಾಡಿರುವುದಿಲ್ಲವೆಂದು ತಿಳಿದುಬಂದಿರುತ್ತದೆ.

## ಆದಿಲ್ ಶಾಹಿಗಳ ಕಾಲದ ನೀರಾವರಿ ಮೂಲಗಳು

ಕೆರೆಗಳು, ಬಾವಿಗಳು, ಕಾಲುವೆಗಳು, ಹಳ್ಳಗಳು, ನದಿಗಳು ಮತ್ತು ಮಳೆಯ ನೀರಿನ ಬಳಕೆಗಳು ಇವರ ನೀರಾವರಿ ಸೌಲಭ್ಯಗಳ ಮೂಲಗಳಾಗಿವೆ. ಇವುಗಳಿಂದಲೇ ಕುಡಿಯಲು, ಸ್ನಾನಕ್ಕೆ, ಉದ್ಯಾನಗಳಿಗೆ, ತೋಟಗಳಿಗೆ, ಕೃಷಿಗಾಗಿ, ಪ್ರಾಣಿ ಪಕ್ಷಿಗಳಿಗಾಗಿ, ರಾಜಪರಿವಾರಕ್ಕೆ, ಸೈನಿಕರಿಗೆ, ಸಾಮ್ರಾಜ್ಯದ ರೈತರು ಮತ್ತು ಜನಸಾಮಾನ್ಯರಿಗಾಗಿ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಿದ್ದರೆಂಬ ಅಂಶಗಳು ಕಂಡುಬರುತ್ತವೆ.

## ಐತಿಹಾಸಿಕತೆ

ಶಿಲಾಯುಗದ ನಾಗರಿಕತೆಯಿಂದ ಬೆಳೆದು ಬಂದ ನೀರಾವರಿ ವ್ಯವಸ್ಥೆಯ ಪರಂಪರೆ, ಸಿಂಧುನಾಗರಿಕತೆ, ಜನರು, ಮೌರ್ಯರು, ಶಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಹೊಯ್ಸಳರು, ವಿಜಯನಗರದ

✍ ಶ್ರೀಮತಿ ಜಿ. ಗುಂಡೂರಾವ್, ಪಿಎಚ್. ಡಿ. ಸಂಶೋಧನ ವಿದ್ಯಾರ್ಥಿನಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕ.ವಿ.ವಿ. ಧಾರವಾಡ–3 ಮೊ.: 9591916576

ಅರಸರೂ, ದಕ್ಷಿಣಕ್ಕೆ ಅಧಿಕಾರಕ್ಕೆ ಬಂದ ಶಾಹಿ ಸುಲ್ತಾನರ ಕಾಲದಲ್ಲೂ ಅನೇಕ ರೀತಿಯ ಬದಲಾವಣೆಗಳ ಮೂಲಕ ಕೆರೆ, ಬಾವಿ, ಕಾಲುವೆಗಳ ನೀರಾವರಿ ವ್ಯವಸ್ಥೆ ಬೆಳೆದು ಬಂದ ಪ್ರಾಚೀನ ಪರಂಪರೆ ದೇಶದಲ್ಲಿ ಕಂಡುಬರುತ್ತದೆ. [2]

ಪ್ರಾಚೀನ ಪರಂಪರೆಯ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಬಿಜಾಪೂರ ಆದಿಲ್‌ಶಾಹಿಗಳ ಕಾಲದ ನೀರಾವರಿ ವ್ಯವಸ್ಥೆ ಯಾವ ರೀತಿಯಾಗಿತ್ತೆಂದು ತಿಳಿಯಬೇಕಾದರೆ, ನೀರಾವರಿಗಾಗಿ ಅವರು ಕಲ್ಪಿಸಲಾದ ವ್ಯವಸ್ಥೆ, ಬಳಕೆ, ನೀರು ಸರಬರಾಜು ವ್ಯವಸ್ಥೆ, ಅದರ ತಾಂತ್ರಿಕತೆ[3] ಇತ್ಯಾದಿ ಇತ್ಯಾದಿ ಹೊಸ ವಿಚಾರಗಳನ್ನು ಚರ್ಚಿಗೊಳಪಡಿಸುವುದೇ ಈ ಅಧ್ಯಯನದ ಉದ್ದೇಶವಾಗಿದೆ.

### ತೋರವೆಯ ಕೆರೆ ನೀರಾವರಿ ವ್ಯವಸ್ಥೆ

ಆದಿಲ್ ಶಾಹಿಗಳ ಕಾಲದ ಕೆರೆಗಳಲ್ಲಿ ತೋರವೆಯ ಕೆರೆ ನೀರಾವರಿ ಯೋಜನೆ ಅತ್ಯಂತ ಪ್ರಮುಖವಾಗಿ ಕಂಡುಬರುತ್ತದೆ. ವಿಜಾಪೂರ ನಗರದಿಂದ ಪಶ್ಚಿಮಕ್ಕೆ ಐದು ಕಿಲೋಮೀಟರು ದೂರದಲ್ಲಿ ಇರುವ ಹಳ್ಳಿಯೇ ತೊರವೆಹಳ್ಳಿ. ಆ ಹಳ್ಳಿಯ ಮೇಲ್ಭಾಗದಲ್ಲಿ ಒಂದುವರೆ ಕಿ. ಮೀ. ಅಂತರದಲ್ಲಿ ಮಳೆಯಿಂದ ಬಿದ್ದ ನೀರು ಹಾಗೂ ಹತ್ತಿರದಲ್ಲಿಯೇ ಹರಿಯುವ ನಾಲ್ಕಾರು ಚಿಕ್ಕ ಹಳ್ಳಗಳನ್ನು ಒಂದೆಡೆ ಕೂಡಿಸಲು ಅಲ್ಲಿಯ ಭೂಮಿಯನ್ನು ಕೊರೆದು ತೊರವೆಯ ಹತ್ತಿರಕ್ಕೆ ತಂದಿರುವುದು, ಅಲ್ಲಿಂದ ಭೂಗತವಾಗಿ ಕಾಲುವೆಗಳನ್ನು ಕೊಲೆರುದ ಅಲ್ಲಿಯ ನೀರನ್ನು ಅಫಜಲಪೂರದ ಟಕ್ಕೇದ ಹಳ್ಳಿಯವರೆಗೂ ತೆಗೆದುಕೊಂಡು ಹೋಗಿರುವುದು ಸಾಹಸದ ಮಾತಾಗಿದೆ. ಹೀಗೆ ಈ ಭೂಗತ ಕಾಲುವೆಗಳು ತೊರವೆಯ ಹಳ್ಳಿಯ ಬುಡದಲ್ಲೂ ಹಾದು ಹೋಗಿವೆ. ಅವುಗಳ ಮೂಲಕ ನೀರು ಅಫಜಲಪೂರದ ಹತ್ತಿರ ಕಟ್ಟಿದ ಕೆರೆಗೆ (ಜಲಾಶಯಕ್ಕೆ) ಅಥವಾ ಟಕ್ಕೆಗೆ ಹೋಗಿ ಸೇರುತ್ತಿತ್ತೆಂದು ತಿಳಿದುಬರುತ್ತದೆ.

ತೊರವೆಯ ಪಶ್ಚಿಮಕ್ಕೆ ಹತ್ತಿರದಲ್ಲಿಯೇ ಇರುವ ಇನ್ನೊಂದು ಸಣ್ಣ ಮಣ್ಣಿನ ಹೊಂಡ ಅಥವಾ ಬಾವಿಯೇ 'ಸುರಂಗ ಬಾವಡಿ' ಇದರಿಂದ ತೊರವೆಯ ಜಲಾಶಯಕ್ಕೆ ನೀರು ಪೂರೈಸುವ ಒಂದು ಪೂರಕ ವ್ಯವಸ್ಥೆಯಾಗಿತ್ತು, ಇಲ್ಲಿ ಕೆಲವು ಶಕ್ತಿಯುತವಾದ ನೀರಿನ ಸೆಲೆಗಳು ಇವೆ. ಅಲ್ಲದೇ ಅನೇಕ ಚಿಕ್ಕಪುಟ್ಟ ಹಳ್ಳ ಝರಿಗಳನ್ನು ಇದಕ್ಕೆ ಜೋಡಿಸಲಾಗಿದೆ. ಈ ಭಾವಿಯಿಂದ ಭೂಮಿಯ ಒಳಗಡೆಯ ಕಾಲುವೆ ಮೂಲಕ ನೀರನ್ನು ತೊರವೆಯ ಕೆರೆಗೆ ಕೂಡಿಸಿರುವುದು ಕಂಡುಬರುತ್ತದೆ. ಅದೇ ರೀತಿ ಅಫಜಲಪೂರ ಕೆರೆಗೂ ಸಹ ಇದೇ ಮಾದರಿಯಲ್ಲಿ ಎತ್ತರವಾದ ದಿಬ್ಬಗಳಿಂದ ಆವರಿಸಿದ ಪ್ರದೇಶದ ಬಾವಿಯಿಂದ ನೀರನ್ನು ಪೂರೈಸಲಾಗುತ್ತಿತ್ತೆಂದು ಇತ್ತೀಚಿನ ಸಂಶೋಧನೆಯಿಂದ ಖಚಿತವಾಗಿದೆ.[4]

ಅಫಜಲಪೂರ ಜಲಾಶಯದ ಕುರುಹುಗಳಿಂದ ಇದೊಂದು ದೊಡ್ಡ ಪ್ರಮಾಣದ ಜಲಾಶಯವಾಗಿದ್ದಿತೆಂದು ಗುರುತಿಸಲಾಗಿದೆ. ಅದಕ್ಕೆ ಇಂದಿನ ದಿನಗಳಲ್ಲಿ ''ರಾಮಲಿಂಗ ಕೆರೆ'' ಎಂದು ಕರೆಯುವರು. ಈ ಹೆಸರಿನ ಹಿಂದಿರುವ ಇತಿಹಾಸ ಸ್ಪಷ್ಟವಾಗಿಲ್ಲ, ಒಂದೆರಡು ಕಡೆ ಬಿರುಕು ಬಿಟ್ಟು ಒಡೆದು ಹೋದ ಆಣೆಕಟ್ಟಿನ ಎತ್ತರ ಸು. 60 ಅಡಿ ಎಂದು ಅಂದಾಜಿಸಲಾಗಿದೆ. ಈ ಮುಖ್ಯ ಜಲಾಶಯದ ಕೆಳಗಡೆ ಇನ್ನೊಂದು ಸಣ್ಣ ಜಲಾಶಯ ಇದೆ. ಅದು ದೊಡ್ಡ ಜಲಾಶಯದಿಂದ ತುಂಬಿ ಹೆಚ್ಚಾದ ನೀರನ್ನು ಶೇಖರಿಸಿ, ಹತ್ತಿರದ ಸ್ಥಳಗಳಿಗೆ ಪೂರೈಸುವ ಜಲಾಶಯವಾಗಿತ್ತು, ಮುಖ್ಯ ಜಲಾಶಯದಿಂದ ಬರುವ ಭೂಗತ ಕಾಲುವೆಯ ಅಳತೆ ಪ್ರಾರಂಭದಲ್ಲಿ ಎಂಟು ಅಡಿ ಅಗಲ, ಆರು ಅಡಿ ಆಳ ಇರುವ ಈ ಕಾಲುವೆಯ ನಿರ್ಮಾಣ ತುಂಬಾ ಕಠಿಣವಾದ ವ್ಯವಸ್ಥೆಯಾಗಿತ್ತೆಂದು ತಿಳಿದುಬರುತ್ತದೆ. ಕೆಲವೊಂದು ಕಡೆಗೆ ಭೂಮಿಯ ಆಳದಲ್ಲಿ 60 ಅಡಿಗಳಷ್ಟು ಕೆಳಗೆ ಬಂಡೆಗಲ್ಲುಗಳನ್ನು ಕೊರೆದದ್ದನ್ನು ಕಾಣಬಹುದು. ಅಲ್ಲಲ್ಲಿ ಇಟ್ಟಿಗೆಗಳನ್ನು ಬಳಸಿ ಕಟ್ಟಿರುವರಾದರೂ, ಸಾಮಾನ್ಯವಾಗಿ ಕಲ್ಲಿನ ಕಾಲುವೆಯ ದಾರಿಯೇ ಅಧಿಕವಾಗಿದೆ. ನೀರಿನ ಸಂಪರ್ಕವನ್ನು ಇಟ್ಟುಕೊಳ್ಳಲು ದಾರಿಗುಂಟ 120 ಅಡಿಗಳ ಅಂತರದಲ್ಲಿ ಕಿಂಡಿಗಳನ್ನು ಬಿಟ್ಟಿರುವುದು ವಿಶೇಷವಾಗಿದೆ. ಭೂಮಿಯ ಒಳಗಡೆಯಿಂದ ಬಂದ ಕಾಲುವೆಗಳು ಬಿಜಾಪೂರದ ಇಬ್ರಾಹಿಂ ರೋಜಾದವರೆಗೆ ಬಂದು, ಅಲ್ಲಿಂದ ಮಕ್ಕಾ ಗೇಟ್ ಮುಖಾಂತರ ನಗರದ ಜೋಡಗುಮ್ಮಟದವರೆಗೆ ತೆಗೆದುಕೊಂಡು ಹೋಗಿರುವುದನ್ನು ಗಮನಿಸಲಾಗಿದೆ. ಅಲ್ಲಿಂದ ಆ ದಾರಿ ಕವಲೊಡೆದು ಒಂದು ದಕ್ಷಿಣ ದಿಕ್ಕಿನಲ್ಲಿ ಕಟ್ಟಿದ ಹಳೆಯ ಜಾಮಿಯಾ ಮಸೀದಿಯವರೆಗೂ, ಇನ್ನೊಂದು ಪೂರ್ವ ದಿಕ್ಕಿನಲ್ಲಿ ಅರಕಿಲ್ಲೆಯವರೆಗೂ ಬಂದಿದೆ. ಈ ಕಾಲುವೆಗಳಿಂದಲೇ ಅರಕಿಲ್ಲೆಯ ಕಂದಕ ಮತ್ತು ಅರಮನೆಗಳಿಗೆ ನೀರು ಸರಬರಾಜು ಆಗುತ್ತಿತ್ತೆನ್ನಲಾಗಿದೆ. ಹಳೆಯ ಜಾಮಿಯಾ ಮಸೀದಿ ದಾರಿಯಲ್ಲಿ ಕಿಂಡಿಗಳು ಕಂಡರೆ ಈಗಲೂ ಆ ದಾರಿಯಲ್ಲಿ ನೀರು ಹರಿಯುವುದನ್ನು ಕಂಡ ಅಲ್ಲಿಯ ಸ್ಥಳಿಯ ಜನರು ತಿಳಿಸುತ್ತಾರೆ. ಕೆಲವು ಕಡೆಗೆ ಕಿಂಡಿಗಳು ದೊಡ್ಡದಾಗಿದ್ದು, ಮೆಟ್ಟಿಲುಗಳಿವೆ ಎಂದು ಹೇಳುತ್ತಾರೆ. ಬಹುಶಃ ಇದು ಕಲ್ಲಿನ ಮೇಲಿನ ಕಾಲುವೆ.

ಬಿಜಾಪೂರದ ಪಶ್ಚಿಮಕ್ಕೆ ಸುಮಾರು 5 ಕಿ.ಮೀ. ದೂರದಲ್ಲಿರುವ ತೋರ್ವಿಯಿಂದ ನೀರು ಹಾಯಿಸಲು ಮಾಡಿದ ಕಾಲುವೆ ತಾಂತ್ರಿಕ ನೈಪುಣ್ಯತೆಯ ಒಂದು ದೊಡ್ಡ ಸಾಧನೆಯಾಗಿದೆ. ಕಲ್ಲಿನಿಂದ ನಿರ್ಮಿತವಾಗಿರುವ ಭಾರಿ ಗಾತ್ರದ ಆಣೆಕಟ್ಟು ಸುಮಾರು 60 ಅಡಿ ಎತ್ತರವಿದ್ದು, ಏರಿಯಲ್ಲಿ ವಿಲಕ್ಷಣವಾದ ಗೂಡುಗಳಿವೆ. ಮೇಲ್ಮಟ್ಟದಲ್ಲಿ ನೀರು ಹಾಯಿಸುವ ನಾಲೆ, ಮುಖ್ಯ ಸರೋವರದ ಮುಖ ಭಾಗದಲ್ಲಿ 8×6 ಅಡಿ ಅಳತೆಯ, ಕೆಲವು ಸ್ಥಳದಲ್ಲಿ ಮೆಲ್ಮೈಗಿಂತ 60 ಅಡಿಗಳಷ್ಟು ಆಳದಲ್ಲಿ ಬಂಡೆಯಲ್ಲಿ ಕೊರೆದು ಮಾಡಲಾದ ನಾಲೆ, ಲಂಬವಾದ ವಾಯು ದಂಡಗಳು ಮತ್ತು ನಗರಕ್ಕೆ ಸಾಕಾಗುವಷ್ಟು ನೀರು ಪೂರೈಸುವ ಪರಿಣಾಮಕಾರಿ ವ್ಯವಸ್ಥೆ ಇವೆಲ್ಲವೂ ನಾಲ್ಕು ಶತಮಾನಗಳ ಹಿಂದೆ, ಯಾಂತ್ರಿಕ ಶಕ್ತಿ ಮತ್ತು ಉಪಕರಣಗಳ ಜ್ಞಾನವಿರದಿದ್ದ ಮಧ್ಯಯುಗದ ಆ ದಿನಗಳಲ್ಲಿ ಗಳಿಸಿದ ತಾಂತ್ರಿಕ ನೈಪುಣ್ಯತೆಗೆ ದ್ಯೋತಕವಾಗಿವೆ. ಇದು ತೋರ್ವಿಯಿಂದ ಇಬ್ರಾಹಿಂ ರೋಜಾದವರೆಗೆ ವಿಸ್ತರಿಸಿದೆ. ಈ ಕಾಲುವೆ ಈಗ ಅನೇಕ ಕಡೆ ಕುಸಿದು ಹಾಳಾಗಿದೆ.

### ನೀರು ನಿಯಂತ್ರಣ ಗೋಪುರ

ದಟ್ಟವಾದ ಕಟ್ಟಡವನ್ನು ನೀರಿನ ಮೇಲ್ಮೈಯಿಂದ 15 ರಿಂದ 50 ಅಡಿಗಳ ಕೆಳಗೆ ನಿರ್ಮಿಸಲಾಗಿತ್ತು, ಇದರ ಹಾದಿಯಲ್ಲಿ ಅಗತ್ಯಬಿದ್ದಾಗ ನೀರಿನ ಒತ್ತಡದಿಂದ ಕೊಳವೆಗಳನ್ನು ಒಡೆಯುವುದನ್ನು ತಪ್ಪಿಸಲು ಅಲ್ಲಲ್ಲಿ ಚೌಕಾಕಾರದ ಗೋಪುರಗಳನ್ನು ನಿರ್ಮಿಸಲಾಗಿತ್ತು, ಕಾಲುವೆಗಳಲ್ಲಿ ಇಳಿದು ಸಂಗ್ರಹಿತ ಕೊಳೆ–ಕೆಸರುಗಳನ್ನು ಹೊರ ತೆಗೆಯಲು ಮಾಡಿರಬೇಕೆನಿಸುತ್ತದೆ. ತೊರವೆಯ ಕಾಲುವೆಗಳಿಂದ ಅಲ್ಲಲ್ಲಿ ಕಟ್ಟಿದ ಅನೇಕ ಬಾವಿಗಳಲ್ಲೂ ನೀರು ಸಂಗ್ರಹವಾಗುತ್ತಿತ್ತು, ಅವುಗಳಲ್ಲಿ ಅತೀ ದೊಡ್ಡ ಬಾವಿಯೆಂದರೆ ಚಾಂದಬಾವಡಿ ಬಾವಿ ಪ್ರಮುಖವಾಗಿದೆ.

### ಬೇಗಂ ತಲಾಬ ಕೆರೆ ನೀರಾವರಿ ಸೌಲಭ್ಯ

ತೊರವೆಯ ನೀರು ಪೂರೈಕೆ ಮತ್ತು ದೊಡ್ಡ ದೊಡ್ಡ ಬಾವಿಗಳಿಂದ ಬಿಜಾಪೂರ ನಗರಕ್ಕೆ ನೀರು ಪೂರೈಕೆಯು ಸಾಧ್ಯವಾಗಿರಲಿಕ್ಕಿಲ್ಲ, ಆ ಸಂದರ್ಭದ ಸಮಸ್ಯೆನ್ನು ಅರಿತುಕೊಂಡ ಮಹಮ್ಮದ ಆದಿಲ್ ಶಹನು ಮತ್ತೊಂದು ಯೋಜನೆಯನ್ನು ಹಾಕಿಕೊಂಡಿರುವಂತೆ ಕಾಣುತ್ತದೆ. ಅದು ಹೊರಗಿನಿಂದ ನೀರು ತರುವ ಮತ್ತೊಂದು ಬೃಹತ್ ನೀರಾವರಿ

ಯೋಜನೆಯಾಗಿದೆ ಎಂದು ಕಾಣುತ್ತದೆ. ಅಜ್ಜ ಪಶ್ಚಿಮ ದಿಕ್ಕಿನಿಂದ ನಗರಕ್ಕೆ ನೀರನ್ನು ತಂದರೆ, ಮೊಮ್ಮಗ ದಕ್ಷಿಣ ದಿಕ್ಕಿನತ್ತ ತಿರುಗಿದನು. ನಗರದಿಂದ ದಕ್ಷಿಣಕ್ಕೆ ಸುಮಾರು ಎರಡು ಕಿ.ಮೀ. ಅಂತರದಲ್ಲಿ ಬೇಗಂ ತಲಾಬ ಎಂಬ ಕೆರೆಯನ್ನು ಕಟ್ಟಿದನು. ಇದಕ್ಕೆ ತನ್ನ ರಾಣಿ ಬೇಗಂಳ ಹೆಸರಿಟ್ಟನೆಂದು ತಿಳಿದುಬರುತ್ತದೆ. ಇಲ್ಲಿ ಕಾಲುವೆಗಳ ಬದಲು ಮಣ್ಣಿನ ಕೊಳವೆಗಳ ಮುಖಾಂತರ ನಗರಕ್ಕೆ ನೀರು ತಂದಿರುವರೆಂದು ಇತ್ತೀಚಿನ ಉತ್ಖನನದ ವರದಿಯಾಗಿದೆ.[5] ಈ ಕೊಳವೆಗಳು ಚಿಕ್ಕವಾಗಿದ್ದು, ಒಂದನ್ನು ಇನ್ನೊಂದಕ್ಕೆ ಜೋಡಿಸಲು ಒತ್ತಿ ಬರುವ ಕಂಠಗಳನ್ನು ಮಾಡಿದ್ದಾರೆ. ಕೋಟೆಯ ಒಳಗಡೆಗೆ ನೀರು ಬಂದ ಬಳಿಕ ಅದನ್ನು ಸಂಗ್ರಹಿಸಲು ಎತ್ತರದ ಚೌಕೋನಾಕಾರದ ನೀರು ಗೋಪುರಗಳನ್ನು ಕಟ್ಟಿದರು. ಅವುಗಳಿಗೆ ಸ್ಥಳೀಯವಾಗಿ ಗಂಜ ಎನ್ನುತ್ತಾರೆ. ಮಣ್ಣಿನ ಕೊಳವೆಗಳು ಕೆಸರಿನಿಂದ ತುಂಬಿ ನೀರಿನ ಪ್ರವಾಹ ಕುಂಠಿತವಾಗಬಾರದೆಂಬುದು ಇದರ ಕಾರಣವಾಗಿಬೇಕೆಂದು ಕಾಣಿಸುತ್ತದೆ. ಅಲ್ಲದೆ ಸಂಗ್ರಹಿತ ನೀರನ್ನು ಕೋಟೆಯ ಒಳಗಡೆಗೆ ತಮಗೆ ಬೇಕಾದಲ್ಲಿ ಸರಬರಾಜು ಮಾಡಲು ಸಾಧ್ಯವಾಗಿತ್ತು, ಈ ನೀರ ಗೋಪುರಗಳಲ್ಲಿ ನೀರಿನ ಪ್ರವೇಶವು ಕೆಳಭಾಗದಲ್ಲಿದ್ದು ವಿವರಣೆಯು 4 ರಿಂದ 6 ಅಡಿ ಮೇಲ್ಭಾಗದಲ್ಲಿದೆ. ಅದರಿಂದಾಗಿ ಕೊಳವೆಗಳ ಮುಖಾಂತರ ಬಂದ ಕೊಲೆ ಕೆಸರು ತಳದಲ್ಲಿ ಉಳಿದು ತಿಳಿ ನೀರು ವಿತರಣೆಯಾಗುತ್ತಿತ್ತು, ಒಂದೊಂದು ಗೋಪುರಕ್ಕೆ ನಾಲ್ಕು, ಹತ್ತು, ಹದಿನೈದು ವಿತರಣಾ ಕೊಳವೆಗಳಿದ್ದರೆ, ಅರಮನೆಯ ಆವರಣದಲ್ಲಿದ್ದ ನೀರು ಗೋಪುರಕ್ಕೆ ಎಪ್ಪತ್ತು ಕೊಳವೆ ಮಾರ್ಗಗಳಿವೆ. ಅವುಗಳು ಅರಮನೆಯ ವಿವಿಧ ಕಟ್ಟಡ ವಿಭಾಗಗಳಿಗೆ ನೀರನ್ನು ಪೂರೈಸುತ್ತಿದ್ದವು. ಈ ವೀರ ಗೋಪುರಗಳು 25 ರಿಂದ 40 ಅಡಿ ಎತ್ತರ, 12 ರಿಂದ 16 ಅಡಿ ಉದ್ದಗಲವಾಗಿದ್ದು, ಒಳ-ಹೊರ ಬದಿಗಳಿಂದ ಹತ್ತಿ ಇಳಿಯಲು ಮೆಟ್ಟಿಲುಗಳ ವ್ಯವಸ್ಥೆಯನ್ನು ಮಾಡಿದ್ದಾರೆ. ಅದರಿಂದಾಗಿ ಆಗಾಗ ಅದನ್ನು ಸ್ವಚ್ಛ ಮಾಡಲು ಅನುಕೂಲಕ್ಕಾಗಿರಬೇಕೆಂದು ಕಾಣಿಸುತ್ತದೆ.

ಈ ಕೆರೆಯಿಂದಾಗಿ ಬಿಜಾಪೂರ ನಗರದ ತುಂಬೆಲ್ಲ ಉದ್ಯಾನಗಳು, ಕಾರಂಜಿಗಳೆದ್ದವು. ನಗರದ ದಕ್ಷಿಣ ಭಾಗಕ್ಕಿರುವ ಈ ಕೆರೆ ಬೆಟ್ಟಗಳೆಡೆಯಲ್ಲಿ ಎತ್ತರ ಪ್ರದೇಶದಲ್ಲಿದ್ದು, ನಗರ ಪ್ರದೇಶದಲ್ಲಿ 30 ರಿಂದ 40 ಅಡಿಗಳವರೆಗೆ ಒತ್ತಡ ನೀಡಬಲ್ಲುದಾಗಿದೆ. ಕಲ್ಲಿನಲ್ಲಿ ಕೊರೆದು ಅಥವಾ ಇಟ್ಟಿಗೆಯಲ್ಲಿ ಇಟ್ಟಿರುವ ಕಾಲುವೆಗಳನ್ನು ಹೊಂದಿರುವ ತೊರ್ವಿ ಜಲಾಶಯ ದಂತಲ್ಲದೆ, ಬೇಗಂ ಕೆರೆಯಿಂದ ನೀರನ್ನು 15 ಅಂಗುಲ ವ್ಯಾಸದ ಮಣ್ಣಿನ ಕೊಳವೆಗಳ ಮೂಲಕ ಹಾಯಿಸಿದ್ದು ಕಂಡುಬರುತ್ತದೆ. ಈ ಕೊಳವೆಗಳು 8×6 ಅಡಿಗಳ ಹೊರ ಕವಚ ಹೊಂದಿದ್ದು, 15 ರಿಂದ 50 ಅಡಿಗಳ ಆಳದಲ್ಲಿವೆ. ಈ ಕೊಳವೆಗಳು ಒತ್ತಡದಿಂದ ಒಡೆಯುವುದನ್ನು ತಡೆಗಟ್ಟಲು ಚೌಕಾಕಾರದ ಗೋಪುರಗಳನ್ನು ನಿರ್ಮಿಸಲಾಗಿದೆ. ಅಫ್ಜಲಖಾನನ ಮೇಲ್ವಿಚಾರಣೆಯಲ್ಲಿ ಈ ಕೆರೆಯನ್ನು 1651 ರಿಂದ 1653ರ ಅವಧಿಯಲ್ಲಿ ಕಟ್ಟಿಸಲಾಯಿತೆನ್ನ ಲಾಗಿದೆ.[6] ಈಗ ಕೆರೆಯ ಅಂಗಳವೆಲ್ಲ ಹೂಳಿನಿಂದ ತುಂಬಿದೆ. ಜೋರದ ಮಳೆ ಬಂದ ಸಂದರ್ಭವನ್ನು ಹೊರತುಪಡಿಸಿ, ಉಳಿದಂತೆ ಕೆರೆಪೂರ್ಣ ಒಣಗಿರುತ್ತದೆ. ಕೆರೆಯ ಅಂಗಳವನ್ನು ಬೇಸಾಯಕ್ಕೆ ಬಳಸುತ್ತಿದ್ದಾರೆ. ಈ ಕೆರೆಯ ನೀರು ನಿಯಂತ್ರಕಗಳು ಸಹ ಮಣ್ಣಿನಲ್ಲಿ ಮುಚ್ಚಿ ಹೋಗಿವೆ. ಈ ಗೋಪುರಗಳ ಹಾದಿಯಲ್ಲಿ ಅಲ್ಲಲ್ಲಿ ನೀರು ಹರಿಸುತ್ತಿದ್ದು, ಕಾಲುವೆಗಳನ್ನು ಈಗಲೂ ಕಾಣಬಹುದು. ಸಾರ್ವಜನಿಕರು ಮತ್ತು ಸಂಬಂಧ ಪಟ್ಟ ಇಲಾಖೆಯ ಉದಾಸೀನತೆಯಿಲ್ಲದಿದ್ದಲ್ಲಿ ಈ ಕೆರೆಯನ್ನು ಸದ್ಯ ಬಿಜಾಪೂರಕ್ಕೆ ನೀರೊದಗಿಸುವ ಆಸರೆಯಾಗಿ ಬಳಕೆಮಾಡಿಕೊಳ್ಳ ಬಹುದಾಗಿತ್ತೆಂದು ಸ್ಥಳೀಯ ಜನರ ಆಶಯವಾಗಿದೆ.

### ರಾಮಲಿಂಗ ಕೆರೆ

ಬಿಜಾಪೂರದ ಪಶ್ಚಿಮಕ್ಕಿರುವ ದರ್ಗಾ ಹಳ್ಳಿಯ ಪಶ್ಚಿಮದಲ್ಲಿದೆ ಈ ರಾಮಲಿಂಗ ಕೆರೆ. ಬಿಜಾಪೂರದಿಂದ ಲೋಹಗಾಂವ ಕಡೆಗಿನ ರಸ್ತೆಯ ಎಡಭಾಗಕ್ಕಿರುವ ಈ ಕೆರೆಯನ್ನು ಮುಖ್ಯವಾಗಿ ಬೇಸಾಯಕ್ಕೆ ಮತ್ತು ಕುಡಿಯುವ ನೀರು ಸರಬರಾಜಿಗೆ ಬಳಸಲಾಗುತ್ತಿತ್ತು, ಕೆರೆಯ ಉತ್ತರ ಭಾಗಕ್ಕಿರುವ ಏರಿ ಎರಡಂತಸ್ತಿನ ಬಾರಿಯಾದ ಕಲ್ಲಿನ ಕಟ್ಟಡ. ಕೆರೆಯಿಂದ ಮೊದಲಾಗುವ ನಾಲೆಗಳು ನಿಯಂತ್ರಣಕಗಳನ್ನು ಈಗಲೂ ಕಾಣಬಹುದಾಗಿದೆ. ಆಣೆಕಟ್ಟು 1419 ಅಡಿಗಳಷ್ಟು ಉದ್ದವಿದ್ದು, ಪಾದದುದ್ದಕ್ಕೂ ಮೇಲ್ಭಾಗದಲ್ಲಿ 15 ಅಡಿಗಳಷ್ಟು ಅಗಲವಿದೆ. ಆಣೆಕಟ್ಟಿನ ಎರಡು ಸ್ಥಳಗಳಿಂದ ನೀರು ಹೊರಹೋಗುತ್ತದೆ. ಆಣೆಕಟ್ಟಿಗೆ ಲಂಬವಾಗಿ ಉತ್ತರ ದಿಕ್ಕಿಗೆ ಹರಿದಿರುವ ಕಲ್ಲಿನ ಕಾಲುವೆಗಳ ಇಕ್ಕೆಲಗಳಲ್ಲಿ 8 ಅಡಿಗಳಷ್ಟು ಜಾಗ ಬಿಟ್ಟಿರುವುದನ್ನು ಗಮನಿಸಬಹುದು. ಕಾಲುವೆ ಉದ್ದಕ್ಕೂ ಸಣ್ಣದೊಡ್ಡ ಸಂಗ್ರಹಾರಗಳನ್ನು ಕಾಣಬಹುದು.

ಈ ಕೆರೆ ಸದ್ಯ ಪೂರ್ಣ ಬತ್ತಿದೆ. ಇದರ ಅಂಗಳವನ್ನು ಖಾಸಗಿ ವ್ಯಕ್ತಿಗಳು ಬೇಸಾಯಕ್ಕೆ ಬಳಸುತ್ತಿದ್ದಾರೆ. ಆದರೆ ಆಣೆಕಟ್ಟು, ಕಾಲುವೆಗಳು, ಸಂಗ್ರಹಾರಕಗಳು ಈಗಲೂ ಸುಸ್ಥಿತಿಯಲ್ಲಿವೆ. ಆಣೆಕಟ್ಟಿನ ಉತ್ತರ-ಪೂರ್ವ (ಈಶಾನ್ಯ)ದಲ್ಲಿ ಆದಿಲ್ ಶಾಹಿಯವರಿಂದ ನಿರ್ಮಿತವಾದ ಮೂರು ದೊಡ್ಡ ಬಾವಿಗಳಿದ್ದು, ಖಾಸಗಿ ವ್ಯಕ್ತಿಗಳು ಬೇಸಾಯಕ್ಕೆ ಬಳಸುತ್ತಿದ್ದಾರೆ. ಈ ಮೊದಲು ಕಳೆ ಬೆಳೆದಿದ್ದ ಒಣ ಭೂಮಿಯಲ್ಲೂ ಖಾಸಗಿಯವರು ಬೇಸಾಯ ಮಾಡುತ್ತಿದ್ದಾರೆ. ನೀರು ಸಂಗ್ರಹಾರಗಳನ್ನು ಖಾಸಗಿಯವರು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ.

ಇಲ್ಲಿರುವ ನೀರಿನ ಮೂಲ, ಆಣೆಕಟ್ಟು, ನೀರಾವರಿಗಾಗಿ ಮಾಡಿ ನಾಲೆಗಳು, ಸಂಗ್ರಹಾರಗಳು ಹಾಗೂ ಸುಂದರವಾದ ಅವಳಿ ಕಟ್ಟಡಗಳಿರುವ ಹಸನ ಗುಲ್ಜಾರ್ ಗೋರಿ ಮತ್ತು ಹಿನ್ನಲೆಯಲ್ಲಿ ದರ್ಗಾದೃಶ್ಯವಿರುವ ಈ ಇಡೀ ಪ್ರದೇಶದಲ್ಲಿ ಉದ್ಯಾನವನ ನಿರ್ಮಿಸಿ, ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಬಹುದಾಗಿತ್ತೆಂದು ಡಾ. ಎಚ್. ಜಿ. ದಡ್ಡಿಯವರು ಅಭಿಪ್ರಾಯಪಡುತ್ತಾರೆ.[7]

### ಕಮಟಗಿ ಕೆರೆ

ಬಿಜಾಪೂರ ಸಿಂದಗಿ ರಸ್ತೆಯಲ್ಲಿ ಬಿಜಾಪೂರದಿಂದ 16 ಕಿ.ಮೀ. ದೂರದಲ್ಲಿರುವ ಕೆರೆಯೇ ಕಮಟಗಿಕೆರೆ. ಇದು ಆದಿಲ್ ಶಾಹಿರಾಜರ ಮಂತ್ರಿ-ಮಹೋದಯರ, ರಾಣಿಯರ ಮೋಜಿನ ತಾಣವಾಗಿತ್ತು, ಈ ಊರಿನ ಬಳಿ ಒಂದು ಕೆರೆಯಿದ್ದು, ಹತ್ತಿರದಲ್ಲಿ ಕಟ್ಟಡಗಳ ಅವಶೇಷಗಳು ಮತ್ತು ನೀರು ನಿಂತಿರುವ ತಾಣಗಳಿವೆ. ಅವು ನೀರಿನ ತೊಟ್ಟಿಗಳು, ಕಾರಂಜಿಗಳು ಮತ್ತು ಬುಗ್ಗೆಗಳ ಜಾಲವಾಗಿದ್ದು, ಒಂದು ವಿಶೇಷ ರೀತಿಯ ನಿರ್ಮಾಣವಾಗಿದೆ. ಈ ಕೆರೆಯ ನೀರನ್ನು ಬೇಸಾಯಕ್ಕೆ ಹರಿಸಲಾಗುತ್ತಿತ್ತೆನ್ನ ಲಾಗಿದೆ.

ಪ್ರಸ್ತುತ ಕೆರೆಯಲ್ಲಿ ನಿಯಂತ್ರಕ ಗೋಪುರ ಮತ್ತು ತೂಬು ಕಂಡುಬರುತ್ತಿದ್ದು, ತೀರ ಇತ್ತೀಚೆಗೆ ಮಹಲುಗಳ ಸುತ್ತ ನೀರು ಹರಿಯುತ್ತಿತ್ತೆಂದು ಹೇಳುತ್ತಾರೆ. ಈ ಕೆರೆಯ ಮಧ್ಯ ಒಂದು ಸಣ್ಣ ಮಹಲಿದೆ. ನೀರಿನ ಶೇಖರಣೆಗಾಗಿ ಕಟ್ಟಿದ್ದ ಎತ್ತರವಾದ ಪಾತರಗಿತ್ತಿ ಮಹಲ ಈಗ ಕುಸಿಯುತ್ತಿದೆ. ಈ ಕೆರೆ ನೀರನ್ನು ಸುತ್ತಲಿನ ಜಮೀನಿನ ಸಾಗುವಳಿಗಾಗಿ ಬಳಸಲಾಗುತ್ತಿದೆ. ಕೆರೆಯ ಎತ್ತರ ಭಾಗದಲ್ಲಿ ಸಣ್ಣ ಮಹಲುಗಳ ಅವಶೇಷಗಳಿವೆ. ಇವುಗಳ ಸುತ್ತಲ ಭೂಮಿಯಲ್ಲಿ ಬೇಸಾಯ ಮಾಡುವರ ಹುಲ್ಲು ಮೆದೆ ಸಂಗ್ರಹಾರಗಳಾಗಿ ಉಪಯೋಗಿಸಲ್ಪಡುತ್ತಿವೆ. ಮುಖ್ಯವಾದ ಕಟ್ಟಡದ ಸುತ್ತ ಒಂದು ಸಣ್ಣ ಉದ್ಯಾನವನ್ನು

ನಿರ್ಮಿಸಲಾಗಿದೆ.[8] ಕೆರೆಯ ಮಧ್ಯದಲ್ಲಿರುವ ಮಹಲಿಗೆ ಹೋಗಿ ಬರಲು ದೋಣಿ ಸೌಲಭ್ಯ ಒದಗಿಸಿ, ಪ್ರವಾಸಿ ತಾಣವನ್ನಾಗಿ ಮಾಡಲು ಅವಕಾಶವಿದೆ. ಒಟ್ಟಾರೆ ಹೇಳುವುದಾದರೆ ಕಮಟಗಿ ಕೆರೆ ಏನಿಲ್ಲವಾದರೂ ಸಾವಿರಾರು ಎಕರೆ ಭೂ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿತ್ತೆಂದು ಕಮಟಗಿ ಗ್ರಾಮದ ಹಿರಿಯ ಅಭಿಮತವಾಗಿದೆ.

### ಅಫ್ಜಲಪೂರ ಕೆರೆ

ಇದು ಕೂಡಾ ಆದಿಲ್ ಶಾಹಿಗಳ ಕಾಲದ ಪ್ರಮುಖ ಕೆರೆಯಾಗಿದ್ದು, ತೊರ್ವಿಯಿಂದ ಇಲ್ಲಿಗೆ ಭೂಮಿಯ ಒಳಗಡೆ ಕಾಲುವೆ ಮೂಲಕ ನೀರು ಸರಬರಾಜು ಮಾಡಲಾಗುತ್ತಿತ್ತು ಅಲ್ಲಿಂದ ಆ ಭಾಗದ ಜನರಿಗೆ ಕುಡಿಯಲು ರೈತರ ಜಮೀನಿನ ಬೇಸಾಯಕ್ಕೆ ಬಳಸಲಾಗುತ್ತಿತ್ತೆಂದು ಡಾ. ಕೃಷ್ಣಕೋಲಾರ ಕುಲಕರ್ಣಿಯವರು ಮತ್ತು ಡಾ. ದಡ್ಡಿಯವರು ತಮ್ಮ ಕೃತಿಗಳಲ್ಲಿ ಉಲ್ಲೇಖಿಸುತ್ತಾರೆ. ಈ ವಿಷಯ ಬಿಜಾಪೂರ ಜಿಲ್ಲಾ ಗ್ಯಾಜಟೇಯರ್ ಮತ್ತು ಗುಲಬರ್ಗಾ ಜಿಲ್ಲಾ ಗ್ಯಾಜಟೇಯರ್‌ಗಳಲ್ಲಿ ಪ್ರಸ್ತಾಪಿಸಲಾಗಿದೆ.

ಹಾಗೆಯೇ ಭೂತನಾಳಕೆರೆ, ಮುದೋಳ ಕೆರೆ, ಬೀಳಗಿ ಕೆರೆ, ಮಮದಾಪೂರ ಕೆರೆ, ತೇರದಾಳ ಕೆರೆ, ಸೊಲ್ಲಾಪೂರ ಕೆರೆ, ಹುಕ್ಕೇರಿಯಲ್ಲಿರುವ ಕೆರೆ, ಚಿಕ್ಕೋಡಿ ಕೆರೆ, ಹುನಗುಂದ ಕೆರೆ, ಲೋಕಾಪುರ ಕೆರೆ, ಗುಳೇದಗುಡ್ಡದ ಕೆರೆ, ಯತ್ನಾಳ ಕೆರೆ, ಮಚ್ಛಲಿ ಖಾದ್ರಾ ಕೆರೆ, ಆಲಮೇಲ ಕೆರೆ, ಯಕ್ಸಂಬಾ ಕೆರೆ, ಬಾಗಲಕೋಟದ ಕೆರೆ, ನಿಂಬಾಳ ಕೆರೆ, ಹೂವಿನ ಹಿಪ್ಪರಗಿ ಕೆರೆ, ಮಿರ್ಜಾನ ಹತ್ತಿರದ ಕೆರೆ, ರಾಯಚೂರ ಕೆರೆ ಮುಂತಾದವುಗಳು ಈ ನಾಡಿನ ಇಂದಿನ ಉತ್ತರ ಕರ್ನಾಟಕದ ಬಹು ಭಾಗಗಳಲ್ಲಿ, ಅಂದರೆ ಆದಿಲ್ ಶಾಹಿಗಳ ದಟ್ಟವಾದ ಆಳ್ವಿಕೆಯ ಪ್ರದೇಶಗಳಲ್ಲಿ ಮುಖ್ಯವಾಗಿವೆ ಇವರ ಕಾಲದ ಕೆರೆಗಳು ಕಂಡುಬರುವವು. ಇನ್ನು ಕೆಲವು ಕೆರೆಗಳು ನಂತರ ಕಾಲದ ಸಂಸ್ಥಾನಿಕರ ಆಳ್ವಿಕೆಯ ಕಾಲದಲ್ಲಿ ತಮ್ಮ ಅರಮನೆಯ ಅನುಕೂಲಕ್ಕಾಗಿ ಬಳಸಿಕೊಂಡು ಜೀರ್ಣೋದ್ಧಾರಗೊಂಡಿರುವ ಅಂಶಗಳನ್ನು ಡಾ. ಎಸ್. ಕೆ. ಜೋಶಿಯವರು ಗುರ್ತಿಸಿರುತ್ತಾರೆ.[9] ಅವುಗಳ ಬಗ್ಗೆ ಇನ್ನೂ ವೈಜ್ಞಾನಿಕವಾಗಿ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

### ಮಮದಾಪೂರ ಕೆರೆ

ಬಿಜಾಪೂರದಿಂದ ದಕ್ಷಿಣ, ಪಶ್ಚಿಮಕ್ಕೆ ಸುಮಾರು 40 ಕಿ.ಮೀ. ದೂರದಲ್ಲಿರುವ ಮಮದಾಪೂರ ಎಂಬ ಹೋಬಳಿ ಗ್ರಾಮ ಐತಿಹಾಸಿಕ ತಾಣವಾಗಿದೆ. ಆದಿಲ್‌ಷಾಹಿ ವಂಶದ 6ನೇ ಸುಲ್ತಾನನಾಗಿದ್ದ ಮಹಮ್ಮದ್ (1626–1656)ನ ಮಹಮ್ಮದ ಆದಿಲ್ ಶಾಹನ ರಾಜ್ಯ ಮುಂಬಯಿಂದ ದಕ್ಷಿಣದ ತಂಜಾವೂರಿನವರೆಗೆ, ಗೋವೆಯಿಂದ ಕರ್ನೂಲ್‌ವರೆಗೆ ಹಬ್ಬಿತ್ತು ಆತ ಒಂದು ಸಲ ತನ್ನ ರಾಜ್ಯ ಕೊಂಕಣ ಸೀಮೆಯಲ್ಲಿ ಹೋಗಿ ಬಂದ ಮೇಲೆ ಅಂಥದೆ ಒಂದು ಸೃಷ್ಟಿಯನ್ನು ತನ್ನ ರಾಜಧಾನಿ ಪಕ್ಕದಲ್ಲಿ ಮಾಡಲು ತನ್ನ ಪ್ರಧಾನ ಮಂತ್ರಿಯಾಗಿದ್ದ ಮುರಹರಿ ಪಂಥದ ಬ್ರಾಹ್ಮಣನಾಗಿದ್ದ ಜಗದ್ ಮುರಾರಿಗೆ ಈ ಊರಿನಲ್ಲಿ ಕೆರೆಯನ್ನು ನಿರ್ಮಿಸಿ, ಕೃಷಿ ಭೂಮಿಯನ್ನು ನೀರಾವರಿಗೆ ಒಳಪಡಿಸಲು ತಿಳಿಸಿದನು. ಆ ಪ್ರಕಾರ ಕೆರೆಯನ್ನು ಕಟ್ಟಿಸಿ, ಕೊಂಕಣದಿಂದ ತಂದ ಮರಗಿಡಗಳು, ಭತ್ತ, ಬಾಳಿ, ತೆಂಗು ಮತ್ತು ಸಸ್ಯಗಳನ್ನು ಈ ಪ್ರದೇಶದಲ್ಲಿ ಮೊದಲಬಾರಿಗೆ ಪರಿಚಯಿಸಿದನೆಂದು ಪ್ರತೀತಿ ಇದೆ.[10] ಪ್ರತೀ ಬೇಸಿಗೆಯಲ್ಲಿ ಮಹಮ್ಮದ್ ಆದಿಲ್ ಶಾಹಿ ಮಹಾಬಲೇಶ್ವರ (ಮಹಾರಾಷ್ಟ್ರ ರಾಜ್ಯ)ಕ್ಕೆ ಹೋಗುವುದನ್ನು ತಪ್ಪಿಸಲು ಈ ಊರು ನಿರ್ಮಾಣ ಮಾಡಿ, ವಾಡೆಗಳನ್ನು ಕಟ್ಟಿಸಿದನೆಂದು ಸ್ಥಳೀಯರು ಹೇಳುತ್ತಾರೆ. ಸುಮಾರು 1633ರ ವೇಳೆಗೆ ಒಂದು ದೊಡ್ಡ ಕೆರೆ ಇನ್ನೊಂದು ಸಣ್ಣ ಕೆರೆ ಕಟ್ಟಿಸಿದನು. ಅಲ್ಲದೇ ಈ ಪ್ರದೇಶವನ್ನು ಕ್ರಮೇಣ ತನ್ನ ಹತೋಟಿಗೆ ತೆಗೆದುಕೊಂಡು, ಅಂತಾಪೂರ, ಬಾರಿಗೆ, ಖಾಸ್‌ಬಗ್ ಮತ್ತು ಚೌಡಾಪುರಗಳನ್ನು ವಶಪಡಿಸಿಕೊಂಡನು. ಹೀಗೆ ಹೊಸ ಊರಿಗೆ ತನ್ನ ಹೆಸರನ್ನೇ ಇಟ್ಟು ಮಮದಾಪೂರವೆಂದು ಕರೆದನು.

ಇಲ್ಲಿ ಅನೇಕ ತೋಟಗಳಿವೆ, ಇಲ್ಲಿಯ ಪುರತನವಾದ ನೆಲಬಾವಿಯಿಂದ ನೀರು ಸರಬರಾಜು ಆಗುತ್ತಿತ್ತು, ಮುಂಬಯಿ ಪ್ರಾಂಥದಲ್ಲಿಯೇ ಕಲ್ಲು ಮಣ್ಣನ್ನು ಬಳಸಿ, ಗಟ್ಟಿಮುಟ್ಟಾಗಿ ಕಟ್ಟಿಸಿದ ಅತಿ ದೊಡ್ಡಕೆರೆಯಾಗಿದೆ. 864 ಎಕರೆಗಳಷ್ಟು ವಿಸ್ತಾರದಲ್ಲಿ ನೀರು ನಿಲ್ಲುತ್ತಿತ್ತು, ಆಣೆಕಟ್ಟಿನ ಉದ್ದ 2662 ಅಡಿಗಳಷ್ಟಿದೆ. ಎತ್ತರ 28 ಅಡಿಗಳಷ್ಟಿದೆ. ಸಣ್ಣ ಕೆರೆಯು 428 ಎಕರೆಯಷ್ಟು ಸ್ಥಳದಲ್ಲಿ ನೀರು ಸಂಗ್ರಹವಾಗುತ್ತಿತ್ತು ಆಣೆಕಟ್ಟಿನ ಉದ್ದ 11800 ಅಡಿಗಳಷ್ಟಿದೆ. ಎತ್ತರ.... ಅಡಿಗಳಷ್ಟಿದೆ. ಎರಡು ಕೆರೆಗಳಿಂದ ಸುಮಾರು 674 ಎಕರೆ ಭೂಮಿ ನೀರಾವರಿಯಾಗುತ್ತಿತ್ತು, ಉಭಯ ಕೆರೆಗಳ ದಂಡೆಯ ಮೇಲೆ ಪರ್ಶಿಯನ್ ಶಾಸನವಿದ್ದು, ಇದು ಕೆರೆಯನ್ನು ಕಟ್ಟಿಸಿದ ಬಗ್ಗೆ ತಿಳಿಸುತ್ತದೆ.

### ಬಾವಿಗಳು

ಆದಿಲ್ ಶಾಹಿಗಳ ಕಾಲದ ಪ್ರಮುಖ ಬಾವಿಗಳು ಬಿಜಾಪೂರ ನಗರದಲ್ಲಿರುವ ತಾಜ ಬಾವಡಿ, ಚಾಂದ ಬಾವಡಿ, ಹಿಲಾಲ ಬಾವಡಿ, ಕಮತಗಿ ಬಾವಿ, ಭೂತನಾಳ ಬಾವಿ, ಗುಂಡಾ ಬಾವಡಿ, ಬುಟ್ಟಾ ಬಾವಡಿ, ಜಾಮೀ ಮಸಿದಿ ಬಾವಡಿ, ಮಸಬಾ ಬಾವಡಿ, ನಾಡಿನ ಬೇರೆ ಬೇರೆ ಗ್ರಾಮಗಳಾದ ಕನಕಗಿರಿ ಬಾವಿ, ಇಜೇರಿ ಬಾವಿ, ನಿಪ್ಪಾಣಿ, ರಾಯಬಾಗ, ಚಿಕ್ಕೋಡಿ, ಮುದೋಳ, ಜಮಖಂಡಿ, ತೆರಳದಾಳ, ಬೀಳಗಿ, ಅಫ್ಜಲಪೂರ, ಇಂಡಿ, ಮಿಜಾರನ, ಗುಳೆದ ಗುಡ್ಡ, ಕನಕಗಿರಿ, ಬಂಕಾಪೂರ, ಸಿಗ್ಗಾವ, ಚಡಚಣ, ಆಲಮೇಲ, ಸೊಪ್ಪಾಪೂರ, ಕೆಂಬಾವಿ, ಮನಗೊಳಿ, ಸವಣೂರ, ದೇವರ ಹಿಪ್ಪರಗಿ, ಹುನಗುಂದ, ಬಾಗಲಕೋಟೆ, ಬಾದಾಮಿ, ಲೋಕಾಪೂರ, ರಾಮದುರ್ಗ, ಅಥಣಿ, ಕನಕಗಿರಿ, ಕೊಪ್ಪಳ, ಹದರಿ, ಮುಂತಾಗಿ ನಾಡಿನಾದ್ಯಂತ ಬಿಜಾಪೂರ ಆದಿಲ್ ಶಾಹಿಗಳ ಸಾಮ್ರಾಜ್ಯದಲ್ಲಿ ಹೊಕ್ಕು ತುಂಬುವ ಬಾವಿಗಳು ಕಂಡುಬರುವವು. ಈ ಬಾವಿಗಳಿಂದಲೂ ಸಹ ಬೇಸಾಯಕ್ಕೂ, ಕುಡಿಯಲು ನೀರು ಬಳೆಸಲಾಗುತ್ತಿತ್ತೆಂದು ತಿಳಿದುಬರುತ್ತದೆ. ಹುಕ್ಕೇರಿ, ಬಂಕಾಪೂರ, ಮಿರ್ಜಾನ, ಬಿಜಾಪೂರ, ಚಿಕ್ಕೋಡಿ, ಕಮತಗಿ, ಮಮದಾಪೂರ, ತೊರ್ವಿ, ಬೀಳಗಿ, ಕೊಪ್ಪಳದಂತ ಪ್ರಮುಖ ಬಾವಿಗಳ ಬಗ್ಗೆ ಶಾಸನಗಳಂತಹ ದಾಖಲೆಗಳಲ್ಲಿ ಸಾಹಿತ್ಯದಲ್ಲಿ ಉಲ್ಲೇಖಗಳು ಕಂಡುಬರುವವು.[11] ಆದಿಲ್‌ಶಾಹಿಗಳು ಉದ್ಯಾನಗಳಿಗಾಗಿ, ಕಾರಂಜಿಗಾಗಿ, ತೋಟಗಳಿಗಾಗಿ ಕುಡಿಯಲು ಬಳಸಲು, ಪ್ರಾಣಿಗಳಿಗಾಗಿ ಹೆಚ್ಚಾಗಿ ಈ ಬಾವಿಗಳನ್ನು ಬಳಸಿಕೊಂಡಂತೆ ಕಾಣುತ್ತದೆ.

### ಭೋಗವಸ್ತುವಾಗಿ ನೀರು

ಬಿಜಾಪೂರದ ಆದಿಲ್‌ಶಾಹಿಗಳಿಗೆ ನೀರು ಕೇವಲ ಅವಶ್ಯಕ ಹಾಗೂ ಕಂದಕಗಳಲ್ಲಿ ಸಂರಕ್ಷಣೆಗಾಗಿ ಮಾತ್ರ ಇರಲಿಲ್ಲ, ಅದು ಭೋಗ ವಸ್ತುವಾಗಿ ಬಳಕೆಯಾಗುತ್ತಿತ್ತೆಂದು ತಿಳಿದುಬರುತ್ತದೆ. ಬಿಜಾಪೂರದಂತಹ ಉಷ್ಣಪ್ರದೇಶದಲ್ಲಿ ಮುಸಲ್ಮಾನ ಬಾದಶಹರು, ಸರದಾರರು, ಸೇನಾಪತಿಗಳು, ಸುಬೇದಾರರು ತಿಂಗಳೂಗಟ್ಟಲೆ ಕದನಗಳಲ್ಲಿ ಕಾದಾಡಿ ಬಂದ ಮೇಲೆ ತಂಪು ನೀರಿನಲ್ಲಿ ಬಿದ್ದುಕೊಳ್ಳುವುದು ಸಹಜವಾಗಿತ್ತು, ಇವರು ಐಷಾರಾಮದ ಭೋಗ ಜೀವನಕ್ಕೆ ಕೂಡ ಇಲ್ಲಿ ನೀರು ಬಹುಮುಖ್ಯವಾಗಿತ್ತು, ತಮ್ಮ ಭವ್ಯ ಅರಮನೆಗಳ ಆವರಣದಲ್ಲಿ ನೀರಿನ ಕೊಳಗಳನ್ನೇ ಕಟ್ಟಿಸಿದ್ದರು. ಸುತ್ತಮುತ್ತಲು ಕೈತೋಟಗಳನ್ನೇ ಬಳಸಿದ್ದರು. ತೊಟ್ಟಿಯ ಒಳ ಹೊರಗೆ ಅಪ್ಪಳಿಸಿಬರುವ ಆ ನೀರು ಕಾಲುವೆಗಳು ಇನ್ನಷ್ಟು ಸುಂದರವಾಗಿ ಕಾಣಲು ಅವುಗಳನ್ನು ವೃತ್ತಾಕಾರದಲ್ಲಿ ತ್ರಿಕೋನ, ಚೌಕೋನ, ಷಟ್ಕೋನ ಹಾಗೂ

ಜಿಗ್ಸ್‌ಜಾಗ್ ಮಾದರಿಯಲ್ಲಿ ಕಡಿದು, ಕೆಲವೊಮ್ಮೆ ಚಲ್ಲಾಪಿಲ್ಲಿಯಾಗಿ ಹರಿದುಬಿಡುತ್ತಿದ್ದರು. ಅವುಗಳಲ್ಲಿ ಪುಟ್ಟ ಮೀನುಗಳು, ನೀರು ಒಮ್ಮೆ ಭೋರ್ಗರೆಯುತ್ತ ಇನ್ನೊಮ್ಮೆ ಧಾರೆಯಾಗಿ ರಭಸದಿಂದ ಮುನ್ನುಗ್ಗುವಾಗ, ಮತ್ತೊಮ್ಮೆ ಎತ್ತರದಲ್ಲಿ ಜಿಗಿಯುತ್ತಿರುವಾಗಿ ಮೀನುಗಳು ಮುತ್ತಿನಂತೆ ಹೊಳೆಯುತ್ತ ಚಿಮ್ಮುತ್ತಿರುವಾಗ ನಕ್ಷತ್ರಗಳಂತೆ ಕಾಣುವುದನ್ನು ಊಹಿಸಿಯೇ ತಿಳಿದುಕೊಳ್ಳಬೇಕು. ಮನೆಯಲ್ಲಿ ವಾತಾನುಕೂಲವನ್ನು ಸೃಷ್ಟಿಸಲು ಮನೆಯ ನೆಲದಡಿಯಲ್ಲಿ ಗೋಡೆಗಳ ಮಧ್ಯ ಹಾಗೂ ಮೇಲ್ಮಾಳಿಗೆಯ ಎರಡು ಪದರುಗಳ ಮಧ್ಯ ನೀರ್ಗೊಳವೆಗಳನ್ನು ಹಾಕಿ ನೀರನ್ನು ಹರಿಸುತ್ತಿದ್ದರು. ಇಂತಹ ಹಲವಾರು ಕಟ್ಟಡಗಳನ್ನು ಇಂದಿಗೂ ಕಾಣಬಹುದು. ಸ್ನಾನಗೃಹಗಳು, ಕೊಳಗಳು, ಕಾರಂಜಿಗಳು, ತೋಟಗಳು, ಉದ್ಯಾನಗಳು ಸಾಮಾನ್ಯಾಗಿ ಎಲ್ಲೆಡೆ ಮಾಡಿಕೊಂಡಿದ್ದರು. ಇವರ ಸಾಮ್ರಾಜ್ಯದಲ್ಲಿ ಸುಮಾರು 300ಕ್ಕಿಂತಲೂ ಹೆಚ್ಚು ಬಾವಿಗಳು ಬಿಜಾಪೂರ ನಗರದಲ್ಲಿದ್ದರೆ ಉಳಿದೆಡೆ 500ಕ್ಕಿಂತ ಹೆಚ್ಚು ಬಾವಿಗಳಿದ್ದ ಬಗ್ಗೆ ವಿದ್ವಾಂಸರು ಅಂದಾಜಿಸಿರುತ್ತಾರೆ. ರಾಜ್ಯದ ಬೇರೆ ಬೇರೆ ಪ್ರಾಂತಗಳನ್ನು ಗೆದ್ದು ತಮ್ಮ ನೆಲೆಯನ್ನು ಸ್ಥಾಪಿಸಿದ ಗ್ರಾಮಗಳಲ್ಲಿ ಅನೇಕ ಬಾವಿಗಳನ್ನು ತೋಡಿಸಿದ್ದಾರೆ. ಪ್ರಮುಖವಾಗಿ ಬೀಳಗಿ ಬಾವಿ, ಹುಕ್ಕೇರಿ ಬಾವಿ, ಕಮತಗಿ ಬಾವಿ, ಕೊಪ್ಪಳ ಬಾವಿ, ಬಂಕಾಪೂರ ಬಾವಿ, ಮಿರ್ಜಾನ ಬಾವಿ, ಜಮಖಂಡಿ, ತೇರದಾಳ, ಸೊಲ್ಲಾಪೂರ ಬಾವಿ, ಅಲೀಖಾನ ಬಾವಡಿ, ಅಂಧೇರಿ ಬಾವಡಿ, ಶಾಹಾಪೂರ ಬಾವಿ, ಮನಗೂಳಿ ಬಾವಿ, ಹದ್ರಿ ಬಾವಿ, ಅಪ್ಜಲಪೂರ ಬಾವಿ, ವಲಸ ಬಾವಡಿ, ಮುಕ್ರಿ ಬಾವಡಿ, ಮುಬಾರಕ ಖಾನ ಬಾವಡಿ, ಹಾಸೀಮ ಷೇರ ದರ್ಗಾ ಬಾವಡಿ, ಸೋನಾರ ಬಾವಡಿ, ಮುದ್ನೊಳ ಬಾವಿ ಮುಂತಾದವುಗಳು ನಾಡಿನಾದ್ಯಂತ ಹಾಳು ಬಿದ್ದ ಸ್ಥಿತಿಯಲ್ಲಿ ಕಂಡುಬರುತ್ತವೆ.

## ಉದ್ಯಾನಗಳು

ದಾಖಲೆಯನ್ನಾಧರಿಸಿ ನೋಡಲಾಗಿ, ಬಿಜಾಪೂರ ನಗರದ ಸುತ್ತ ನಾಲ್ಕು ದಿಕ್ಕುಗಳಲ್ಲಿ ಸುಮಾರು 25 ಕಿಲೋಮೀಟರು ಸುತ್ತಳತೆಯ ಉಪನಗರಗಳು ಅಫಜಲ್‌ಪೂರ, ಅಲ್ಲಾಪುರ, ಆಗಾಪುರ, ಇಬ್ರಾಹಿಂಪುರ, ಏಕಟಾಪುರ, ಐನಾಪೂರ, ಖಲೇಜಾಪೂರ, ಖುದಾನಪುರ, ಪಾಚ್ಛಾಪುರ, ಫಕರಾಬಾದ್, ಫತೇಪುರ, ಬಮ್ಮನಹಳ್ಳಿ, ರಂಭಪುರ, ಶಹಾಪೂರ ಇತ್ಯಾದಿ ಉಪನಗರಗಳಿದ್ದು, ಇಲ್ಲೆಲ್ಲ ಆದಿಲ್‌ಶಾಹಿಗಳು, ಸರದಾರರು, ಸೇನಾಪತಿಗಳು, ಶ್ರೇಷ್ಠಿಗಳು ತಮಗಾಗಿ ಸುಂದರವಾದ ಮಹಲುಗಳನ್ನು, ಉದ್ಯಾನಗಳನ್ನು ಕಟ್ಟಿಸಿಕೊಂಡಿದ್ದರು. ಅದೆ ರೀತಿ ಬೀಳಗಿ[12] ಜಮಖಂಡಿ, ತೇರದಾಳ, ಬಾಗಲಕೋಟ, ಬಾದಾಮಿ, ಹುಕ್ಕೇರಿ, ಚಿಕ್ಕೋಡಿ, ಬಂಕಾಪುರ, ರಾಯಚೂರ, ಕೊಪ್ಪಳ, ಮುದೋಳ, ಸೊಲ್ಲಾಪೂರ, ಇಂಡಿ ಮುಂತಾದ ಕಡೆಗೂ ಉದ್ಯಾನಗಳು ಇದ್ದ ಬಗ್ಗೆ ಉಲ್ಲೇಖಿಸಲಾಗಿದೆ.[13]

## ಬೆಳೆಗಳು

ಕೃಷಿ ವ್ಯವಸ್ಥೆ ಆದಿಲ್‌ಶಾಹಿಗಳ ಸರಕಾರಕ್ಕಿದ್ದ ಬೆನ್ನೆಲುಬು ಆಗಿತ್ತು, ವಿವಿಧ ಬಗೆಯ ಭೂಮಿಯಲ್ಲಿ ಒಣ ಬೇಸಾಯ ಹಾಗೂ ನೀರಾವರಿ ಪದ್ಧತಿಗೆ ಆದ್ಯತೆ ಕೊಟ್ಟಿದ್ದರು. ಇವರ ಕಾಲದ ಭೂಮಿ ಜಹಗೀರು ಭೂಮಿ ಮತ್ತು ಹಿಂದು ನಾಯಕರ ಭೂಮಿ ಎಂದು ವರ್ಗೀಕರಣವಾಡಿದ್ದರು. ವಿಶೇಷವಾಗಿ ವೃಕ್ಷಭೂಮಿ ಧಾರ್ಮಿಕ ಕ್ರಿಯೆಗಾಗಿ ಬಿಟ್ಟುಕೊಡಲಾಗುತ್ತಿತ್ತು, ಲಿಂಗಾಯತರು, ಕುರುಬರು, ಕಬ್ಬಂಗರು, ಲಂಬಾಣಿಗರು, ಮುಸ್ಲಿಂರು, ಮಾಂಗರು, ಮರಾಠರು, ವಡ್ಡರು, ಬ್ರಾಹ್ಮಣರು ಮುಂತಾದ ಜನಾಂಗದವರು ಹೊಲಗಳಲ್ಲಿ ಕೃಷಿಯನ್ನು ಮಾಡುತ್ತಿದ್ದರು.[14]

ಆದಿಲ್‌ಶಾಹಿಗಳ ಆಳ್ವಿಕೆಯ ಗ್ರಾಮೀಣ ಅರ್ಥ ವ್ಯವಸ್ಥೆಯಲ್ಲಿ ಕೃಷಿಗೆ ಸಂಬಂಧಿಸಿದಂತೆ ಅವರ ಕಾಲದ ರೈತರು ಉತ್ಪಾದಿಸಿದ ಬೆಳೆಗಳ ವೈವಿಧ್ಯತೆ, ಕೃಷಿಪದ್ಧತಿ, ಕೂಲಿ, ನೀರಾವರಿ ಸೌಲಭ್ಯಗಳು, ಅರಣ್ಯ ಸಂಪತ್ತು, ತೋಟದ ಬೆಳೆಗಳು ಇತ್ಯಾದಿಯಾಗಿ ವಿಂಗಡಿಸಿ ನೋಡಬಹುದಾಗಿದೆ.

ನೀರಾವರಿಗಾಗಿ ದನಗಳ ಗೊಬ್ಬರ ಬಳಕೆಯಾಗುತ್ತಿತ್ತು, ಭೂಮಿ ಉಳುಮೆಗೆ ಹಸುಗಳನ್ನು ಬಳಸುತ್ತಿದ್ದರು. ಬಾವಿಗಳಿಂದ ನೀರನ್ನು ಎತ್ತಲು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸರಕುಗಳನ್ನು ಸಾಗಿಸಲು, ಬೆಳೆಯನ್ನು ಒಕ್ಕಲುತನ ಮಾಡಲು ದನಕರುಗಳನ್ನು ಬಳಸುತ್ತಿದ್ದರು. ಕಬ್ಬು, ಭತ್ತ ಬಾಳೆ, ದ್ರಾಕ್ಷಿ, ನಿಂಬೆ, ತೆಂಗು, ಅಡಕೆ, ಏಲಕ್ಕಿ, ಮೆಣಸು, ತೊಗರಿ, ಎಳ್ಳು, ಶೇಂಗಾ, ಜೋಳ ಬರಗಾ, ರಾಗಿ, ಇತ್ಯಾದಿ ಹಣ್ಣು ಹಂಪಲ, ತರಕಾರಿ, ಏಕದಳ, ದ್ವಿದಳ ಬೆಳೆಗಳನ್ನು, ಗಿಡಮೂಲಿಕೆಗಳನ್ನು ಬೆಳೆಯುತ್ತಿದ್ದರು.[15]

## ಉಪಸಂಹಾರ

ಪುರಾತನ ಕಾಲದಿಂದಲೂ ಬೆಳೆದು ಬಂದ ನೀರಾವರಿ ವ್ಯವಸ್ಥೆ ಸಿಂಧುಕೊಳ್ಳದ ನಾಗರೀಕತೆಯಲ್ಲಿ ಸಾಕಷ್ಟು ಪ್ರಗತಿಯನ್ನು ಕಂಡಿರುವುದು ಅಲ್ಲಿಯ ಉತ್ಖನನ ಆಧಾರಗಳಿಂದ ತಿಳಿದುಬಂದಿರುತ್ತದೆ. ಮೌರ್ಯರ ಕಾಲದಲ್ಲಿ ಸುದರ್ಶನ ಕೆರೆಗೆ ದೊಡ್ಡ ಪ್ರಮಾಣ ಆಣೆಕಟ್ಟು ಕಟ್ಟಿಸಿ, ಬರಗಾಲ ಪದ್ಧತಿಯನ್ನು ಎದುರಿಸಿದ ಇತಿಹಾಸ ಶಾಸನದಿಂದ ತಿಳಿಯುತ್ತೇವೆ. ನಂತರ ದಕ್ಷಿಣ ಭಾರತದ ಕರ್ನಾಟಕದಲ್ಲಿ ಮೌರ್ಯರ ಸಾಮಂತರಾಗಿ ಬಂದ ಶಾತವಾಹನರು ಅನೇಕ ಕೆರೆಗಳನ್ನು ಕಟ್ಟಿಸಿ, ನೀರಾವರಿ ಸೌಲಭ್ಯ ಕಲ್ಪಿಸಿದ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಾಗಿದೆ. ಅದೇ ರೀತಿ ಕದಂಬರು, ಗಂಗರು, ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ರಾಷ್ಟ್ರಕೂಟರು, ವಿಜಯನಗರದ ಅರಸರು ಸಾಕಷ್ಟು ಕೆರೆ, ಬಾವಿಗಳನ್ನು ಕಟ್ಟಿಸಿ, ಈ ನಾಡಿನ ಕೃಷಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿರುತ್ತಾರೆ. ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಕಾಲಕ್ಕೆ ದಕ್ಷಿಣದಲ್ಲಿ ಕ್ರಿ. ಶ. 1480ರಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಆದಿಲ್‌ಶಾಹಿಗಳು 1686 ರವರೆಗೆ ಆಳ್ವಿಕೆ ಮಾಡಿದರು. ಇವರು ತಮ್ಮ ಅಧಿಕಾರದ ಭದ್ರತೆಗಾಗಿ, ವಿಸ್ತರಣೆಗಾಗಿ ಹೆಚ್ಚು ಕಾಲ ವಿಜಯನಗರದ ಅರಸರೊಂದಿಗೆ ಹೋರಾಟ ಮಾಡಬೇಕಾಯಿತು. ತಮ್ಮ ಎರಡನೂರು ವರ್ಷಗಳ ಆಳ್ವಿಕೆಯ ಕಾಲದಲ್ಲಿ ಆಡಳಿತಾತ್ಮಕವಾಗಿ, ಸಾಂಸ್ಕೃತಿಕವಾಗಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ. ಆರ್ಥಿಕ ವ್ಯವಸ್ಥೆಯಲ್ಲಿ ಬಹಳಷ್ಟು ಸುಧಾರಣೆಗಳು, ಹೊಸ ನೀತಿಗಳು ಜಾರಿಗೆ ಬಾರದಿದ್ದರೂ, ನೀರಾವರಿ ವ್ಯವಸ್ಥೆಯಲ್ಲಿ ವಿಶೇಷ ತಾಂತ್ರಿಕ ವ್ಯವಸ್ಥೆಯನ್ನು ಬಳಸಿಕೊಂಡು ಇಂದಿನ ವೈಜ್ಞಾನಿಕತೆಯನ್ನು ಮೀರಿಸುವ ನಿಟ್ಟಿನಲ್ಲಿ ತಮ್ಮ ರಾಜಧಾನಿಗಳನ್ನು ಕಲ್ಪಿಸಿದ್ದರೆಂದು ತಿಳಿದು ಬರುತ್ತದೆ. ಇಂದಿಗೂ ಬಿಜಾಪೂರ ನಗರದಲ್ಲಿ ಮತ್ತು ಸುತ್ತಮುತ್ತಲಿನ 50 ಕಿ.ಮೀ. ವ್ಯಾಪ್ತಿಯಲ್ಲಿ ಹಾಗೂ ಇವರ ಆಡಳಿತದ ಉಪಕೇಂದ್ರಗಳಲ್ಲಿ ಬಾವಿಗಳು, ಕೆರೆಗಳು ಇಂದಿಗೂ ಕಂಡುಬರುತ್ತವೆ.

ಅವುಗಳ ಕುರಿತು ಹೆಚ್ಚಿನ ಸಂಶೋಧನಾತ್ಮಕ ಅಧ್ಯಯನ, ಉತ್ಖನನಗಳನ್ನು ಕೈಗೊಂಡರೆ ಅನೇಕ ಅಂಶಗಳು ಹೊರಬರುವ ಸಾಧ್ಯತೆಗಳಿವೆ. ಇತ್ತೀಚೆಗೆ ಎ.ಎಸ್.ಆಯ್. ಇಲಾಖೆಯವರು 2011 ರಲ್ಲಿ ಬಿಜಾಪೂರ ನಗರದಲ್ಲಿ ಕೈಗೊಂಡ ಉತ್ಖನನಗಳೇ ನಮಗೆ ಸಾಕ್ಷಿಯಾಗಿವೆ. ಇದೇ ರೀತಿ ಇವರ ಆಳ್ವಿಕೆಯ ಪ್ರಮುಖ ಸ್ಥಳಗಳಲ್ಲಿ ಉತ್ಖನ ನಡೆದರೆ, ಆದಿಲ್‌ಶಾಹಿಗಳ ಕಾಲದ ನೀರಾವರಿ ವ್ಯವಸ್ಥೆಯ ತಾಂತ್ರಿಕತೆ, ಬಳಕೆಯ ವಿಧಾನಗಳು, ನೀರಾವರಿಯಿಂದ ಕೃಷಿಗೆ ಕಲ್ಪಿಸಲಾದ ಸೌಲಭ್ಯಗಳು, ಬೆಳೆಗಳು ಇತ್ಯಾದಿ ಅಂಶಗಳನ್ನು ಬೆಳಕಿಗೆ ತರಲು ಸಾಧ್ಯವಿದೆ.

## ಆಕರ ಗ್ರಂಥಗಳು

## ಸಂಶೋಧನೆಗಳು


16. ಕುಲಕರ್ಣಿ 1971 : ''ಬಿಜಾಪೂರ'' ಐ. ಬಿ. ಪ್ರಕಾಶನ, ಗಾಂಧೀನಗರ, ಬೆಂಗಳೂರು.
17. ಕೋಡದ ಎಸ್. ಬಿ. 1966 : ವಿಜಯನಗರ ಸಾಮ್ರಾಜ್ಯ ಹಾಗೂ ಹಿಂದು ಮುಸ್ಲಿಂ ಬಾಂಧವ್ಯ, ಧಾರವಾಡ.
18. ಜಾಗೀರದಾರ ಸೀತಾರಾಮ ಮತ್ತು ಯಾಸೇನ ಖುದ್ದೂಸಿ 2001 : ಕರ್ನಾಟಕ ಪರ್ಶಿಯನ್ ಅರೇಬಿಕ್ ಮತ್ತು ಉರ್ದು ಶಾಸನಗಳು, ಪ್ರಸಾರಾಂಗ, ಕ.ವಿ.ವಿ. ಹಂಪಿ.
19. ಢವಳಗಿ ಸಂಗಮೇಶ 2002 : ಬಿಜಾಪೂರ ಒಂದನೆಯ ಅಲೀ ಆದಿಲ್‌ಶಾಹನ ಜೀವನ ಮತ್ತುಸಾಧನೆ, ಕ.ವಿ.ವಿ. ಧಾರವಾಡ. ಅಪ್ರಕಟಿತ ಪಿಎಚ್.ಡಿ. ಪ್ರಬಂಧ.
20. Cousens Henry 2000 : Revised History of antiqurian Remains in the Bomby Presidence VII-VII
21. Neyeem M.A. 2008 : The Heritage of the Adils ..... Bijapur.
22. Sherwani H. K. 1973 : History of the mediral Deccan Hyderabad.
23. Taylor Medwos 1986 : A Nobele Queen Asion Educational services, Delhi.
24. Yasuadani G. 1960 : Early History of the Deccan ports Newyark, VII-XI


### ಅಡಿ ಟಿಪ್ಪಣಿಗಳು

1. ಕೃಷ್ಣಕೋಲ್ಹಾರ ಕುಲಕರ್ಣಿ 2002 : ಬಿಜಾಪೂರ ಆದಿಲ್‌ಶಾಹಿ, ಪಿಕ್ಯಾಬ ಆದಿಲ್‌ಶಾಹಿ ಅಧ್ಯಯನ ಸಂಸ್ಥೆ, ಬಿಜಾಪೂರ, ಪು. 287.
2. ದೀಕ್ಷೀತ್ ಜಿ. ಎಸ್. ಮತ್ತು ಕುಪ್ಪಸ್ವಾಮಿ 2002 : ಕರ್ನಾಟಕದಲ್ಲಿ ಕೆರೆ ನೀರಾವರಿ (ಅನು) ನೀಲತ್ತಹಳ್ಳಿ ಕಸ್ತೂರಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 1 ರಿಂದ 100.
3. ರಾಜಾರಾಮ ಹೆಗಡೆ 2002 : (ಸಂಪಾದನೆ) ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಪು. 1 ರಿಂದ 160.
4. ದಡ್ಡಿ ಎಚ್. ಡಿ. 2003 : ಬಿಜಾಪೂರದ ಆದಿಲ್‌ಶಾಹಿ ಸ್ಮಾರಕಗಳು ಒಂದು ಇಣುಕು ನೋಟ, ಜಮಖಂಡಿ.
5. ದಿನಾಂಕ 28–1–2011ರ ಪ್ರಜಾವಾಣಿ ದಿನಪತ್ರಿಕೆ, ಪು. 4 ರಲ್ಲಿ ವರದಿಯಗಿದೆ.
6. ಅದೇ ಬಿಜಾಪೂರದ ಆದಿಲ್ ಶಾಹಿ ಸ್ಮಾರಕಗಳು ಒಂದು ಇಣುಕು ನೋಟ, ಪು. 73.
7. ಅದೇ ಪು. 75
8. ಅದೇ ಪು. 43 ಮತ್ತು ಬಿಜಾಪೂರ ಜಿಲ್ಲೆಯ ಗ್ಯಾಜಟೀಯರ್ ಹಾಗೂ ಬಿಜಾಪೂರ ಆದಿಲ್‌ಶಾಹಿ, ಪು. 288.
9. ಜೋಶಿ ಎಸ್. ಕೆ. : ಕಾಂಜರ್‌ವೇಶನ್ ವಾಟರ್ ಸಪ್ಲಾಯ್ ಸಿಸ್ಟಮ್ ಅಂಡರದ ಆದಿಲ್‌ಶಾಹಿಜ್ ಬಿಜಾಪೂರ ರಿಜನ್, ಪು. 1 ರಿಂದ 50.
10. ಮುನಿಸ್ವಾಮಿ ಆರ್. 1999, ಬಿಜಾಪೂರ ಜಿಲ್ಲೆ ಗ್ಯಾಸೆಟಿಯರ್, ಪು. 1126.
11. ವಿನೋದ ಪಾಟೀಲ : ಕರ್ನಾಟಕದ ಬಾವಿಗಳು, ಪು. 1 ರಿಂದ 130.
12. ಡಿ. ಸಿ. ಸರ್ಕಾರ 1986 : .......
13. ಅದೇ ಕೃಷ್ಣ ಕೋಲ್ಹಾರ ಕುಲಕರ್ಣಿ 2002 : ಬಿಜಾಪೂರ ಆದಿಲ್‌ಶಾಹಿ, ಪು. 296 ರಿಂದ 297.
14. ಷೇಕ್ ಅಲಿ ಬಿ. 1997 : ಕರ್ನಾಟಕ ಚರಿತ್ರೆ, ಸಂಪುಟ – 4, ಪ್ರಸಾರಂಗ, ಕ.ವಿ.ವಿ. ಹಂಪಿ.
15. ಇಬ್ರಾಹಿಂ ಸೌದಾಗರ 2002 : ಬಿಜಾಪೂರ ಆದಿಲ್‌ಶಾಹಿಗಳ ಕಾಲದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

■■

# ಕರ್ನಾಟಕದ ವಾಸ್ತು ಶಿಲ್ಪ ಕಲೆಯಲ್ಲಿ ಕೊಪ್ಪಳ ಜಿಲ್ಲೆ 'ಪುರ'ದ ಶಾಸನಗಳು ಹಾಗೂ ವಾಸ್ತು ಶಿಲ್ಪದ ವೈಶಿಷ್ಟ್ಯತೆಗಳು

## ಪ್ರಸ್ತಾವನೆ

'ಪುರ'ವು ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಗ್ರಾಮವಾಗಿದ್ದು, ಇದು ತಾವರಗೇರಿ, ಸಿಂಧನೂರು ರಸ್ತೆಯಲ್ಲಿ ಬರುವ ಉಮಲೂಟಾ ಗ್ರಾಮದಿಂದ ಸು. ಐದು ಕಿ.ಮೀ. ಅಂತರದಲ್ಲಿ ಬರುವುದು. ಈ ಗ್ರಾಮದಲ್ಲಿ ಏಳು ಶಾಸನಗಳು ಎರಡು ದೇವಾಲಯಗಳಿರುವ ಇತಿಹಾಸ ಬೆಳಕಿಗೆ ಬಂದಿದ್ದು, ಅವುಗಳ ಸಾಂಸ್ಕೃತಿಕ ಚಿತ್ರಣ ಹಾಗೂ ಅಲ್ಲಿರುವ ದೇವಾಲಯ ಹಾಗೂ ಮೂರ್ತಿ ಶಿಲ್ಪಗಳ ವೈಶಿಷ್ಟತೆಗಳ ಕುರಿತು ತಿಳಿಯುವು ಮತ್ತು ಕರ್ನಾಟಕ ವಾಸ್ತು ಶಿಲ್ಪದ ಇತಿಹಾಸದಲ್ಲಿ ಅದರ ವಿಶೇಷ ಕೊಡುಗೆ ಏನೆಂಬುದನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿರುವುದು.

'ಪುರ'ವು ಕೊಪ್ಪಳ ಜಿಲ್ಲೆಯ ಒಂದು ಭಾಗವಾಗಿರುವುದರಿಂದ ಕರ್ನಾಟಕದ ರಾಜಕೀಯ ಹಾಗೇ ಸಾಂಸ್ಕೃತಿಕ ಚಾರಿತ್ರೆಯು, ವಿಶಾಲಾರ್ಥದಲ್ಲಿ ಪುರ ಗ್ರಾಮಕ್ಕೂ ಅನ್ವಯಿಸುತ್ತದೆ. ಪ್ರಾಚೀನ ಕುಂತಳ (ಕನ್ನಡನಾಡು) ದ ಒಂದು ಭಾಗವಾದ ಈ ಪ್ರದೇಶ ತಿರುಳಗನ್ನಡ ನಾಡಿನ 'ಹಸ್ತಿನಾವಳತಿಳದ' ವಿಭಾಗದಲ್ಲಿ ಬರುವುದಾಗಿ ಶಾಸನಗಳಿಂದ ತಿಳಿದುಬರುವುದು. ರಾಜಕೀಯದ ಮಹತ್ಕಾರ್ಯದಲ್ಲಿ ಸಾರ್ವಭೌಮ ರೊಂದಿಗೆ ಈ ಭಾಗದ ಆಡಳಿತ ನಡೆಸಿಕೊಂಡು ಬಂದ ಮಹಾ ಮಂಡಳೇಶ್ವರರು, ಮಹಾಸಾಮಂತ ಮನ್ನೆಯರು ಹಾಗೂ ಅಧಿಕಾರಿಗಳ ಪಾತ್ರ ಹಿರಿದಾದುದಾಗಿದ್ದು, ಕ್ರಿ.ಶ. 1018ರಲ್ಲಿ ಬರೆಯಲ್ಪಟ್ಟ ಕಲ್ಯಾಣ ಚಾಳುಕ್ಯ ಚಕ್ರವರ್ತಿ ಎರಡನೆಯ ಜಯಸಿಂಹನ ಕಾಲಕ್ಕೆ ಸೇರಿದ, ಪ್ರಾಚೀನ ಶಾಸನದಲ್ಲಿ ಕೆಳವಡಿ 300 ಪ್ರಾಂತಕ್ಕೆ ಸೇರಿದ ಬೆಳ್ವಣಿಕೆಯ ಉಲ್ಲೇಖವಿದು,ಇದು ಒಂದು ಅಗ್ರಹಾರವಾಗಿತ್ತೆಂದು ಹೇಳಲಾಗಿದೆ. ನಂತರದ ಕ್ರಿ.ಶ. 12ನೇ ಶತಮಾನಕ್ಕೆ ಸೇರಿದ ಮತ್ತೊಂದು ಶಾಸನ ವೀರಬಾಚಿ ದೇವರಸನು ಸಮಸ್ತ ಪ್ರಶಸ್ತಿ ಸಹಿತ ಚನ್ನಮನ್ನೆಯ ಸೂರೆಕಾರ ಕದಂಬ ಕಂಠೀರವ ಶ್ರೀಮನ್ಮಮಹಾಮಂಡಳೇಶ್ವರ ವೀರ ಬಾಚಿದೇವರಸನೆಂದು ಕರೆಯುತ್ತದೆ. ಆದರೆ ಆತ ಈ ಭಾಗದ ಪುರ ಪ್ರದೇಶಗಳನ್ನು ಆಳುತ್ತಿದ್ದನೆಂಬುದರ ಬಗ್ಗೆ ತಿಳಿಸುವುದಿಲ್ಲ. ಶಾಸನದಲ್ಲಿ ಬರುವ 'ಚನ್ನಮನ್ನೆಯಕಾರ' ಎಂಬುದು ಅವನ ಬಿರುದಾಗಿದ್ದು, ಅವನು ಮನ್ನೆಯರನ್ನು ಸೋಲಿಸಿರುವುದು ಹಾಗೂ ಕದಂಬ ಕಂಠೀರವ ಎಂಬುದು ಸಹ ಆತನ ಇನ್ನೊಂದು ಬಿರುದಾಗಿದ್ದರಿಂದ, ಅವನು ಕದಂಬ ವಂಶಕ್ಕೆ ಸೇರಿದವನೆಂಬುದನ್ನು ತಿಳಿಸುತ್ತದೆ. ಇದೇ ಕಾಲದ ಮತ್ತೊಂದು ಶಾಸನ ಬಾಹತ್ತರ ನಿಯೋಗಾಧಿಪತಿ ರೇಚಿಮಯ್ಯ ದಂಡನಾಯಕನ ಅಧಿಕಾರಿ ಚಿಮಯ್ಯದಂಡನಾಯಕನು ಮುಖ್ಯವಾಗಿ ಸ್ತ್ರೀಕರಣಗಳು ನವಿಲೆ, ಅಗ್ರಹಾರ, ಸಿಂಧನೂರು, ಮಾದೆನೂರು, ನಿರುಡುಗೊಳ, ಸ್ಥಳಗಳ ನಾನಾ ದೇಶಿ ಮುಂಮ್ಮಾರಿ ದಂಡಗಳು ಮಹಾನಾಡಾಗಿ ದೇವಸಭೆ, ಬ್ರಹ್ಮಸಭೆ, ರಾಜಸಭೆ ಸನ್ನಿಧಾನದಲ್ಲಿ ಸಭೆ ಸೇರಿದ್ದರೆಂದೂ, ಜೊತೆಗೆ ಬಾಚಿ ದೇವರಸ ಮುಖ್ಯವಾಗಿ ವೀರನರಸಿಂಹ, ಕಂಪಲಿ ಹಂಪದೇವ, ಜೋಯಿಹರಸ, ಕಣ್ಣರಸ, ಗೋಯಿಯರಸ, ಸೆಳೆಯಜ್ಜರಸ, ಹಂಪರಸ, ಬೊಗರಸ, ನಿಡವದ ಹೆಮ್ಮರಸ, ಭಾಗದೇವಿ ಹರಿಹರ, ಕಾತರಸ ಹಿಂಡಿಯ ಬೀವರಸ ಉಮ್ಮಕುರಿನ ಬಾಚರಸ, ನಡೆಯಂಗಲ್ಲು ವಿರುಪರಸ ಹೂಡಲಾರ ದೊಣಮರಸ, ಮುಂತಾದ ಕೆಳವಾಡಿ ಮನ್ನೆಯ ಶೆಟ್ಟರು, ಬ್ರಹ್ಮಣರು, ಎಂಟು ಹಿಟ್ಟು ಸಹಿತ 48 ಮನ್ನೆಯರು ಈ ಸಭೆಯಲ್ಲಿ ಸೇರಿದ್ದರು. ಅವರೆಲ್ಲಾ ಸೇರಿ ಪುರದ ಗವರೇಶ್ವರದೇವರ ಅಂಗಭೋಗ, ರಂಗಭೋಗ, ಪಾತ್ರಪಾವುಳ, ಚೈತ್ರಪವಿತ್ರ, ಪಂಚಪರ್ಬ ಮಹಾನೈವೇದ್ಯ ಭೋಜನ ಮತ್ತು ಅತಿಥಿ ಬ್ರಾಹ್ಮಣರ ಅಧ್ಯಯನ, ಅಧ್ಯಾಪನ, ಆಹಾರದಾನ, ದೇವಾಲಯದ ಜೀರ್ಣೋದ್ಧಾರಕ್ಕೆ ಅಲ್ಲಿಯ ಬ್ರಾಹ್ಮಣರು, ತಪೋನರ ವೇತನಕ್ಕ ದಾನದತ್ತಿಬಿಟ್ಟರೆಂದು ತಿಳಿಸುತ್ತದೆ. ಈ ಶಾಸನ ಬರೆದ ಸೆನೆಬೋವ ಬಂಮರಸ, ನರಸಿಂಹ ದೇವರ ಅರಮನೆಯ ಸೇನಬೋವ ಬಸವರಸನಿಗೆ ಹಿರಿಯಕೊಲಲ್ಲಿ ಮತ್ತರು ಆರಮನೆಯ ಬಡಿಗಕಾಳೋಜನಿಗೆ ಒಂದು ಮತ್ತರು ಅರಮನೆಯ ಸ್ಥನದವರಿಗೆ ಬಾಚಿದೇವನ ಎರೆಯಲ್ಲಿ 5 ಮತ್ತರು ಭೂಮಿ ದಾನ ನೀಡಿರುವುದು ಮತ್ತು ಕೆಳವಾಡಿ ಹಿರಿಯ ಬೀರವಣಿಗೆ ಕವಡಿಯ ಕೇತಿ ಶೆಟ್ಟಿ ಮುಂದಾಳತ್ವದಲ್ಲಿ ಬೀರುವಣಿಗರು ಬೀರವಣದಲ್ಲಿ ಒಂದು ಗದ್ಯಾಣ ಬಿಟ್ಟರೆಂದು ತಿಳಿಸುವುದು.

ಅದೇ ರೀತಿ ಕ್ರಿ.ಶ. 1772ರ ಶಾಸನ ತೃಟಿತವಾಗಿದ್ದು ರಾಯಮುರಾರಿ ಸೋವಿದೇವ ರಾಜ್ಯವಾಳುತ್ತಿದ್ದು ಅಯ್ಯಾವಳೆ ಬೆಳವಣಿಗೆಯ ಮುಮ್ಮರಿದಣ್ಣಗಳು ಮತ್ತು ದೇಚರಸ, ಮಹಾದೇವ ಮೊದಲಾದವರು ಮಹಾಸಭೆ ಸೇರಿದ ಉಲ್ಲೇಖ ನೀಡುವುದು. ಕಾಲಮಾನವಿಲ್ಲದ ಮತ್ತೊಂದು ತೃಟಿತಶಾಸನವೊಂದು ಕಲಚೂರಿ ಅರಸ ಸಂಕಮದೇವನು ಈ ಭಾಗವನ್ನು ಆಳುತ್ತಿದ್ದಾಗ ಅಲ್ಲಿಯ ಬಸವರಸ, ಅಯ್ಯಪರಸ ಕೇಶವದೇವ ಹದಿನೈದು ಸಮಯದವರು ಸಂಕ್ರಮಣದಲ್ಲಿ ಕೊಟ್ಟದಾನ ಹಾಗೂ ಗವರೇಶ್ವರ ದೇವರ ಪೂಜೆ ಪುನಸ್ಕಾರಕ್ಕೆ ನೈವೇದ್ಯಕ್ಕೆ 1 ಗಾಣವನ್ನು ಗಾಣಿಗರು ನಂದಾದೀಪಕ್ಕೆಂದು, ಸೊಳಸಿಗೆ ಎಣ್ಣೆಯನ್ನು ದವಸ, ಅಡಿಕೆ, ಅರಿಸಿನ, ಮೆಣಸಿನ ಮೇಲಿನ ತೆರಿಗೆಯನ್ನು ಕೊಟ್ಟ ಬಗ್ಗೆ ಮತ್ತು ಮುಮ್ಮರಿ ದಂಡಗಳು ಪ್ರಜೆಗಳುಂಭತ್ತವಿಕ್ರಯ ಸೊಜ್ಜಿಂ ಸಾಯಿ ರಕ್ಕಂ 11 ಅಡಿಕೆಯಕೊಟ್ಟರು. ಅಲ್ಲಿಯ ಮಾಲಿಗೌಡರು ಹುಣಿಸಮಗೌಡರು ಗಂಗರ ಬೀಚರಸ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಜಗದೇಕ ಸಂಕಮದೇವ ಹಿಟ್ಟುಕಾರರು ವಿಜಯರಾಜ್ಯಮುರೋತ್ತರ ಸುಖ ಸಂಕಥಾವಿನೋದದಿಂ ರಾಜ್ಯಂಗೈಯತ್ತಿರುವ ಇತ್ಯಾದಿ ವಿಚಾರಗಳನ್ನು ಹೊರಗೆಡುವುದು.

ಕ್ರಿ.ಶ. 12ನೇ ಶತಮಾನದ ನಂತರ 14ನೇ ಶತಮಾನದವರೆಗೆ ಯಾವ ಶಾಸನಗಳು ಇಲ್ಲಿ ಸಿಗುವುದಿಲ್ಲವಾದ್ದರಿಂದ ಆ ಕಾಲದ ಚರಿತ್ರೆ ಸ್ವಲ್ಪ ಮುಸುಕು ಮುಸುಕಾಗಿದ್ದು, ಕಲ್ಯಾಣ ಚಾಲುಕ್ಯರ ಅವನತಿಯ ಬಳಿಕ ದಕ್ಷಿಣ ಭಾರತವು ಅನೈತಿಕತೆಯ ಬೀಡಾಯಿತು. ತತ್ಪರಿಣಾಮವಾಗಿ ಮುಸ್ಲಿಂರ ದಾಳಿಗೆ ಅನುವು ದೊರೆಯಿತು. ಮೂಲಸಂಸ್ಕೃತಿಗೆ ಗರಬಡಿದಂತಾಗಿ ಉಸಿರುಗಟ್ಟಿದ ವಾತಾವರಣ ಉಂಟಾಯಿತು. ಆಗ ಪ್ರಾಚೀನ ಕಾಲದ ಸಂಘ ಸಂಸ್ಥೆಗಳು

✍ ಎಸ್. ಕೆ. ಮೇಲಕಾರ, ಮ್ಯುಜಿಯಂ ಕ್ಯೂರೇಟರ್, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 03.
ಮೊಬೈಲ್ : 9449265780

ನಾಮಾವಶೇಷವಾಗತೊಡಗಿರಬಹುದು. ಮುಂದೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯೊಂದಿಗೆ ಈ ಭಾಗದ ಚರಿತ್ರೆ ಮತ್ತೆ ಚೇತರಿಕೆ ಪಡೆದುಕೊಂಡಿದ್ದು, ವಿಜಯನಗರದ ಅರಸ ಶ್ರೀ ವೀರಪ್ರತಾಪದೇವರಾಯ ಮೊದಲನೆ ದೇವರಾಯನ ಕ್ರಿ.ಶ. 1406–1446ರ ಶಾಸನವೊಂದು ಇಲ್ಲಿ ದೊರೆತಿದ್ದು, ಅದರಲ್ಲಿ ಕೃಷ್ಣವೇಣಿ ತುಂಗಾಭದ್ರ ನದಿಯ ಮಧ್ಯದ ಮುದುಗಲ್ಲ ವೆಂಠೆಯೊಳಗೆ ಶ್ರೀ ಸೋಮನಾತ ದೇವಾಲಯದ ಬಗ್ಗೆ ಉಲ್ಲೇಖಿಸುತ್ತಾ ಅದಕ್ಕೆ ದಾನ ನೀಡಿದ ವಿವರಣೆ ಮತ್ತು ಪುರದ ಸ್ಥಳ **'ಓಹಿಲಾ ಪುರ'** ವೆಂದು ಓಹಿಲಾ ಎಂಬ ಸೂತ್ರಧಾರಿಯು ಇಲ್ಲಿ ಸೋಮನಾಥ ದೇವಾಲಯ ಹಾಗೂ 'ಕೋಟಲಿಂಗಗಳನ್ನು ಪ್ರತಿಷ್ಠಾಪಿಸಿದನೆಂದು' ತನ್ಮೂಲಕ ಈ ಸ್ಥಳವನ್ನು 'ಓಹಿಲಾಪುರವೆಂದು' ತಿಳಿಸುವುದು.

ಕಾಲಕ್ರಮೇಣ ಅದು ಜನರ ಆಡುನುಡಿಯಲ್ಲಿ 'ಓಹಿಲ' ಎಂಬ ಪದ ಮಾಯವಾಗಿ 'ಪುರ' ಮಾತ್ರ ಈಗ ಉಳಿದುಕೊಂಡು ಬಂದಿದೆ. ಸೋಮನಾಥ ದೇವಾಲಯ ಮತ್ತು ಕೋಟಲಿಂಗಗಳು ಮಾತ್ರ 15ನೇ ಶತಮಾನದಲ್ಲಿ ರಚನೆಗೊಂಡಿರುವುದಾಗಿ ಅಲ್ಲಿಯ ಪುರಾತತ್ವ ಕುರುಹುಗಳಿಂದ ತಿಳಿದುಬರುವುದು. ಇದೇ ಕಾಲದಲ್ಲಿ **ಓಹಿಲಪೂರದ** ಆಗ್ನೇಯ ಭಾಗದಲ್ಲಿ ಕೆರೆಯೊಂದು ಕಟ್ಟಿಸಿ ಪ್ರಥಮ ದೇವರಯನಿಗೆ ಪುಣ್ಯವಾಗಲೆಂದು ಅಲ್ಲಿಯ ದೇವರ ನೈವೇದ್ಯಕ್ಕೆ ತ್ರಿಸಂಧ್ಯಾ ಕಾಲದಲ್ಲಿ ಶ್ರೀ ಸಜ್ಜನ ಶುದ್ಧ ಶಿವಚಾರ ಸಂಪನ್ನ ಸೋಮಯದೇವಯ್ಯನವರಿಗೆ ದೇವರ ನೈವೇದ್ಯಕ್ಕೆ ನೆಲ್ಲುಯಿಲ್ಲವೆಂದು 'ಪೋಹಿಲಾಪುರ'ದ ಹೊಲದ ಒಳಗೆ ಬನದಾಯಗಳು ಕರೆಯನ್ನು ಕಟ್ಟಿಸಿಕೊಟ್ಟಂತೆ ತಿಳಿಸುವುದು. ಕ್ರಿ.ಶ. 1547 ರ ಅರ್ವಾಚೀನ ಕಾಲದಲ್ಲಿ ಸದಾಶಿವರಾಯನು ರಾಜ್ಯಭಾರ ಮಾಡುತ್ತಿರುವಾಗ ಅರ್ಕಾಚಿತೆಂಮ್ಮಪನಾಯಕನ ಮಗ ಈರುಪಣನಾಯಕನು ಕೊಟ್ಟ ದಾನದ ವಿವರವಿದೆ. ವೀರ ಸದಶಿವದೇವರಾಯನು ಕೃಷ್ಣಪ್ಪನಾಯಕನಿಗೆ ಅಮರ ಮಾಘಣಿಯಾಗಿ ನೀಡಿದ ತಾವರೆಗೆರೆ ಸೀಮೆಯ ಪುರ ಗ್ರಾಮದಲ್ಲಿ ಸೋಮೇಶ್ವರ ಮಹಾಲಿಂಗಕ್ಕೆ ಊರಿನ ಪಶ್ಚಿಮಕ್ಕೆ ಮಡ್ಡೆಹೊಲ, ಗದ್ದೆ, ಹುಣಸೆಮರಗಳು ಸೆಟ್ಟರ ಕಾಣಿಕೆ, ನಾಡ ತಳವಾರಿಕೆ ಗವುಡ ಮಾನ್ಯದ ಹಣ, ಅಂಗಡಿ ಗಾಣ, ಮಗ್ಗ, ಸಿದ್ದಾಯ, ಕಡ್ಡಾಯ, ವೋಜರು ತರುವ ಹಣ ಕುಂಬಾರ ತರುವ ಹಣ ಉಪ್ಪಿನವೊಳೆ ಮುಂತಾದ ಸಕಲ ಸುವರ್ಣದಾಯ, ಭತ್ತದ ಆದಾಯವನ್ನು ಸಂಕ್ರಾಂತಿ ಪುಣ್ಯಕಾಲದಲ್ಲಿ ದತ್ತಿಯಾಗಿ ಬಿಟ್ಟ ಬಗ್ಗೆ ಹಾಗೂ ಸದಾಶಿವದೇವರಾಯನಿಗೆ ಆಯುಷ್ಯಾಭಿವೃದ್ಧಿಯಾಗಬೇಕೆಂದೂ, ಕೃಷ್ಣಪ್ಪನಾಯಕನಿಗೆ ಪುಣ್ಯವಾಗಬೇಕೆಂದೂ ವಿರುಪಣನಾಯಕನು 'ಹಸ್ತಿನಾವತಿ ವಳಿತಕ್ಕೆ' ಸೇರುವ ಕೆಳವಡಿನಾಡೊಳಗೆ ಕೆಲವು ದಾನಗಳನ್ನು ನೀಡಿದ ಬಗೆ ವಿವರಿಸುವುದು.

ದಿನಾಂಕವಿಲ್ಲ ಇನ್ನೊಂದು ಶಾಸನ ತ್ರೈಲೋಖ್ಯವಿಜಯಭೂಷಣನಾದ ಸೌರಾಷ್ಟ್ರ ಸೋಮನಾಥ ದೇವರು ಓಹಿಲನಿಗೆ ಹಳ್ಳಿಗೆ ಹೋಗಿ ದೇಗುಲದ ಮಾಡುವುದು ಮತ್ತು ಸರಿಗೆಯ ಹೆಕ್ಕಿಕೆರೆಯನ್ನು ಕಟ್ಟಿಸು, ಬಾಗಿಲಿಲ್ಲದ ಕೋಟೆ ಕಟ್ಟಿಸು, ದೇವರಿಗೆ ಅರ್ಪಿಸಬೇಕಾದ ಅರ್ಪಿಸಬಾರದ ಫಲಪುಷ್ಪಗಳಾದ ಬಾಳೆ, ತೆಂಗು, ಹಲಸು, ಮಾವು, ನಿಂಬೆ, ಹೆಜ್ಜೇನು, ಅರನೆರಿಲು, ಕಿತ್ತಳೆಯ ನಿಕ್ಕಿದರೆ ಪಾಪ, ಸಂಪಿಗೆ, ಸೇವಂತಿಗೆ, ಇರುವಂತಿಗೆ ಮಲ್ಲಿಗೆ, ಜಾಜಿ, ಇವನ್ನಿಟ್ಟರೂ ಪಾಪ, ಕಣಗಿಲೆ ಕೋಚೆವಾಳ, ಬೆಲ್ಲವತ್ತ ಹಾದರಿಯುವನಿಕ್ಕಿದವರಿಗೆ ಪುಣ್ಯವೆಂದು ತಿಳಿಸುವುದು.

ಹೀಗೆ ಇಲ್ಲಿ ದೊರೆತ 7 ಶಾಸನಗಳನ್ನು ಅಭ್ಯಸಿಸಲಾಗಿ 'ಪುರ'ದ ಸೋಮನಾಥ ದೇವಾಲಯದ ಕಲೆ ವಾಸ್ತುಶಿಲ್ಪ, ಧಾರ್ಮಿಕತೆ, ರಾಜಕೀಯ, ಸಾಮಾಜಿಕ ಆರ್ಥಿಕ ಶಿಕ್ಷಣ ಇತ್ಯಾದಿ ಸಾಂಸ್ಕೃತಿಕ ಅಂಶಗಳ ಮೇಲೆ ಬೆಳಕು ಚೆಲ್ಲುತ್ತವೆ. ಗ್ರಾಮದ ವಾಯುವ್ಯ ಭಾಗಕ್ಕೆ ಉತ್ತರ ಮುಖ ಮಾಡಿ ಕಲ್ಲುಗಳಿಂದ ಕಟ್ಟಲಾದ ಸೋಮನಾಥ ದೇವಾಲಯ ಸಂಕೀರ್ಣ ಮಾದರಿಯಾಗಿದ್ದು, ಸುತ್ತಲೂ ಪ್ರಕಾರ ಒಳಗೆ ಮಂಟಪಗಳು ಮೂಲಗುಡಿಯ ಹೊರಗಡೆ ಹತ್ತಿಕೊಂಡು ಮಂಟಪಗಳು ಇರುವವು.

ಈ ದೇವಾಲಯದ ಮತ್ತೊಂದು ವೈಶಿಷ್ಟ್ಯವೆಂದರೆ ದೇವಾಲಯದ ಮಂಟಪ, ದ್ವಾರಗಳು ಚಿಕ್ಕದಾಗಿರುವುದು, ಆ ಮಂಟಪಗಳಿಗೆ ಹೋಗಬೇಕಾದರೆ ಸಂಪೂರ್ಣ ಬಗ್ಗಿಯೇ ಹೋಗಬೇಕು. ಗರ್ಭಗೃಹದಲ್ಲಿ ಲಿಂಗವಿದ್ದಂತೆ, ಮಂಟಪ ಪ್ರಕರದ ಒಳಮಂಟಪಗಳಲ್ಲಿ ಕೇವಲ ಲಿಂಗಗಳು ಪ್ರತಿಷ್ಠೆ ಮಾಡಿರುವುದು ಕಂಡುಬರುವುದು. ಅವುಗಳ ಸಂಖ್ಯಾ ದೃಷ್ಟಿಯಿಂದ ಕೋಟಿ ಲಿಂಗಗಳೆಂದು ಕರೆಯುವ ವಾಡಿಕೆಯೂ ಸಹ ಇರುವುದು.

ದಿನಾಂಕವಿಲ್ಲದ ಮುಂದುವರೆದ ಈ ಶಾಸನ ಓಹಿಲನು ಮಾಡಿಸಿದ ಈ ಕೋಟಿ ಲಿಂಗಕ್ಕೆ ತ್ರಿಕಾಲ ಮಜ್ಜನಕ್ಕೆ ರೆದಾತನೆ ಮೂರಕಾಲ ಮಂಚದ ಮೇಲೆ ಒರಗಲವ ಪೆಳಿದವನೊರಗಿದಡೆ ಪ್ರತ್ಯಾಯವೆಂದು ಉಲ್ಲೇಖಿಸುವುದು. ಆ ಶಾಸನ ಉಲ್ಲೇಖಿತ ಲಿಂಗಗಳು, ಮೂರು ಕಾಲಿನ ಮಂಚ, ಅಲ್ಲಿಯ ಶಿಲ್ಪಗಳು ನೋಡಲು ದೇವಾಲಯದಲ್ಲಿ ನಮಗೆ ಇಂದಿಗೂ ಕಂಡುಬರುವವು. ಈ ದೇಗುಲ ಮೂಲತಃ 12ನೇ ಶತಮಾನಕ್ಕೂ ಹಿಂದಿನದಾಗಿದ್ದು ವಿಜಯನಗರದ ಅರಸರ ಆಳ್ವಿಕೆಯ ಅವಧಿಯಲ್ಲಿ ಗೋಪುರಗಳಿಂದ ದೇವಾಲಯ ಜೀರ್ಣೋದ್ಧಾರಗೊಳಿಸಲಾಗಿದ್ದು, ಮತ್ತು ಶಾಸನ ಆಧಾರದಂತೆ ವಿಜಯನಗರದ ಅರಸನಾದ ಎರಡನೆಯ ವೀರಪ್ರತಾಪ ಸದಾಶಿವರಾಯನಿಗೆ ಧರ್ಮವಾಗಬೇಕೆಂದು ಆತನ ರಾಣಿವಾಸದ ಓರ್ವವ್ಯಕ್ತಿಯೊಬ್ಬರು ಸೋಮೇಶ್ವರ ದೇವರಿಗೆ ನಿತ್ಯ ಪೂಜೆ, ನೈವೇದ್ಯ, ವಿವಿಧ ರೀತಿಯ ಕಲ್ಯಾಣ ಕಾರ್ಯಗಳಿಗೆ ಕೊಟ್ಟ ಭೂದಾನದ ವಿವರಣೆ ನೀಡುವುದು. 13ನೇ ಶತಮಾನದಲ್ಲಿ ಸೋಮಯಿದೇವ ಎಂಬುವನು ಈ ಗ್ರಾಮಕ್ಕೆ ಕೆರೆ, ಕಾಲುವೆ, ತೂಬೂ ಮಾಡಿಸಿದನೆಂದು ಹಾಗೂ ತುಳುವಂಶಜ ಎರಡನೇ ವೀರ ಪ್ರತಾಪ ಸದಾಶಿವರಾಯ ಮಹಾರಾಯ 1442 ರಿಂದ 1426 ರ ವರೆಗೆ ಇಲ್ಲಿ ನೆಲೆಸಿದ್ದು ಅವನ ಮಾಂಡಲಿಕ ಕೃಷ್ಣಪ್ಪ ನಾಯಕ ದೊರೆಯ ಆಯುಷ್ಯಾಭಿವೃದ್ಧಿ ಹಾಗೂ ಪುಣ್ಯ ಪ್ರಾಪ್ತಿಗಾಗಿ ಸೋಮನಾಥನಿಗೆ ಭೂದಾನ ನೀಡಿದ ವಿವರಣೆ ಮತ್ತು ಒಂದು ಕೋಟಲಿಂಗಗಳ, ನಿರ್ಮಾಣಕಾರ್ಯ 'ಓಹಿಲಯ್ಯನೆಂಬ' ಶಿಲ್ಪಿಯಿಂದ ಮಾಂಡಲಿಕ ಅರಸುಗಳಾದ ವಿಜಯಭೂಷಣಪ್ಪ ಸೆರಪ್ಪನ್ನವರ ನಿರ್ಮಾಣ ಕಾರ್ಯದಲ್ಲಿ ನೆರವೇರಿಸಿದ ಅನೇಕ ಅಂಶಗಳ ಬಗ್ಗೆ ವಿವರಣೆ ಶಾಸನದಲ್ಲಿ ಕಂಡುಬರುವುದು. ಈ ದೇವಾಲಯದ ಮತ್ತೊಂದು ವೈಶಿಷ್ಟ್ಯವೆಂದರೆ ದೇಶದ ನಾನಾ ಭಾಗಗಳಿಗೆ ಹೋಗಿ ದರ್ಶನ ಪಡೆಯುವ ಸಕಲ ಕ್ಷೇತ್ರಗಳ ದೇವರುಗಳ ಪ್ರತಿರೂಪಗಳ ಸಮೃದ್ಧ ಪರಂಪರೆಯ ಚಿತ್ರಣ ಈ ದೇವಾಲಯದಲ್ಲಿ ಒಂದೆಡೆಯಿರುವುದು ಕಂಡುಬರುವುದು. ಮತ್ತೊಂದು ಈ ದೇವಾಲಯದ ವಿಶೇಷವೆಂದರೆ ವಿವಿಧ ದೇವರ ಮೂರ್ತಿಗಳಾದ 'ತ್ರಿಪುರ ಸಂಹಾರ ಕಥಾಬಿಂಬ, ಸಂಮುದ್ರ ಮಥನ ಚಿತ್ರ, ಮುಡಿನಾಗರ, ತೋರಣ, ಮಹಾಭಾರತದ ಗೌರೀವೃತದ ಸನ್ನಿವೇಶ, ಆದಿಶೇಷ, ಪಾರ್ವತಿ, ಪರಮೇಶ್ವರ, ಗಣಪತಿ, ಷಣ್ಮುಖ, ನವಲೇರಿ ಪ್ರದಕ್ಷಿಣೆ ಹೊರಟಚಿತ್ರ, ಗೋವರ್ಧನಗಿರಿ, ರಾವಣನು ಆತ್ಮಲಿಂಗವನ್ನು ಹೊತ್ತೊಯ್ಯುವುದು, ಶಾಸನೋಕ್ತವಾದ ಮೂರುಕಾಲಿನ ಮಂಚ, ಅಂಬಾರಿ ಹಾಗೂ ಶಿವ ಲಿಂಗಗಳನ್ನು ಹೊತ್ತೊಯ್ಯುವ ಆನೆಗಳು, ಚತುಮುಖಖ ಬಸವಣ್ಣ; ವಿಶ್ವನಾಥಲಿಂಗ, ಹಂಪೆವಿರೂಪಾಕ್ಷ, ಸೊನ್ನಲಾಪುರದ ಸಿದ್ಧರಾಮೇಶ್ವರ, ಅಮೃತಭಾವಿಗಳು ಕಾಮಧೇನು ಕಲ್ಪವೃಕ್ಷ, ಕಾಲಕಾಲೇಶ್ವರ ಮೂರ್ತಿ ರಾಘವೇಂದ್ರಸ್ವಾಮಿಗಳ ವೃಂದಾವನ, ಕಾಳಭೈವರ, ಬೇಡರ ಕಣ್ಣಪ್ಪನ ಶಿವರಾತ್ರಿ ಮಹಿಮೆಯ ಕಥೆ ಅಂದರೆ ಬೇಟೆಯಾಡಿ ಪ್ರಾಣಿಯ ಮಾಂಸವನ್ನು

ದೇವರಿಗೆ ಅರ್ಪಿಸುವುದು, ನಂದಿವಾಹನ, ಉಗ್ರ ನರಸಿಂಹ, ಲಕ್ಷ್ಮೀನಾರಾಯಣ, ವಿಷ್ಣುಲಕ್ಷ್ಮೀ, ಗಜಲಕ್ಷ್ಮೀ, ದುರ್ಗ, ಷಣ್ಮುಖ, ಸಪ್ತಾರೂಢ, ಸೂರ್ಯದೇವ, ಲಕ್ಷ್ಮೀನರಸಿಂಹ, ಕೈಲಾಸರಥ ಸೂರ್ಯಚಂದ್ರಶಿರಹಟ್ಟಿ ಫಕೀರಸ್ವಾಮಿ, ಸಂಗಮೇಶ್ವರ, ವರದಾ ಶಂಕರ, 63 ಪುರಾತನರ ಪ್ರತೀಕದ ಸಾಲುಲಿಂಗಗಳು, ಆದಿಶೇಷ, ಹರಿ, ಬ್ರಹ್ಮ ರುದ್ರ, ಶಿರಿಯಾಳ, ಚಾಂಗುಣಿ–500 ಕ್ಕೂ ಹೆಚ್ಚು ಚಿಕ್ಕ ಚಿಕ್ಕ ಲಿಂಗಗಳು, ಬೃಹತ್ ಏಕಶಿವಲಿಂಗ ಪಂಚಮುಖಲಿಂಗ, ಗರುಡ ಗಂಭ, ರುಂಡಮಾಲೆ, ತ್ರಿಸೂಲಗಂಟೆ, ನಾಗಯಕ್ಷ, ನಾಗ, ದೇವಿ, ಮಂಟಪದ ಮೇಲೆ ಒಂಭತ್ತು ಜನಶಿವಶರಣರು ಇದ್ದ ಶಿಲ್ಪಗಳು, ಪ್ರಾಕಾರದ್ವಾರದ ಒಳಗೆ ಹಲವು ನಾಗ–ನಾಗಿ ಹಾವುಗಳ ಸೂರಳಿಪಟ್ಟಿಕೆ, ವೈಶ್ಯ ಕುಲದ ಶಿವ ಆರಾಧಕನು ತನ್ನ ಎತ್ತು ಬಂಡೆಗಳ ಜೊತೆ ಸ್ವರ್ಗಕ್ಕೆ ಹೋಗುವ ವೀರಗಲ್ಲು, ಪಂಚ ತಂತ್ರಕಥೆಯ ಶಿಲ್ಪ, ರೇಣಿಕೆಯೂ ಕೊಡಹೊತ್ತ ಚಿತ್ರದ ಶಿಲ್ಪ, 363 ಏಕಾದಶಲಿಂಗ, ಕಲ್ಲಿನ ಹರಿವಾಣ ಮುನಿಸುಲಿಂಗ, ಬನಶಂಕರಿ ದೇವತಿ ಶಿಲ್ಪ; ಕೈಲಾಸ ನಿಚ್ಚಣಿಕೆ ಶಿಲ್ಪ, ವೀರಭದ್ರನ ಅವತಾರ ಶಿಲ್ಪ ಹೀಗೆ ನೂರಾರು ದೇವರು ದೇವತೆಗೆ ಕಲ್ಲಿನ ಮೂರ್ತಿ ಶಿಲ್ಪಗಳು ಒಂದೇ ದೇವಾಲಯದಲ್ಲಿರುವುದು ವಿಶೇಷವಾಗಿರುವುದು.

ರಾವಣನು ಆತ್ಮಲಿಂಗವನ್ನು ತಲೆಯ ಮೇಲೆ ಹೊತ್ತೊಯ್ಯುವ ಶಿಲ್ಪ, ಬೇಡರಕಣ್ಣಪ್ಪನು ಆಚರಣೆ ಬೇಟೆಯ ಶಿಲ್ಪ, ಶಾಸನೋಕ್ತವಾದ ಕಲ್ಲಿನ ತ್ರಿಕಾಲ ಮಂಚ, ಕೊಡೆಕಲ್ಲು, ಬಸವಣ್ಣನು ಸಾರಿದ ವಚನದಂತೆ ಕಲ್ಲು ಕೋಳಿಯಾಗಿ ಕೂಗುವುದು, ಮುಲ್ಲಾ ಬಂದು ಚೂರಿ ಹಾಕುವ ದೃಶ್ಯವಿರುವ ಶಿಲ್ಪಗಳಂತೆ ಕೆಲವು ವೈಶಿಷ್ಟ್ಯ ಶಿಲ್ಪಗಳು ನಮ್ಮ ಕರ್ನಾಟಕದ ಬೇರಾವ ಸ್ಥಳಗಳಲ್ಲಿ ಸಿಗದೆ ಇರುವಂತವುಗಳಾಗಿದ್ದು, ಇದು ವಿಶಿಷ್ಟತೆಯಲ್ಲಿ ಏಕತೆಯನ್ನು ಮೆರೆದ 'ಪುರ'ದ ಐತಿಹಾಸಿಕ ಚಿತ್ರಣ ನಮಗೆ ಒಂದೇ ಕಡೆ ದೊರಕುತ್ತದೆ. ಇದೆಲ್ಲವನ್ನು ಗಮನಿಸಿದಾಗ ಇಲ್ಲಿ 3 ರೀತಿಯ ಪ್ರಮುಖ ಭಿನ್ನವಾದ ಅಂಶಗಳನ್ನು ಇಲ್ಲಿ ಗುರ್ತಿಸಬಹುದಾಗಿದೆ. ಸಾಂಸ್ಕೃತಿಕ ಚರಿತ್ರೆ, ಹಾಗೂ ಇಲ್ಲಿಯ ಸೋಮನಾಥ ದೇವಾಲಯದ ಶಿಲ್ಪಗಳ ವೈಶಿಷ್ಟ್ಯತೆ ಹಾಗೂ 15ನೇ ಶತಮಾನದಲ್ಲಿ ಇಟ್ಟಿಗೆಯ ಗೋಪುರಗಳಿಂದ ಜೀರ್ಣೋದ್ಧಾರಗೊಂಡ ದೇವಾಲಯ ಇವು ವಾಸ್ತುಶಿಲ್ಪಕಲೆಯಲ್ಲಿ ಕಂಡುಬರುವ ವೈಶಿಷ್ಟ್ಯತೆ ಗಳಾಗಿದ್ದು ಕರ್ನಾಟಕದ ಚರಿತ್ರೆಯಲ್ಲಿ ಸಂಶೋಧಕರ ಅಧ್ಯಯನಕ್ಕೆ ಹೊಸ ಚೈತನ್ಯವನ್ನು ಮೂಡಿಸುವವುಗಳಾಗಿದ್ದುದರಿಂದ ಕೊಪ್ಪಳ ಜಿಲ್ಲೆಯ 'ಪುರ' ಗ್ರಾಮದ ಬಗ್ಗೆ ಪುನಃ ವಿಮರ್ಶೆಗೊಳಪಡಿಸಿ ಹೇಳಬಯಸಿರುವುದು ಈ ಸಂಪ್ರಬಂಧದ ಮುಖ್ಯ ಉದ್ದೇಶವಾಗಿರುವುದು. ದೇವಾಲಯಗಳ ನಿರ್ಮಾಣ ಮೂರ್ತಿಗಳ ಪ್ರತಿಷ್ಠಾಪನೆ, ಒಂದು ಪವಿತ್ರವಾದ ಕೆಲಸ ಎಂದು ನಂಬಿದ್ದ ನಮ್ಮ ಪ್ರಾಚೀನರು ಈ ಸದುದ್ದೇಶದ ಹಿನ್ನಲೆಯಲ್ಲಿ ನಮ್ಮ ನಾಡಿನಲ್ಲಿ 'ಪುರ'ದಂತ ಗ್ರಾಮದಲ್ಲಿ ಅನೇಕ ದೇವಾಲಯ ಮತ್ತು ಶಿಲ್ಪಕಲೆಗಳು ಅರಳಿರಲು ಸಾಕು, ಆ ಹಿನ್ನಲೆಯಲ್ಲಿಯೇ ಕೋಟಿ ಲಿಂಗಗಳುಳ್ಳ ದೇವಾಲಯ ಪುರದಲ್ಲಿ ರಚನೆಯಾಗಿರಬೇಕೆನಿಸುತ್ತದೆ. ಸಾಮಾನ್ಯವಾಗಿ ಇಲ್ಲಿರುವ ಪ್ರತಿಯೊಂದು ಶಿವಲಿಂಗವು ಬ್ರಹ್ಮವಿಷ್ಣು ಮಹೇಶ್ವರ ಎಂಬ ಮೂರು ಭಾಗಗಳಿಂದ ಕೂಡಿರುತ್ತದೆ. ಆದರೆ 'ಪುರ'ದಲಿ ಕೆಲವೊಂದು ಸ್ವತಂತ್ರ ಶಿವಲಿಂಗಗಳು ಇವೆ. ಅಂದರೆ ಮೂರು ಭಾಗಗಳನ್ನು ಅವು ಒಳಗೊಂಡಿವೆ. ಇನ್ನೂ ಕೆಲವು ಶಿವಲಿಂಗಗಳು ಬೇರೆ ಶಿವಲಿಂಗದ ಪಾಣಿಪೀಠದ ಮೇಲೆ ಬಾಣ ರೂಪದಲ್ಲಿ ಕಾಣಿಸುತ್ತವೆ. ಇದು ಸಮಯದ ಉಳಿತಾಯ ಮತ್ತು ಸಂಪತ್ತಿನ ಉಳಿತಾಯದ ಹಿನ್ನೆಲೆಯಲ್ಲಿ ಈ ಶಿಲ್ಪಗಳು ಮಾಡಿರಬಹುದಾದ ಆ ಶಿಲ್ಪಿಯ ಚಾತುರ್ಯ ಇದಾಗಿದೆ. ಪ್ರತಿವರ್ಷ ಶ್ರಾವಣ ಮಾಸದ ಕೊನೆಯ ಸೋಮವಾರದಂದು ಇಂದಿಗೂ ಈ ಪುಣ್ಯಕ್ಷೇತ್ರದಲ್ಲಿ ಅಲ್ಲಿಯ ಜನರಿಂದ ರಥೋತ್ಸವ ಮತ್ತು ಜಾತ್ರೆ ಜರುಗುವುದು.

ನಾಡಿನ ಧರ್ಮ, ಸಂಸ್ಕೃತಿ, ಕಲೆಯಲ್ಲಿ ಮೇಳೈಸಿರುವ 'ಪುರ' ಕರ್ನಾಟಕದ ಚರಿತ್ರೆಯಲ್ಲಿ ಪ್ರಸಿದ್ಧಿಗೆ ಬರುವಂತಾಗಲು ಹೊಸ ದೃಷ್ಟಿಕೋನದಿಂದ ಇನ್ನೂ ಹೆಚ್ಚಿನ ಸಂಶೋಧನಾ ಅಧ್ಯಯನ ನಡೆಸುವುದು ಅವಶ್ಯವಾಗಿರುತ್ತದೆ. ಪುರದ ಸೋಮೇಶ್ವರ ದೇವಾಲಯ, ಗರ್ಭಗೃಹ ಸಭಾಮಂಟಪ, ಅರ್ಧಮಂಟಪ, ಮುಖಮಂಟಪಗಳು ವಿಶಾಲವಾದ ಪ್ರಕಾರದಿಂದ ಕೂಡಿದ್ದು ಪ್ರವೇಶ ದ್ವಾರದ ಇಕ್ಕೆಲಗಳಲ್ಲಿ ಶೈವ ವೈಷ್ಣವ ಪಂಥದ ದ್ವಾರಪಾಲಕ ವಿಗ್ರಹಗಳಿವೆ. ಮುಖಮಂಟಪ ಸಭಾಮಂಟಪದ ಮಧ್ಯ ಒಂದು ಚಿಕ್ಕ ಮಂಟಪ, ಚಿಕ್ಕ ಚಿಕ್ಕ ಪ್ರವೇಶದ್ವಾರವುಳ್ಳ ಇದರ ಇಕ್ಕೆಲಗಳಲ್ಲಿ ಚಿಕ್ಕ ಚಿಕ್ಕ ಗುಡಿಗಳಿವೆ. ಇದರ ಸಭಾ ಮಂಟಪವು ಭೂಮಟ್ಟದಲ್ಲಿದ್ದು, ಇದರ ಬಲ ಗೋಡೆಗಳಲ್ಲಿ ಗೂಡುಗಳು ಕೆಳಭಾಗದಲ್ಲಿ ತೀರ್ಥದ ಹೊಂಡವಿದೆ. ಎರಡು ಸಾಲುಗಳಲ್ಲಿ ನಿಂತಿರುವ ಚೌಕಾಕಾರದ ಆರು ಕಂಬಗಳ ಮಧ್ಯ ನಂದಿ ಶಿಲ್ಪ; ಚಿಕ್ಕದಾದ ಪ್ರವೇಶ ದ್ವಾರವನ್ನು ಹೊಂದಿದ ಗರ್ಭಗೃಹದಲ್ಲಿ ಸುಮಾರು ಎರಡು ಅಡಿ ಎತ್ತರದ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿರುವುದು. ಎತ್ತರ ಸ್ಥಳದ ಮೇಲೆ ಕಟ್ಟಲಾದ ಈ ದೇವಾಲಯ ಇಂದು ಸಂಪೂರ್ಣ ಜೀರ್ಣಾವಸ್ಥೆಯಲ್ಲಿರುತ್ತದೆ.

ತಲ ವಿನ್ಯಾಸ, ಗರ್ಭಗೃಹ, ಅಂತರಾಳ, ನವರಂಗ ಮಂಟಪಗಳಿದ್ದು ಗರ್ಭಗೃಹ ಅಂತರಾಳಗಳು ಸಂಪೂರ್ಣ ಜೀರ್ಣಾವಸ್ಥೆಯಲ್ಲಿದ್ದರೆ ನವರಂಗಮಂಟಪ ಸಂಪೂರ್ಣ ಹಾಳಾಗಿದೆ. ದೇವಾಲಯದ ದ್ವಾರವು ಪಂಚ ಶಾಖೆಗಳಲ್ಲಿ ಜೋಬಳ್ಳಿ, ಚಿತ್ರ ಕತ್ತನೆಗಳಿಂದ ಕೂಡಿದ್ದು ಕೆಳಭಾಗದಲ್ಲಿ ಶೈವ ದ್ವಾರಪಾಲಕ ಶಿಲ್ಪ, ಮಂಗಲಫಲಕಗಳಲ್ಲಿ ಗಜಲಕ್ಷ್ಮೀಯ ಉಬ್ಬು ಶಿಲ್ಪ ಹಾಗೂ ಶಿಖರಪಟ್ಟಕ್ಕೆ ಅಲಂಕಾರಗಳಿವೆ. ದೇವಾಲಯದ ಸುತ್ತಲೂ ಪ್ರಕಾರಗೋಡೆಗೆ ಪದ್ಮಗಳಿವೆ. ಮುಂಭಾಗದ ವಿಶಾಲ ಆವರಣದ ಗೋಡೆ ಸರಳ ರೀತಿಯಲ್ಲಿದೆ. ಇದಕ್ಕೆ ಪೂರ್ವದಲ್ಲಿ ಪ್ರವೇಶದ್ವಾರವಿದ್ದು ಪ್ರವೇಶದ ಇಕ್ಕೆಲಗಳಲ್ಲಿ ಚೌಕಾಕಾರದ ಕಂಬಗಳನ್ನು ಹೊಂದಿದ ಜಗಲಿಗಳಿವೆ. ಕೈಪಿಡಿ ಗೋಡೆಯಲ್ಲಿ ನಂತರ ಕಾಲದ ವಿಜಯನಗರದ ಅರಸನ ಆಳ್ವಿಕೆ ಕಾಲಕ್ಕೆ ಇಟ್ಟಿಗೆಗಾರೆಗಳಿಂದ ನಿರ್ಮಿಸಿದ ನಾಲ್ಕು ಮೂಲೆಗಳಲ್ಲಿ ನಂದಿ ಶಿಲ್ಪಗಳು ಮಧ್ಯ ಗೋಪುರ ಸುತ್ತಲೂ ಪದ್ಮಗಳಿವೆ. ಈ ದೇವಾಲಯದ ನಿರ್ಮಾಣಕ್ಕಾಗಿ ಬೆಣಚು ಶಿಲೆಯನ್ನು ಬಳಸಿದ್ದು ಇಲ್ಲಿ ಪ್ರತಿಷ್ಠಾಪಿಸಿದ ಶಿಲ್ಪಗಳು ಕಪ್ಪು ಶಿಲೆಯವುಗಳಾಗಿವೆ. ಅದೇ ದೇವಾಲಯ ಮೇಲಿನ ಭಾಗ ಮತ್ತು ಒಳಗಿನ ಕೆಲವು ಭಾಗ ವಿಜಯನಗರ ಮತ್ತು ನಂತರದ ಅವಧಿಯಲ್ಲಿ ಜೀರ್ಣೋದ್ಧಾರಗೊಳಿಸಲಾಗಿರುವುದಾಗಿ ತಿಳಿದುಬರುವುದು. ಚಾಲುಕ್ಯ ಅರಸ ಒಂದನೇ ಸೋಮೇಶ್ವರನ ಕಾಲದ ತೇದಿಯಿಲ್ಲದ ಶಾಸನವು ಸೌರಾಷ್ಟ್ರ ಸೋಮನಾಥ ದೇವಾಲಯವನ್ನು ಉಲ್ಲೇಖಿಸುತ್ತಿದ್ದು ಮೂಲಸ್ಥಾನ ಮತ್ತು ಶಾಸನೋಕ್ತ ಸೋಮನಾಥ ದೇವಾಲಯ ಬೇರೆ ಬೇರೆಯಾಗಿರದೆ ಒಂದೆಯಾಗಿವೆ. ಅಂತೆಯೇ ಪುರ ಗ್ರಾಮದ ಜನರು ಇಂದಿಗೂ ಅದನ್ನು ಸೋಮೇಶ್ವರನ ಹೆಸರಿನಿಂದಲೇ ಕರೆಯುವರು. ಕ್ರಿ. ಶ. 12ನೇ ಶತಮಾನದ ಚಾಲುಕ್ಯರ ಶಾಸನವು ಗವರೇಶ್ವರ ದೇವಾಲಯದ ಕುರಿತು ಹೆಸರಿಸುತ್ತಿದ್ದು, ಈ ದೇವಾಲಯಕ್ಕೆ ವ್ಯಾಪಾರಸ್ಥರಾದ ನಾನಾದೇಶಿ ಮುಮ್ಮುರಿದಂಡರು ಶರಣರು ಹಾಗೂ ವಿವಿಧ ಅಗ್ರಹಾರಗಳ ಸಮಸ್ತ ಸ್ಥಳದವರು ಸೇರಿ ಆ ದೇವರ ಅಂಗಭೋಗ ರಂಗಭೋಗ ಪಾತ್ರವುಳ್ಳ ಚೈತ್ರ ಪಂಚಪರ್ವ ಇತ್ಯಾದಿಗಳಿಗೆ ಹಲವು ರೀತಿಯ ದಾನಗಳನ್ನು ನೀಡಿರುವುದನ್ನು ಶಾಸನ ಹೇಳುವುದು, ಇದನ್ನೇ ಪುರ ಗ್ರಾಮದ ಜನರು ಈಶ್ವರ ದೇವಾಲಯವೆಂದು ಕರೆಯುವರು.


ಹೀಗೆ ನಾಡಿನ ಅನೇಕ ಗ್ರಾಮಗಳಲ್ಲಿ ಇಂತಹ ವೈಶಿಷ್ಟ್ಯತೆವುಳ್ಳ ಶಾಸನಗಳು, ದೇವಾಲಯಗಳು, ಶಿಲ್ಪಗಳು, ಕೊಪ್ಪಳಜಿಲ್ಲೆಯಲ್ಲಿ ಕಂಡುಬರುತ್ತಿದ್ದು, ಕೊಪ್ಪಳ ಜಿಲ್ಲೆಯ ಸಂಸ್ಕೃತಿಯು ಕರ್ನಾಟಕ ಸಂಸ್ಕೃತಿಗಿಂತ ಭಿನ್ನವಾದುದಲ್ಲ, ಇಲ್ಲಿಯ ಶಾಸನೋಕ್ತ ಪುರ ಪಟ್ಟಣದ ವಾಸ್ತುಶಿಲ್ಪಕಲೆಯನ್ನು ನಾವು ವಿಮರ್ಶೆ ಗೊಳಪಡಿಸಿ ನೋಡಲಾಗಿ ಕರ್ನಾಟಕದ ಚರಿತ್ರೆಯಲ್ಲಿಯೇ ಆಶ್ಚರ್ಯವನ್ನುಂಟು ಮಾಡುವಂತಹ ಅನೇಕ ಸೂಕ್ಷ್ಮ ವಿಚಾರಗಳನ್ನು ನಾವು ಇಲ್ಲಿಯ ಶಿಲ್ಪಕಲೆಯಲ್ಲಿ ಕಾಣುತ್ತೇವೆ. ಸಂಶೋಧಕರ ನಿರ್ಲಕ್ಷತನದಿಂದ ಇಲ್ಲಿಯವರೆಗೆ ಹಾಗೆಯೇ ಉಳಿದುಕೊಂಡು ಬಂದ 'ಪುರ'ದ ಸೋಮೇಶ್ವರ ದೇವಾಲಯದ ಕೋಟಿಲಿಂಗಗಳು, ವಿವಿಧ ರೀತಿಯ ಶಿಲ್ಪಗಳು, ಮೂರು ಕಾಲಿನ ಮಂಚ ತಲೆಯ ಮೇಲೆ ಆತ್ಮಲಿಂಗ ಹೊತ್ತೊಯ್ಯುವ ರಾವಣ ಶಿಲ್ಪ, ಬೇಡರಕಣ್ಣಪ್ಪನ ಶಿಲ್ಪ, ಕಲ್ಲುಕೋಳಿಯಾಗಿ ಕೂಗುವ ಶಿಲ್ಪ ಸಣ್ಣ ಬಾಗಿಲುಗಳುಳ್ಳ ದೇವಾಲಯ ಇವೆಲ್ಲವುಗಳು ನಿಜಕ್ಕೂ ಕರ್ನಾಟಕ ಇತಿಹಾಸದಲ್ಲಿಯೇ ವೈಶಿಷ್ಟ್ಯತೆಯನ್ನು ಹೊಂದಿದೆ ಎಂದು ತಿಳಿಯಪಡಿಸುವುದೇ ಈ ಪ್ರಬಂಧದ ಉದ್ದೇಶವಾಗಿರುವುದು.

### ಆಕರ ಗ್ರಂಥಗಳು


1. ದೇವರಕೊಂಡಾರೆಡ್ಡಿ(ಸಂ) ಕೊಪ್ಪಳಜಿಲ್ಲೆಯ ಶಾಸನ, ಸಂಪುಟ–2, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999.
2. ದೇಸಾಯಿ ಪಿ. ಪಿ. ಶಾಸನ ಪರಿಚಯ ಕರ್ನಾಟಕ ಇತಿಹಾಸ ಸಂಶೋಧನಾಲಯ ಮಂಡಲ, ಧಾರವಾಡ, 1956.
3. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, 1979.
4. ಗೋಪಾಲರಾವ್ ಎಚ್. ಎಸ್., ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಾಚ್ಯ ವಸ್ತು ನಿರ್ದೇಶನಾಲಯ, ಮೈಸೂರು, 1993.
5. ಚನ್ನಬಸಪ್ಪ ಎಸ್. ಪಾಟೀಲ, ಇನ್‌ಸ್ಕ್ರಿಪ್ಷನ್ ಆಫ್ ಕರ್ನಾಟಕ (ಕೊಪ್ಪಳ ಜಿಲ್ಲೆ) ಪ್ರಾಚ್ಯವಾಸ್ತುನಿರ್ದೇಶನಾಲಯ, ಮೈಸೂರು, 1998.
6. ಶಾಂತಕುಮಾರಿ ಎಸ್. ಎಲ್. ಹಿಸ್ಟರಿ ಆಫ್ ದ ಅಗ್ರಹಾರಾಸ್, ಕರ್ನಾಟಕ 400–1300 ಮದ್ರಾಸ, ನ್ಯೂ ಎರ್ ಪಬ್ಲಿಕೇಷನ್ಸ್, 1986.
7. ಅಪರ್ಣಾ ಕೂ.ಸಾ. ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪೆ, 1999.
8. ಪಾಟೀಲ ಎಚ್. ಎಸ್. ತಿರಳ್ಗನ್ನಡ ಅಖಿಲ ಭಾರತ 62ನೇ ಕನ್ನಡ ಸಾಹಿತ್ಯ ಸಮ್ಮೇಳನ ಸಂಚಿಕೆ, ಕೊಪ್ಪಳ, 1993
9. ಷೇಕ ಅಲಿ ಬಿ. ಮತ್ತು ಸುಂದರ ಅ. (ಸಂ) : ಕರ್ನಾಟಕ ಚರಿತ್ರೆ ಸಂಪುಟ–1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997.
10. ಸುರೇಶ ಸು. ಕೆ. ಎಂ. ಮತ್ತುಸಂಗಡಿಗರು, ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ, ಪ್ರಸಾರಾಂಗ, ಹಂಪಿ. 2001.
11. ಮೇಲಕಾರ ಎಸ್. ಕೆ. ಕೊಪ್ಪಳ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ –2002)
13. ಪಾಟೀಲ ಸಿ. ಎಸ್. ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಯ ದೇವಾಲಯ–8 ಪ್ರಾಚ್ಯವಸ್ತುನಿರ್ದೇಶನಾಲಯ, ಮೈಸೂರು.
14. ಹೆನ್ರಿಕಜಸ್ಸ್, ಚಾಲುಕ್ಯನ ಆರ್ಟಿಟ್ರಕ್ಚರ್ಸ್ ಆಫ್, ದಿ ಕೊನರ್ಸ್ಲಾ ಡಿಸ್ಟ್ರಿಕ್ಟ್


■■

# ಅರವಿಂದ ಘೋಷ



ಜನನ : 1872 ಅಗಸ್ಟ 15

ಜನ್ಮಸ್ಥಳ : ಕಲ್ಕತ್ತಾ

ತಂದೆ : ಕೃಷ್ಣಧನ

ತಾಯಿ : ಸ್ವರ್ಣಲತಾ

**ಅರವಿಂದರ ತತ್ವಜ್ಞಾನ** (Philosophy of Aravinda)

ಅರವಿಂದರು ಶ್ರೇಷ್ಠ ತತ್ವಜ್ಞಾನಿಗಳಾಗಿದ್ದರೂ ತಮ್ಮನ್ನು ತತ್ವಜ್ಞಾನಿಯೆಂದು ಕರೆದುಕೊಳ್ಳುತ್ತಿರಲಿಲ್ಲ. ಅರವಿಂದರ ತತ್ವಜ್ಞಾನದಲ್ಲಿ ಉದಾತ್ತಸತ್ಯ, ಯೋಗ, ಜೀವನದ ದೃಷ್ಟಿಕೋನ, ಮನಸ್ಸು, ಅಂತರ್‌ದೃಷ್ಟಿ ಮುಂತಾದವುಗಳಿಗೆ ಮಹತ್ವವಿದೆ. ಅರವಿಂದರಿಗೆ ಆಧ್ಯಾತ್ಮಿಕ ಸೃಜನಶೀಲತೆ ಮತ್ತು ಬೌದ್ಧಿಕ ಶಕ್ತಿಗಳಲ್ಲಿ ಅಪಾರ ವಿಶ್ವಾಸವಿತ್ತು. ಮನುಷ್ಯನು ತನ್ನ ಸರ್ವಸ್ವವನ್ನು ಭಗವಂತನಿಗೆ ಸಮರ್ಪಿಸಬೇಕು. ಗುಣತ್ರಯಗಳಿಂದ ಅತೀತನಾಗಿ ಮನುಷ್ಯ ಬೆಳೆಯಬೇಕು. ಆಗ ಮಾತ್ರ ಭಗವಂತನೊಂದಿಗೆ ಸಾಮರಸ್ಯ ಸಾಧ್ಯ. ಇದನ್ನು ಸಾಧಿಸಬೇಕಾದರೆ ಮನುಷ್ಯನು ಅಜ್ಞಾನ ಮತ್ತು ಅಂಧಕಾರಗಳಿಂದ ಮುಕ್ತನಾಗಬೇಕು. ಇವುಗಳಿಂದ ಬಿಡುಗಡೆ ಹೊಂದಲು ಯೋಗವನ್ನು ಆಶ್ರಯಿಸಬೇಕು. ಯೋಗವು ಶಾಂತಿ ಮತ್ತು ನೆಮ್ಮದಿಗಳನ್ನು ನೀಡುವದು. ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡುವದು. ದೇವರಲ್ಲಿ ಅಚಲವಾದ ವಿಶ್ವಾಸವನ್ನುಂಟು ಮಾಡುವದು. ಈ ದೃಷ್ಟಿಯಿಂದ ಅರವಿಂದರ ಯೋಗವು ಮಾನವನನ್ನು ದೇವಮಾನವನನ್ನಾಗಿ ಮಾಡುವ ಧ್ಯೇಯವನ್ನು ಹೊಂದಿತ್ತು.

**ಅರವಿಂದರ ಅಭಿಪ್ರಾಯದಲ್ಲಿ ಶಿಕ್ಷಣ**

(Arvinda's views of education)

ಅರವಿಂದರ ಪ್ರಕಾರ ಶಿಕ್ಷಣವು ಕೇವಲ ಯಾಂತ್ರಿಕ ಪ್ರಕ್ರಿಯೆಯಲ್ಲ ಅಥವಾ ವಿಷಯಗಳ ಮಾಹಿತಿಯನ್ನು ಸಂಗ್ರಹಿಸಿ ಇಟ್ಟುಕೊಳ್ಳುವದಲ್ಲ. ಶಿಕ್ಷಣವು ವ್ಯಕ್ತಿಯ ಆಂತರಿಕ, ಭೌತಿಕ ಪ್ರಗತಿಯನ್ನು ಸಾಧಿಸಿ ಅವನಲ್ಲಿಯ ಸೂಕ್ತ ಶಕ್ತಿಗಳನ್ನು ಬಲಪಡಿಸಬೇಕು. ಅವರು ತಮ್ಮ ಶೈಕ್ಷಣಿಕ ವಿಚಾರ ತತ್ವ ಮತ್ತು ಗುರಿಗಳನ್ನು ''ಕರ್ಮಯೋಗಿನ್'' ಪತ್ರಿಕೆಯಲ್ಲಿ ಧಾರಾವಾಹಿ ಲೇಖನ ಮೂಲಕ ಪ್ರಕಟಪಡಿಸಿದ್ದಾರೆ. 1910 ರ ಫೆಬ್ರುವರಿ 12 ರಿಂದ ಎಪ್ರೀಲ್ 2 ರವರೆಗೆ ಆ ಪತ್ರಿಕೆಯಲ್ಲಿ ಪ್ರಕಟವಾದ ಅವರ

**ಶೈಕ್ಷಣಿಕ ವಿಚಾರಗಳು**

1. ಪ್ರತಿಯೊಂದು ಮಗುವಿನಲ್ಲಿ ಅವರದೇ ಆದ ಕೆಲವು ಅಂತಃಶಕ್ತಿಗಳಿರುತ್ತವೆ. ಅವುಗಳ ವಿಕಾಸವು ಶಿಕ್ಷಣದ ಒಂದು ಗುರಿ.
2. ಶೈಶವ, ಬಾಲ್ಯ, ತಾರುಣ್ಯ, ಪ್ರೌಢಾವಸ್ಥೆಗಳಲ್ಲಿ ಮನುಷ್ಯರ ಚೈತನ್ಯ ಮತ್ತು ಮನಸ್ಸುಗಳ ವಿಕಾಸವು ನಿರಂತರವಾಗಿ ನಡೆದಿರುತ್ತದೆ. ಈ ಅವಸ್ಥೆಗಳಲ್ಲಿ ವಿಕಸನ ಕಾರ್ಯಕ್ಕೆ ಸಹಾಯ ಮಾಡುವದೇ ಶಿಕ್ಷಣವಾಗಿದೆ.
3. ಇಂದ್ರಿಯಗಳನ್ನು ತರಬೇತಿಗೊಳಿಸುವದೇ ಶಿಕ್ಷಣ.
4. ಮಾನವನ ಬೌದ್ಧಿಕ, ನೈತಿಕ, ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಲು ಸಹಾಯ ಮಾಡುವದೇ ಶಿಕ್ಷಣವಾಗಿದೆ.

**ಶೈಕ್ಷಣಿಕ ತತ್ವಗಳು** (Principal of Education)

1. ಮಗು ನಿರ್ಜೀವವಾದ ಪ್ಲಾಸ್ಟಿಕ ವಸ್ತುವಲ್ಲ, ಅದು ಬೆಳೆಯುತ್ತಿರುವ ಸಸಿಯಂತೆ ಇರುವದು. ಅದರ ಬೆಳವಣಿಗೆಗೆ ಅನುಕೂಲ ಮಾಡಿಕೊಡುವದು ಪಾಲಕರ ಮತ್ತು ಶಿಕ್ಷಕರ ಕರ್ತವ್ಯವಾಗಿದೆ.
2. ಶಿಕ್ಷಕನು ಮಾರ್ಗದರ್ಶಕನಾಗಿ ಮಕ್ಕಳ ಕಲಿಯುವಿಕೆಗೆ ಸಲಹೆ–ಸೂಚನೆಗಳನ್ನು ನೀಡಬಹುದು.
3. ಮಕ್ಕಳ ಮನಸ್ಸನ್ನು ತರಬೇತಿಗೊಳಿಸಿ ತಮ್ಮಷ್ಟಕ್ಕೆ ತಾವೇ ಜ್ಞಾನವನ್ನು ಗ್ರಹಿಸುವಂತೆ ಮಾಡಬೇಕು.
4. ಶಿಕ್ಷಣದ ಚಟುವಟಿಕೆಗಳು ಸಮೀಪದಿಂದ ದೂರದಡೆಗೆ, ವರ್ತಮಾನದಿಂದ ಭವಿಷ್ಯದೆಡೆಗೆ ಸಾಗುವಂತಿರಬೇಕು.
5. ಶಿಕ್ಷಣವು ಯೋಗ ಮತ್ತು ಧ್ಯಾನಗಳನ್ನು ಆಧರಿಸಿರಬೇಕು.

**ಶೈಕ್ಷಣಿಕ ಗುರಿಗಳು** (Educational Objectives)

1. ಮಗುವಿನಲ್ಲಿ ಹುದುಗಿರುವ ಅಂತಃಶಕ್ತಿಗಳನ್ನು ಮಗುವಿಗೆ ತೋರಿಸಿಕೊಟ್ಟು ಅವುಗಳ ವಿಕಾಸ ವಿಧಾನವನ್ನು ಅವನಿಗೆ ತಿಳಿಸಿ ಹೇಳಬೇಕು.
2. ಅಹಂ ತತ್ವವನ್ನು ಮೆಟ್ಟಿ, ಸ್ವಾರ್ಥವನ್ನು ತ್ಯಜಿಸುವಂತೆ ಮಾಡುವುದು.
3. ಪ್ರತಿಯೊರ್ವನಿಗೂ ತನ್ನಲ್ಲಿರುವ ಅಂತಃಶಕ್ತಿಗಳ ಪರಿಚಯವಾಗಿ ಅವುಗಳ ವಿಕಾಸದ ಮೂಲಕ ಅಧ್ಯಾತ್ಮ ಜೀವಿಯಾಗಿ ಅವನು ಬದುಕಬೇಕು.
4. ಮನುಷ್ಯರಲ್ಲಿರುವ ಪ್ರೀತಿ, ಪ್ರೇಮ, ಪರೋಪಕಾರ ಗುಣಗಳನ್ನು ವಿಕಾಸಗೊಳಿಸುವ ವಿಶ್ವ ದೃಷ್ಟಿಕೋನವನ್ನು ಬೆಳೆಸಬೇಕು.
5. ರೂಪ, ರಸ, ಗಂಧ, ಸ್ಪರ್ಶ ಹಾಗೂ ಶಬ್ದಗಳನ್ನು ಗ್ರಹಿಸುವ ಪಂಚೇಂದ್ರಿಯಗಳನ್ನು ತರಬೇತಿಗೊಳಿಸಬೇಕು.

**ಮನಸ್ಸಿನ ನಾಲ್ಕು ಹಂತಗಳು** (Stages of Mind)

ಅರವಿಂದ ಅಭಿಪ್ರಾಯದಲ್ಲಿ ಮನಸ್ಸು ನಾಲ್ಕು ಅಂಗಗಳಿಂದ ಒಡಗೂಡಿದ ಒಂದು ಅಂತರ ಇಂದ್ರಿಯವಾಗಿದೆ.

**ಚಿತ್ತ** : ಇದು ಮನಸ್ಸಿನ ಮೊದಲ ಹಂತವಾಗಿದ್ದು ಇದು ಅನುಭವದ ಸಂಗ್ರಹಾಲಯವಾಗಿದೆ. ಈ ಚಿತ್ತವು ನಿಷ್ಕ್ರಿಯವಾಗಿರುವದು ಇದಕ್ಕೆ ತರಬೇತಿಯ ಅಗತ್ಯವಿಲ್ಲ. ಈ ಚಿತ್ತದಲ್ಲಿ ಸಂಗ್ರಹವಾದ ಅನುಭವಾಂಶಗಳನ್ನು ಸಚೇತನ ಜ್ಞಾಪಕ ಶಕ್ತಿಯು ತನಗೆ ಬೇಕಾದಾಗ ಆಯ್ಕೆ ಮಾಡಿಕೊಳ್ಳುವದು.

**ಮನಸ್ಸು** : ಇದು ಮನಸ್ಸಿನ ಎರಡನೇಯ ಹಂತ 'ಮನನ' ಎಂತಲೂ ಕರೆಯಲಾಗುವದು. ಇದು ಅನುಭವಿಸಿದಂತೆ ಅಥವಾ ಪಡೆದಂತೆ ಜ್ಞಾನದ ಭಾಗವನ್ನು ಸರಿಯಾಗಿ ಅರ್ಥೈಸಿಕೊಳ್ಳುವದು ಅಥವಾ ಪಡೆದುಕೊಳ್ಳುವದು. ಬಾಹ್ಯದಿಂದ ಗ್ರಹಿಸಿದ ಜ್ಞಾನಾಂಶಗಳು ಶುದ್ಧವಾದ ಮತ್ತು ಸಮೃದ್ಧವಾದ

✍ **ಕುಮಾರಸ್ವಾಮಿ ಎಸ್. ಹಿರೇಮಠ** ಎಂ.ಇಡಿ. ಅಧ್ಯಯನ ವಿದ್ಯಾರ್ಥಿ, ಬಿ.ವ್ಹಿ.ವ್ಹಿ.ಎಸ್. ಶಿಕ್ಷಣ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಶಿಕ್ಷಣ ವಿಭಾಗ, ಬಾಗಲಕೋಟ.

ಜ್ಞಾನಾಂಶಗಳನ್ನು ಸ್ವೀಕರಿಸುವುದಕ್ಕಾಗಿ ಅವುಗಳಿಗೆ ತರಬೇತಿ ಅಗತ್ಯವಾಗಿದೆ. ಅರವಿಂದರು ಮನಸ್ಸನ್ನು ಆರನೇಯ ಇಂದ್ರಿಯವೆಂದು ಕರೆದರು.

**ಬುದ್ಧಿ :** ಇದು ಮನಸ್ಸಿನಲ್ಲಿ ಸಂಗ್ರಹವಾದ ಜ್ಞಾನಾಂಶಗಳನ್ನು ಸಂಘಟಿಸುವದು ಹಾಗೂ ಸುವ್ಯವಸ್ಥೆಗೊಳಿಸುವದು ಬುದ್ಧಿಯು ರಚನಾತ್ಮಕ, ವಿಭಜನಾತ್ಮಕ, ತುಲನಾತ್ಮಕ, ನಿರ್ಣಯಾತ್ಮಕ, ಮುಂತಾದ ಶಕ್ತಿಗಳನ್ನು ಅದು ಹೊಂದಿದೆ.

**ಅಂತರಜ್ಞಾನ :** ಪ್ರತಿಯೊಬ್ಬ ಮಾನವನು ಪ್ರಕೃತಿಯಲ್ಲಿ ಚರಾಚರ ವಸ್ತುಗಳನ್ನು ನೋಡುವಾಗ ಅಂತರದೃಷ್ಟಿಯನ್ನು ಹೊಂದಿರಬೇಕು. ಪಂಚೇಂದ್ರಿಯಗಳ ಸಹಾಯವಿಲ್ಲದೇ ಮತ್ತು ತರ್ಕಶಕ್ತಿಗೆ ಅತೀತವಾಗಿ ಕೆಲವು ಜ್ಞಾನಗಳನ್ನು ನೇರವಾಗಿ ಪಡೆಯುವ ಸಾಮರ್ಥ್ಯ ಅಂತರ್‌ಜ್ಞಾನಕ್ಕೆ ಇರುವದು. ಈ ಸಾಮರ್ಥ್ಯವು ಅಸಾಮಾನ್ಯರಲ್ಲಿ, ಪ್ರತಿಭಾವಂತರಲ್ಲಿ, ಮಹಾತ್ಮರಲ್ಲಿ, ಮಹಾಪುರುಷರಲ್ಲಿ ಮತ್ತು ಮಹಿಮಾನ್ವಿತರಲ್ಲಿ ಮಾತ್ರ ಕಂಡುಬರುವದು ಜನಸಾಮಾನ್ಯರಲ್ಲಿ ಮನಸ್ಸು ಈ ಹಂತವನ್ನು ಮುಟ್ಟಿರುವುದಿಲ್ಲ ಮಕ್ಕಳಲ್ಲಿಯೂ ಈ ಶಕ್ತಿಯನ್ನು ಬೆಳೆಯುವಂತೆ ಮಾಡುವದು ಶಿಕ್ಷಕನ ಒಂದು ಕಾರ್ಯವಾಗಿದೆ.

**ಪಠ್ಯಕ್ರಮ** (Curriculum)

ಅರವಿಂದರು ರೂಪಿಸಿದ ಪಠ್ಯಕ್ರಮವನ್ನು ವೈಜ್ಞಾನಿಕ, ಮನೋವೈಜ್ಞಾನಿಕ ಮತ್ತು ಆಧ್ಯಾತ್ಮಿಕ ತತ್ವಗಳ ತಳಹದಿಯನ್ನು ಹೊಂದಿದೆ. ಮಕ್ಕಳಲ್ಲಿ ಸುಪ್ತವಾಗಿರುವ ಎಲ್ಲಾ ಅಂತಃಶಕ್ತಿಗಳ ಪರಿಪೂರ್ಣ ವಿಕಾಸವಾಗುವದಕ್ಕಾಗಿ ಪೂರಕವಾಗಿರುವ ಎಲ್ಲ ವಿಷಯಗಳನ್ನು ಅದು ಹೊಂದಿದೆ.

**ಶಾರೀರಿಕ ಶಿಕ್ಷಣ :** ಆಟ, ಓಟ, ಕ್ರೀಡೆ, ವ್ಯಾಯಾಮ, ಕಸರತ್ತು, ಅಂಗಸಾಧನೆ, ಕವಾಯತ್ತು ಮುಂತಾದವುಗಳನ್ನು ಪಠ್ಯದಲ್ಲಿ ಸೇರಿಸಬೇಕು. ಪೌಷ್ಟಿಕಾಂಶಗಳಿಂದ ಕೂಡಿದ ಆಹಾರ, ವೈದ್ಯಕೀಯ ಸಲಹೆ ಹಾಗೂ ಆರೋಗ್ಯ ಶಿಕ್ಷಣ ಮಕ್ಕಳಿಗೆ ಒದಗಿಸಬೇಕು.

**ಉಪಯುಕ್ತ ಶಿಕ್ಷಣ :** ಜೀವನದಲ್ಲಿ ಉಪಯುಕ್ತವಾಗುವ ಅಂಶಗಳನ್ನು ಪಠ್ಯದಲ್ಲಿ ಸೇರಿಸಬೇಕು ಎಂದು ಅರವಿಂದರ ಅಭಿಮತವಾಗಿತ್ತು, ಆದ್ದರಿಂದ ನಾಯಕತ್ವ, ಜವಾಬ್ದಾರಿ ಹೊರುವ ಮತ್ತು ಸ್ವಾತಂತ್ರವನ್ನು ಸದುಪಯೋಗ ಮಾಡಿಕೊಳ್ಳುವ ಗುಣಗಳನ್ನು ಕಲಿಯಲು ಅವಕಾಶವಿರಬೇಕು.

**ಮಾನಸಿಕ ಶಿಕ್ಷಣ :** ಅವಧಾನ ವಿಚಾರಗಳ ಸಂಘಟನೆ, ವಿಚಾರಗಳ ವರ್ಗೀಕರಣ, ವಿಚಾರಗಳ ಸಂಶ್ಲೇಷಣೆ ಮುಂತಾದವುಗಳಿಗೆ ಮಾನಸಿಕ ಶಿಕ್ಷಣ ಅಗತ್ಯವಾಗುವದು. ಅದಕ್ಕಾಗಿ ಹಂತ ಹಂತವಾಗಿ ಭಾಷೆಗಳನ್ನು ಅನ್ವಯಿಕ ಹಾಗೂ ಶುದ್ಧ ವಿಜ್ಞಾನಗಳನ್ನು , ಸಾಮಾಜಿಕ ವಿಜ್ಞಾನಗಳನ್ನು ಮತ್ತು ಗಣಿತವನ್ನು ಪಠ್ಯದಲ್ಲಿ ಸೇರಿಸಬೇಕು. ದೃಕ್–ಶ್ರವಣೋಪಕರಣ, ಪರಾಮರ್ಶನ ಗ್ರಂಥ ಮತ್ತು ಗ್ರಂಥಾಲಯದ ಸೌಲಭ್ಯಗಳನ್ನು ಒದಗಿಸುವ ಮೂಲಕವು ಶಿಕ್ಷಣ ನೀಡಬಹುದಾಗಿದೆ.

**ಅರವಿಲ್ಲೊ** (Arovillo)

ಅರವಿಲ್ಲೊ ವಿದ್ವನ್‌ಮಣಿಗಳ ಕೇಂದ್ರವಾಗಿದೆ. ಅದನ್ನು ''ವಿಶ್ವಸಂಸ್ಕೃತಿಯ ನಗರ''ಎಂದು ಕರೆಯುವರು. ಇಂದು ಇದು ಜಾಗತಿಕ ವಿಶ್ವ ವಿದ್ಯಾಲಯದ ಕೇಂದ್ರವಾಗಿದೆ. ಈ ಕೇಂದ್ರವನ್ನು ಶ್ರೀ ಮಾತೆಯವರು 1968ರ ಫೆಬ್ರುವರಿ 28ರಂದು ಪ್ರಾರಂಭಿಸಿದರು. ಅವರೇ ಹೇಳುವಂತೆ 'ಅರೋ' ಎಂದರೆ ಬೆಳಗಿಸು, ಪ್ರಜ್ವಲಿಸು ಎಂತಲೂ 'ವಿಲೆ' ಎಂದರೆ ನಗರ ಎಂದಾಗುತ್ತದೆ. ಆದ ಕಾರಣವೇ ಇದನ್ನು 'ಭವಿಷ್ಯದ ನಗರ' ಎಂದು ಕರೆಯಲಾಗಿದೆ. 'ರೋಜರ್ ವಿಂಗರ್' ಎಂಬ ಫ್ರೆಂಚ್ ವಾಸ್ತುಶಿಲ್ಪಜ್ಞನ





ಕಲ್ಪನೆಯ ಮೂಲಕ ವಿನ್ಯಾಸಗೊಂಡಿದೆ. ಇಲ್ಲಿಯ ಶಿಕ್ಷಣ ಪದ್ಧತಿ 'ಸ್ವತಂತ್ರ ಪ್ರಗತಿ ಪದ್ಧತಿ' ಎಂದು ಪ್ರಸಿದ್ಧಿಪಡೆದಿದೆ. 'ನ್ಯೂಸ್ಕೂಲ'ನಿಂದ ಆರಂಭವಾಗುವ ಶಿಕ್ಷಣ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯದವರೆಗೂ ವ್ಯಾಪಿಸಿದೆ.

ಅರವಿಲ್ಲೊದಲ್ಲಿ ಮಾತು ಬಾರದ ಬಾಲಕನಿಂದ ಹಿಡಿದು ಇಳಿವಯಸ್ಸಿನ ಮುದುಕರವರೆಗೂ ಶಿಕ್ಷಣ ನೀಡಲಾಗುವದು. ಮಾನವ ಕುಲದ ಏಕತೆಯನ್ನು ಸಾಧಿಸುವದು ಈ ವಿದ್ಯಾಲಯದ ಗುರಿಯಾಗಿದೆ. ಅರವಿಲ್ಲೊದಲ್ಲಿ ಕೈಗೊಳ್ಳುತ್ತಿರುವ ಕಾರ್ಯಗಳಿಗೆ ಭಾರತ ಸರಕಾರವಷ್ಟೇ ಅಲ್ಲ, ಯುನೆಸ್ಕೋ ಸಹ ತನ್ನ ಸಹಾಯ ಸಹಕಾರ ನೀಡುತ್ತಲಿದೆ. ಆ ವಿಶ್ವವಿದ್ಯಾಲಯದ ಸದಸ್ಯತ್ವವನ್ನು 120 ರಾಷ್ಟ್ರಗಳು ಪಡೆದುಕೊಂಡಿವೆ. ಈ ವಿಶ್ವವಿದ್ಯಾಲಯವನ್ನು ಇನ್ನೂ ಸದೃಢಪಡಿಸಿದರೆ ವಿಶ್ವಶಾಂತಿ, ವಿಶ್ವ ಭ್ರಾತೃತ್ವದ ದಿನಗಳು ದೂರವಿಲ್ಲವೆಂದೆನಿಸುತ್ತವೆ.

**ಅರವಿಂದರ ನಿಯತಕಾಲಿಕೆಗಳು** (Magazines of Arvindo)

1. ಒಂದೇ ಮಾತರಂ
2. ಕರ್ಮಯೋಗ
3. ಧರ್ಮ

**ಪ್ರಮುಖ ಕೃತಿಗಳು** (Important Books of Aravindo)

1895 - Songs of Mitrilla and Other Poems

1896 - Vikramarvashiya

1918 - The Ideal of Karmayogin

1919 - The Ideal of Human Unity

1920 - War and self Determination

1921 - TheYoga and its Objects Love & death

1924 - Mother

1935 - Lights on Yoga

1939 - The Life Devine

1942 - Collected Poems & Plays

**ಆಧ್ಯಾತ್ಮಿಕ ಮತ್ತು ಆತ್ಮ ಸಂಬಂಧಿ ಶಿಕ್ಷಣ :** ಶೈಕ್ಷಣಿಕ ಚಟುವಟಿಕೆಗಳ ಕೇಂದ್ರ ಒಂದು ಆಧ್ಯಾತ್ಮಿಕ ಅಂಶದಿಂದೊಡಗೂಡಿರಬೇಕು. ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ, ಮುಂತಾದ ಎಲ್ಲ ಚಟುವಟಿಕೆಗಳು ಆಧ್ಯಾತ್ಮಿಕ ತಳಹದಿಯನ್ನು ಹೊಂದಿರಬೇಕು. ಆತ್ಮಸಂಬಂಧಿಯಾದ ದೈವೀಗುಣಗಳನ್ನು ಮತ್ತು ಮೌಲ್ಯಗಳನ್ನು ವಿವರಿಸುವಲ್ಲಿ ಶಿಕ್ಷಣವು ತನ್ನ ಗುರಿಯನ್ನು ಕಾಣಬೇಕು.

**ಅಂತರ್-ರಾಷ್ಟ್ರೀಯ ಶಿಕ್ಷಣ :** ಅರವಿಂದರ ಪಠ್ಯಕ್ರಮದ ವೈಶಿಷ್ಟ್ಯ ಇದಾಗಿದೆ. ಅವರ ಆಶ್ರಮಯದಲ್ಲಿ ಜಗತ್ತಿನ ವಿವಿಧ ದೇಶಗಳಿಂದ ಆಗಮಿಸಿದ ವಿದ್ಯಾರ್ಥಿಗಳಿದ್ದರು. ಅವರೆಲ್ಲರೂ ವಿವಿಧ ಜನಾಂಗಗಳಿಗೆ, ವಿವಿಧ ಧರ್ಮಗಳಿಗೆ ಮತ್ತು ವಿವಿಧ ಸಂಸ್ಕೃತಿಗಳಿಗೆ ಸೇರಿದವರಾಗಿದ್ದರು ಅವರೆಲ್ಲರಿಗೂ ಶಿಕ್ಷಣ ನೀಡುವದಕ್ಕಾಗಿ ಸಮಸ್ತಸಂಸ್ಕೃತಿಗಳನ್ನು ಬಿಂಬಿಸಲು ಅರವಿಂದರು ಯತ್ನಿಸಿದರು.

**ಬೋಧನಾ ಕ್ರಮ** (Methods of Teaching)

ಶಿಕ್ಷಕನು ತನ್ನ ಆಶೆ-ಆಕಾಂಕ್ಷೆಗಳ ಪ್ರಕಾರ ಮಗುವಿಗೆ ಶಿಕ್ಷಣ ನೀಡದೇ ಮಗುವಿನ ಆಸಕ್ತಿ ಹಾಗೂ ಅಭಿರುಚಿಗಳಿಗನುಗುಣವಾಗಿ ಕಲಿಸಬೇಕು. ಪ್ರತಿಯೊರ್ವ ಬಾಲಕನಲ್ಲಿ ಸ್ವಧರ್ಮ ಎಂಬುದೊಂದು ಇರುವದು. ಶಿಕ್ಷಕನ ಬೋಧನಾ ಕ್ರಮವು ಆ ಸ್ವಧರ್ಮಕ್ಕೆ ಪ್ರತಿಕೂಲವಾಗಿರಬಾರದು. ಪರಿಸರವನ್ನು ಬಾಲಕನ ವಿಕಾಸಕ್ಕೆ ಪೂರಕವಾಗುವಂತೆ ಬದಲಿಸಲು ಬರುವದು. ಆದ್ದರಿಂದ ಬಾಲಕನ ಅನುವಂಶೀಯತೆಯನ್ನು ಬೋಧನಾ ಕ್ರಮದ ಅಡಿಪಾಯವನ್ನಾಗಿ ಮಾಡಿಕೊಳ್ಳಬೇಕು. ಅವನ ಆಸೆ ಆಸಕ್ತಿಗಳಿಗೆ ಅನುಕೂಲವಾಗುವ ಪರಿಸರವನ್ನು ನಿರ್ಮಿಸಬೇಕು. ಈ ರೀತಿ ಮಾಡಿದರೆ ಬಾಲಕನು ತನ್ನ ಭವಿಷ್ಯದ ಮಾರ್ಗವನ್ನು ತಾನೇ ನಿರ್ಮಿಸಿಕೊಳ್ಳುವನು. ಅರವಿಂದರ ದೃಷ್ಟಿಯಲ್ಲಿ ಭೂತಕಾಲವು ತಳಹದಿ, ವರ್ತಮಾನ ಕಾಲವು ಮತ್ತು ಭವಿಷತ್ ಕಾಲವು ಧ್ಯೇಯವಾಗಿವೆ. ಬಾಲಕನಿಗೆ ಮಾತೃಭಾಷೆಯ ಮಾಧ್ಯಮದ ಮೂಲಕವೇ ಬೋಧಿಸಬೇಕು. ಮಾತೃಭಾಷೆಯಲ್ಲಿ ಪ್ರಭುತ್ವ ಬರುವಂತೆ ಮಾರ್ಗದರ್ಶನ ಮಾಡಬೇಕು. ಬೋಧನೆಯ ಸಾಮಿಪ್ಯದಿಂದ ದೂರದೆಡೆಗೆ ಸಾಗಬೇಕು. ಶಿಕ್ಷಕನು ಪ್ರತಿಯೋರ್ವ ಬಾಲಕರನ್ನು ಸರಿಸಮಾನರೆಂದು ತಿಳಿಯಬೇಕು.


**ನೈತಿಕ ಶಿಕ್ಷಣ** (Moral Education)

ವ್ಯಕ್ತಿಯ ಪರಿಪೂರ್ಣ ವಿಕಾಸದಲ್ಲಿ ನೈತಿಕತೆಗೆ ಬಹಳ ಮಹತ್ವವಿದೆ. ಮಾನವರಲ್ಲಿ ದೈವೀಗುಣಗಳು ಆವಿಷ್ಕಾರವಾಗಬೇಕಾದರೆ ಅವನ ಹೃದಯವು ಮೃದುವಾಗದೇ, ಭಾವನೆಗಳು ನಿರ್ಮಲವಾಗದೇ ಕೇವಲ ಬೌದ್ಧಿಕ ವಿಕಾಸವಾದರೆ ಅದು ವ್ಯರ್ಥವಾಗಿ ಪರಿಣಮಿಸುವದು. ನೈತಿಕತೆಯ ಸಂಬಂಧವನ್ನು ಇಟ್ಟುಕೊಳ್ಳದ ಬೌದ್ಧಿಕ ವಿಕಾಸವು ಮಾನವನ ಪ್ರಗತಿಗೆ ಮಾರಕವಾಗುವದು. ಆದ್ದರಿಂದ ಶಿಕ್ಷಣದಲ್ಲಿ ನೈತಿಕತೆಗೂ ಪ್ರಾಧಾನ್ಯ ನೀಡಬೇಕು.

ನೈತಿಕ ಶಿಕ್ಷಣವನ್ನು ನೀಡುವದಕ್ಕಾಗಿ ಹಿಂದಿನ ಗುರುಕುಲ ಪದ್ಧತಿಯನ್ನು ಅರವಿಂದರು ಬೆಂಬಲಿಸಿದರು. ನೈತಿಕ ಶಿಕ್ಷಣವನ್ನು ವಿದ್ಯಾರ್ಥಿಗಳ ಮೇಲೆ ಬಲವಂತ ಮಾಡುವಂತಿಲ್ಲ, ಶಿಕ್ಷಕರ ನಡೆ-ನುಡಿ, ವ್ಯವಹಾರ-ನೀತಿ ಮುಂತಾದವುಗಳು ವಿದ್ಯಾರ್ಥಿಗಳಿಗೆ ಪ್ರಚೋದನೆ ನೀಡಬೇಕು. ನೈತಿಕ ಶಿಕ್ಷಣವನ್ನು ಶಿಕ್ಷಕನು ತನ್ನ ಸದ್ವರ್ತನೆಯಿಂದಲೇ ಮಕ್ಕಳಿಗೆ ಕಲಿಸಬೇಕು.

**ಅರವಿಂದರ ಆಶ್ರಮ**

ಅರವಿಂದರು ಪಾಂಡಿಚೇರಿಯಲ್ಲಿ ಒಂದು ಆಶ್ರಮವನ್ನು ಕಟ್ಟಿದರು.



ಸಮುದ್ರ ತೀರದಲ್ಲಿರುವ ಈ ಆಶ್ರಮವು ಇಂದು ಜಗತ್ತಿನ ಶಾಂತಿ ಕೇಂದ್ರವಾಗಿದೆ. ವ್ಯಕ್ತಿ-ವ್ಯಕ್ತಿ ಸಮಾಜ-ಸಮಾಜ, ರಾಷ್ಟ್ರ-ರಾಷ್ಟ್ರಗಳ ನಡುವೆ ಸಾಮರಸ್ಯ ನಿರ್ಮಿಸುವ ಯಾತ್ರಾಸ್ಥಳವಾಗಿದೆ. ಅರವಿಂದರ ಸಂದೇಶಗಳನ್ನು ಪ್ರಪಂಚದಾದ್ಯಂತ ಬಿತ್ತರಿಸುವ ಕೇಂದ್ರವಾಗಿದೆ. ಆತ್ಮ ಸಾಕ್ಷಾತ್ಕಾರಗಳ ಮಾಡಿಕೊಳ್ಳಬಯಸುವವರಿಗೆ ಪುಣ್ಯಸ್ಥಳವಾಗಿದೆ. ಇಲ್ಲಿ ಪ್ರಶಾಂತ ವಾತಾವರಣವಿದ್ದು ಮನುಷ್ಯನು ಭೌತಿಕ ತಾಪಗಳಿಂದ ದೂರವಿರ ಬಹುದಾಗಿದೆ. ಇಲ್ಲಿಯ ಸಾಧಕರು ಆಧರಿಸುವರಲ್ಲಿ ಅದು ಪ್ರತಿಪಾದಿಸಿದ ಆದರ್ಶ ಜೀವನವನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಅವರ ಚಟುವಟಿಕೆ, ಕಾರ್ಯ ಮತ್ತು ಕೃತಿಗಳಲ್ಲಿ ಕರ್ಮಯೋಗದ ಕೌಶಲ್ಯ ಕಂಡುಬರುವದು. ಆಶ್ರಮದಲ್ಲಿ ಯಾವ ತಾರತಮ್ಯಕ್ಕೂ ಅವಕಾಶವಿಲ್ಲ. ಪ್ರತಿಯೊಬ್ಬರು ತಮ್ಮ ತಮ್ಮ ಶಕ್ತಿ-ಸಾಮರ್ಥ್ಯಗಳಗನುಗುಣವಾಗಿ ವಿವಿಧ ಕಾರ್ಯಗಳನ್ನು ಮಾಡುತ್ತಾರೆ. ಪರಸ್ಪರ ಪ್ರೀತಿ, ಸಹಾಯ-ಸಹಕಾರ, ಭಯ, ಅನುಕಂಪ, ವಾತ್ಸಲ್ಯ ತೋರುವದನ್ನು ಇಲ್ಲಿ ಕಾಣಬಹುದಾಗಿದೆ. ಜೀವನದಲ್ಲಿ ಶಾಂತಿ ನೆಮ್ಮದಿಗಳಿಂದ ಬದುಕಬೇಕೆಂದು ಅಪೇಕ್ಷಿಸಿದವನಿಗೆ ಇದೊಂದು ಆಕರ್ಷಣೀಯ ಕೇಂದ್ರವಾಗಿದೆ.

**ಉಪಸಂಹಾರ**

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಪ್ರಸ್ತುತ ಪಠ್ಯಕ್ರಮ ಹಾಗೂ ಬೋಧನಾಕ್ರಮದಲ್ಲಿ ತಾತ್ವಿಕ ಅಂಶಗಳಿಗೆ ಪ್ರಾಶಸ್ತ್ಯ ಕಡಿಮೆಯಾಗಿ ಭೌತಿಕ ಹಾಗೂ ಬೌದ್ಧಿಕ ಅಂಶಗಳಿಗೆ ಪ್ರಾಶಸ್ತ್ಯ ಹೆಚ್ಚಾಗಿರುವದು ವಿಷಾದನೀಯ ಸಂಗತಿ. ಮುಂಬರುವ ದಿನಗಳಲ್ಲಾದರೂ ಶಿಕ್ಷಣ ತಜ್ಞರ ತಾತ್ವಿಕ ವಿಚಾರಗಳನ್ನು ಪಠ್ಯಕ್ರಮ ರಚನೆ ಸಮಯದಲ್ಲಿ ಗಣನೆಗೆ ತೆಗೆದುಕೊಳ್ಳಲಿ ಎಂದು ಆರಿಸೋಣ.

**ಆಕರ ಗ್ರಂಥಗಳು**


- Murty S. K. : (2004) "Phiolosophical and sociological foundations of Education vinod publication ludhiana.
- ಜಂತಲಿ ಆರ್. ಟಿ. : ''ಶೈಕ್ಷಣಿಕ ತತ್ವಶಾಸ್ತ್ರ ಹಾಗೂ ಸಮಾಜ ಶಾಸ್ತ್ರ ಬುನಾದಿಗಳು ಹಾಗೂ ಸಿದ್ಧಾಂತಗಳು'' ಭಾರತ ಪ್ರಕಾಶನ ಗದಗ.
- ಕೊಂಗವಾಡ ಎನ್. ಬಿ. (2008) : ''ಶಿಕ್ಷಣದ ತಾತ್ವಿಕ ಹಾಗೂ ಸಾಮಾಜಿಕ ಬುನಾದಿಗಳು'' ವಿದ್ಯಾನಿಧಿ ಪ್ರಕಾಶನ ಗದಗ ಪು. ಸಂ. 241-255
- ಯಾದವಾಡ ಎಸ್. ಬಿ. (2002) : ''ಶಿಕ್ಷಣದ ತಾತ್ವಿಕ ಹಾಗೂ ಸಾಮಾಜಿಕ ತಳಹದಿಗಳು'' ವಿದ್ಯಾನಿಧಿ ಪ್ರಕಾಶನ ಗದಗ. ಪು. ಸಂ. 67-73.

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

**ಕನ್ನಡ ಪತ್ರಿಕೆ :**

| | |
|---|---|
| ಬಿಡಿ ಪತ್ರಿಕೆ | 75=00 |
| ವಾರ್ಷಿಕ ಚಂದಾ | 300=00 |
| ಅಜೀವ ಸದಸ್ಯತ್ವ | 3000=00 |

**ಇಂಗ್ಲಿಷ ಪತ್ರಿಕೆ :**

| | |
|---|---|
| ಬಿಡಿ ಪತ್ರಿಕೆ | 125=00 |
| ವಾರ್ಷಿಕ ಚಂದಾ | 500=00 |
| ಅಜೀವ ಸದಸ್ಯತ್ವ | 5000=00 |

ಡಿ.ಡಿ. ಕಳುಹಿಸಬೇಕಾದ ವಿಳಾಸ :


**ಶಿಕ್ಷಣ ಸೌಧ**

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

ವಿದ್ಯಾನಿಧಿ ಪ್ರಕಾಶನ

ಸ್ಟೇಶನ್ ರೋಡ, ಮಹೇಂದ್ರಕರ ಸರ್ಕಲ್ ಹತ್ತಿರ

ಗದಗ – 582101. ಕರ್ನಾಟಕ ರಾಜ್ಯ

ಫೋನ್ : 08372–237527

Email : shikshansoudha@gmail.com


ಇಲ್ಲಿ ಕತ್ತರಿಸಿ.

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

## ನೂತನ ಚಂದಾದಾರರ ನೊಂದಣಿ ಪ್ರತಿ

Date :

Name : ______________________

Designation : ______________________

______________________

Institution : ______________________

Address : ______________________

______________________

______________________

______________________

Phone Cell Nos.: ______________________

Fax No. : ______________________

e-mail : ______________________

Magazine
to be sent to : ______________________

______________________

______________________

D.D. No. : ______________________

Dated : ______________________

Amount : ______________________

Drawn on : ______________________

*Institution's Signature*